ಅಧ್ಯಕ್ಷರು : ಪ್ರಸ್ತಾವ ಏನೆಂದರೆ:
"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಪಟ್ಟು ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಪಟ್ಟು ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, 2006ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:
"2006ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ2) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಮಾನ್ಯ ಪ್ರಕಾಶ್ ಅವರೇ, ಈಗ ಆಯವ್ಯಯದ ಮೇಲೆ ಚರ್ಚೆ ಪ್ರಾರಂಭ ಮಾಡಿ.

4. ವಿತ್ತೀಯ ಕಾರ್ಯಕಲಾಪ

2006-07ನೇ ಸಾಲಿನ ಆಯವ್ಯಯ ಮೇಲಿನ ಚರ್ಚೆ (ಮುಂದುವರಿದುದ್ದು)

ಶ್ರೀ ಎಂ.ಪಿ. ಪ್ರಕಾಶ್ (ಹೂವಿನ ಹಡಗಲಿ) : ಸನ್ಮಾನ್ಯ ಅಧ್ಯಕ್ಷರೆ, 2006-ಹಾಗೂ 2007ರ ಆಯವ್ಯಯವನ್ನು ಮಾನ್ಯ ಹಣಕಾಸಿನ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಇದು ನಿಜವಾಗಿಯೂ ಕೂಡ ಒಂದು ಹೊಸ ಸರ್ಕಾರದ ಉತ್ತಮವಾಗಿರತಕ್ಕಂಥ ಬಜೆಟ್ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ಮೀಸೆ ಬಿಟ್ಟಿದ್ದೀರಲ್ಲಾ, ಯಾರನ್ನಾದರೂ ಚುಡಾಯಿಸುವುದಕ್ಕೆ ಹೊರಟಿದ್ದೀರಾ? ಅಧ್ಯಕ್ಷರಾದ ಮೇಲೆ ಚುಡಾಯಿಸಲು ಹೊರಟಿದ್ದೀರಾ ಎಂಬುದು ನಮಗೆ ಅರ್ಥ ಆಗಲಿಲ್ಲ.

ಶ್ರೀ ಬಿ. ಶಿವರಾಮು : ನಾವೂ ಸಹ ಅದನ್ನೇ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಪ್ರಕಾಶ್ ಅವರು ಮೀಸೆ ಬಿಟ್ಟು ಬಿಟ್ಟರಲ್ಲಾ. ಏನು ವಿಶೇಷ ಎಂದು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಮೇಲೆ ಯುದ್ಧಕ್ಕೆ ಕಟ್ಟಿದ ಹಾಗೆ ಆಯಿತಲ್ಲಾ.

ಶ್ರೀ ಕೆ. ಶ್ರೀನಿವಾಸಗೌಡ : ಕೆಳಗಡೆ ಬಿದ್ದರೂ ಕೂಡ ಮೀಸೆ ಮಣ್ಣಾಗಲಿಲ್ಲ. ಈ ರೀತಿ ನಮ್ಮ ಕಡೆ ಗಾದೆ ಇದೆ. ಕೆಳಗಡೆ ಬಿದ್ದರೂ ಕೂಡ ಮೀಸೆ ಮಣ್ಣಾಗಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲಾ ಮುಗಿದ ಮೇಲೆ ನೀವು ಮೀಸೆ ಬಿಟ್ಟುಕೊಂಡಿದ್ದೀರಲ್ಲಾ ಅಂತ ನಮಗೆ ಗಾಬರಿ ಆಗುತ್ತಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಪಕ್ಷದ ಅಧ್ಯಕ್ಷರಾದ ಮೇಲೆ ನಾವು ಅವರಿಗೆ ಆ ರೀತಿ ಮೀಸೆ ಬಿಡಬೇಕು ಎಂದು ಹೇಳಿ ಮೀಸೆ ಬಿಡಿಸಿದ್ದೇವೆ. ಮೀಸೆ ಬಿಡುವುದಕ್ಕೂ ಪರವಾನಗಿ ತೆಗೆದುಕೊಳ್ಳಬೇಕಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ಹೇಳಬೇಕು ಸಾರ್, ಅದು ಏನು ಸೀಕ್ರೆಸಿ ಇದೆ ಎಂದು ಹೇಳಲಿ. ಮೀಸೆ ಮಣ್ಣಾಗಲಿಲ್ಲ ಎಂದು ಹೇಳುವುದು ಪ್ರಚಾರಕ್ಕಾ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಮಾಧುಸ್ವಾಮಿಯವರೆ, ನನಗೆ ಮೀಸೆ ತಿರುವುದಕ್ಕೆ ಬರುವುದಿಲ್ಲ. ಆದ್ದರಿಂದ ಮೀಸೆ ಬಿಟ್ಟು ನಾನು ಯಾರ ಮೇಲೂ ಯುದ್ಧಕ್ಕೆ ಹೋಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಮೀಸೆ ಬಿಡುವುದಿಲ್ಲ ಎಂಬುದು ಗೊತ್ತು ಯುದ್ಧ ಯಾರ ಮೇಲೆ ಎಂದು ಗೊತ್ತಾಗಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅವರನ್ನು ನೋಡಿ ಪಾಪ ಅನ್ನಿಸಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ವಯಸ್ಸಿನಲ್ಲಿ ಏನು ಮೀಸೆ ಬಿಡುವುದು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇದು ಹೊಸ ಅಧ್ಯಾಯ.

ಶ್ರೀ ವಾಟಾಳ್ ನಾಗರಾಜ್ : ಛೇ ಛೇ ಯಾವತ್ತು ನೀವು ಮೀಸೆ ಬಿಡಬೇಕಾಗಿತ್ತು ಮಾನ್ಯ ಪ್ರಕಾಶ್, ಅವತ್ತು ಬಿಟ್ಟಿದ್ದರೆ ಅದಕ್ಕೆ ಒಂದು ಗತ್ತು ಇತ್ತು. ಆಮೇಲೆ ನಾನು ರಾತ್ರಿ ಈ ಟಿ.ವಿ.ಯಲ್ಲಿ ನೋಡುತ್ತಿದ್ದೆ. ಇವರು ಯಾವಾಗ ನಾಟಕದ ಉಪಾಧ್ಯಾಯರು ಆದರು ಎಂದು ನೋಡುತ್ತಿದ್ದೆ. ಹಳ್ಳಿಯ ಕಡೆ ಲಗ್ಗಾರ ಮುನಿ ನಡೆಯುತ್ತದೆ. ಪಿಟಿ ಮಾಸ್ಟರ್. ಅದರಲ್ಲಿ ಉಪಾಧ್ಯಾಯರು-ಇರುತ್ತಾರೆ. ಅವರು ಪಾತ್ರ ಮಾಡುವವರನ್ನೆಲ್ಲಾ ಇವರು ಕುಳಿತುಕೊಂಡು ಹಾರ್ಮೋನಿಯಂ ಮೇಸ್ಟರ ತರಹ ಒಬ್ಬರಾದ ಮೇಲೆ ಒಬ್ಬರನ್ನು ಕರೆಯುತ್ತಿದ್ದರು. ನಾಗರತ್ನಮ್ಮ ಬಂದರು, ಬಳ್ಳಾರಿಯವರು ಬಂದರು. ನಾನು ಎಲ್ಲಾ ನೋಡುತ್ತಿದ್ದೆ.

(ಉಪಾಧ್ಯಕ್ಷ ಶ್ರೀಎನ್.ವೈ ಗೋಪಾಲಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಕಾಶ್‌ರವರಿಗೆ ಏನು ಈ ಪರಿಸ್ಥಿತಿ ಬಂದುಬಿಡ್ತಲ್ಲಾ! ಅವರು ಈ ರಾಜ್ಯದಲ್ಲಿ ಏನೆಲ್ಲಾ ಆಗಬೇಕಾಗಿತ್ತು ಮುಖ್ಯಮಂತ್ರಿಯಾಗಬೇಕಾಗಿತ್ತು ಉಪಮುಖ್ಯಮಂತ್ರಿಯಾಗಿ 15 ದಿವಸವೂ ನೀವು ಉಳಿಯಲಿಲ್ಲ. ಇಲ್ಲಿ ಒಂದು ಭಾಷಣ ಮಾಡುವುದಕ್ಕಾಗಲಿಲ್ಲ. ನಮಗೆ ನೋವಾಗುತ್ತಿದೆ. ಉಪಮುಖ್ಯಮಂತ್ರಿಗಳಾಗಿ 15 ದಿವಸವೂ ನೀವು ಉಳಿಯಲಿಲ್ಲ, ತಮ್ಮ ಭಾಷಣವೂ ಇಲ್ಲಿನ ಕಡತಕ್ಕೆ ಹೋಗಲಿಲ್ಲ ನನಗನ್ನಿಸುತ್ತದೆಃ ನಿಮ್ಮ ಪರಿಸ್ಥಿತಿ ಏನಾಯಿತು? ಏನು ನಿಮ್ಮ ಹಣೆಬರಹ? ನಾವು ಏನು ಮಾಡೋಣ? ನಾವು ಮತ್ತು ಮಾಧುಸ್ವಾಮಿಯುವರು ಅಷ್ಟೊತ್ತಿನಿಂದ ಮಾತನಾಡಿಕೊಳ್ಳುತ್ತಿದ್ದೆವು. ನನಗನ್ನಿಸುತ್ತದೆಃ ಎಂ.ಪಿ.ಪ್ರಕಾಶ್‌ರವರೇ, ಏನಿದು? ಏನು ಇತಿಹಾಸ? ಜೆ.ಹೆಚ್.ಪಟೇಲ್ ನನಗೆ ಹೇಳುತ್ತಿದ್ದರು ವಾಟಾಳ್ ನಾಗರಾಜ್‌ರವರೆ, ನಮ್ಮಲ್ಲಿ ಪಾಂಡಿತ್ಯ ಇರತಕ್ಕಂಥವರು, ಪ್ರೌಢಿಮೆ ಇರತಕ್ಕಂಥವರು ಯಾರಾದರೂ ಇದ್ದರೆ, ಅದು ಪ್ರಕಾಶ್ ಮಾತ್ರ ಎಂದು. ಮತ್ತು ಅವರು ಯಾವಾಗಲೂ ಓದತಕ್ಕಂಥವರು ಓದತಕ್ಕಂಥ

ವ್ಯಕ್ತಿತ್ವ ಅವರದು. ಪ್ರತಿಯೊಂದು ಇರತಕ್ಕಂಥವರು. ನಾನು ಅವೊತ್ತು ಸಂತ ಶಿಶುನಾಳ ಷರೀಫ್ ಬಗ್ಗೆ ಮಾತನಾಡಿದಾಗ, ನನಗೆ ಗೊತ್ತು .....ಸೋರುತಿಹುದು ಮನೆಯ ಮಾಳಿಗೆ.....ಆಗ ಎರಡನೇ ಸಲ ನೀವು ಕೊಟ್ಟಿರಿ. ನಾನು ಅದನ್ನೇ ಹೇಳಿದಾಗ, ಮೂರು ಗಂಟೆ ಮೇಲೆ ಬಂದಾಗ, ಪುಸ್ತಕ ತೆಗೆದು ಕೊಟ್ಟು, ಓದಿ, ಇಷ್ಟೆಲ್ಲಾ ಮಾಡಿ ಈಗ.........ನಿಮ್ಮ ಮುಂದಿನ ಪಯಣವೇನು? ಏನು ಹಣೆಬರಹ? ಇದು ಸರಿ ಇಲ್ಲ. ನನಗಂತೂ ನೋವಾಗಿದೆ. ನಿಮ್ಮ ಬಗ್ಗೆ ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇವೆ. ದಯವಿಟ್ಟು ಈಗ ಮೀಸೆ ಬಿಟ್ಟಿರುವುದಕ್ಕೆ ಗಡ್ಡ ಬಿಡಿ. ನಾವು ಸಲಹೆ ಮಾಡುತ್ತೇವೆ.

ಉಪಾಧ್ಯಕ್ಷರು: ಈಗ ಅವರು ಮೀಸೆ ಬಿಟ್ಟಿರುವುದಕ್ಕೆ ಕಾರಣವನ್ನು ತಮ್ಮ ಭಾಷಣದ ಕೊನೆಯಲ್ಲಿ ಹೇಳುತ್ತಾರೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅದನ್ನೂ ಕೇಳುತ್ತೇವೆ. ಜೊತೆಗೆ, ಅವರು ಗಡ್ಡವೊಂದನ್ನು ಬಿಟ್ಟರೆ, ನಾವು ಒಂದು ಮಠ ತಯಾರು ಮಾಡುತ್ತೇವೆ. ದಯಮಾಡಿ ತಾವು ಮಠಕ್ಕೆ ಬನ್ನಿ ನಾವು ನಿಮಗೆ ಶರಣು ಶರಣಾರ್ಥಿ ಇದನ್ನು ಪ್ರಾಮಾಣಿಕವಾಗಿ ಹೇಳುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ: ಇವರು ಎಲ್ಲಾ ರಾಜಕಾರಣಿಗಳನ್ನೂ ಮಠಕ್ಕೆ ಸೇರಿಸುವುದಕ್ಕೆ ಹೊರಟಿದ್ದಾರೆ. ನಿಮ್ಮನ್ನೂ ಸೇರಿಸಲು ಹೊರಟಿದ್ದಾರೆ. ದಯವಿಟ್ಟು ನೀವು ಇವರ ಮಾತಿಗೆ ಮಾನ್ಯತೆ ಕೊಡಬಾರದು ಸರ್, ನೀವು ಅವರೆದುರಿಗೆ ನೀವು ಮೀಸೆ ತಿರುವುಬೇಕು.

ಒಬ್ಬ ಮಾನ್ಯ ಸದಸ್ಯರು: ವಾಟಾಳ್ ನಾಗರಾಜ್‌ರವರು ಎಲ್ಲರನ್ನೂ ಮಠಕ್ಕೆ ಕಳುಹಿಸಿ ಅವರೊಬ್ಬರೇ ಇರಬೇಕೆಂದೇ?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಉಪಧ್ಯಕ್ಷರೆ, ಇಂಗ್ಲೀಷ್‌ನಲ್ಲಿ ಒಂದು ಗಾದೆ ಮಾತಿದೆ. ಬಹುಶಃ, ಜೀಸಸ್ ಹೇಳಿರುವ ಮಾತಿರಬಹುದು "Oh God, save me from my friends, I will take care of my enemies" ಎಂದು ಬಹಳ ಜನ ನಮ್ಮ ಸ್ನೇಹಿತರು ನನ್ನ ಮೀಸೆ, ಗಡ್ಡದ ಮೇಲೆ ಮಾತನಾಡುತ್ತಿದ್ದಾರೆ, ಪಾಟೀಲ್ ಪುಟ್ಟಪ್ಪನವರು ಒಮ್ಮೆ ರಾಮಕೃಷ್ಣ ಹೆಗಡೆಯವರಿಗೆ ಈ ಮಾತನ್ನು ಹೇಳಿದರು. ನಮ್ಮ ಜನತಾ ಪಕ್ಷದಲ್ಲಿ ಒಮ್ಮೆ ಭಿನ್ನಾಭಿಪ್ರಾಯ ಬಂದಾಗ ಮೀಸೆಗಿಲ್ಲದ ಮರ್ಯಾದೆಯನ್ನು ಗಡ್ಡಕ್ಕೆ ಹೇಗೆ ಇಟ್ಟುಕೊಳ್ಳುತ್ತೀರಿ ಎಂದು ಹೇಳಿದರು. ಅದು ಬಸವರಾಜ ರಾಯರೆಡ್ಡಿಯವರಿಗೆ ಗೊತ್ತಿದೆ. ಆ ಮಾತನ್ನು ಪಾಟೀಲ್ ಪುಟ್ಟಪ್ಪನವರು ಹೇಳಿದ್ದು ಆದ್ದರಿಂದ, ಆ ಮೀಸೆ ತಿರುವುದಕ್ಕೆ ಬರುವುದಿಲ್ಲವೆಂಬುದು ನನಗೆ ಗೊತ್ತಿದೆ. ಅದು ಅವರಿಗೆಲ್ಲಾ ಗೊತ್ತಿದ್ದರೂ ನನಗೆ ಇಲ್ಲೊಂದು ಸ್ವಲ್ಪ ಗಾಯವಾಗಿ ಗುಳಿಗಳಾಗಿದ್ದವು. ಆದ್ದರಿಂದ, ಅದಕ್ಕೆ ಬ್ಲೇಡ್ ಆಡಿಸಬಾರದೆಂಬ ಕಾರಣಕ್ಕಾಗಿ ಮೀಸೆ ಬಿಟ್ಟೆ. ಆದರೆ ನಿಮಗೆಲ್ಲರಿಗೂ ಅದರಿಂದ ಬಹಳ ತೊಂದರೆಯಾಗುತ್ತಿರುವುದರಿಂದ ನಾನು ನಾಳೆಯೇ ಆ ಮೀಸೆಯನ್ನು ಬೋಳಿಸುತ್ತೇನೆ.

(ಸದನದಲ್ಲಿ ನಗು)

ಶ್ರೀ ಬಿ.ಶಿವರಾಮು: ಮೀಸೆಗಿಲ್ಲದ ಗೌರವ ಗಡ್ಡಕ್ಕೆ ಏಕೆ ಎಂದು ಈಗ ತಾವೇ ಹೇಳಿದ ಹಾಗೆ ಅದನ್ನು ತೆಗೆದುಬಿಡುವುದೇ ಒಳ್ಳೆಯದು. ನೀವು ನಮಗೆ ಚೆನ್ನಾಗಿಯೂ ಕಾಣುತ್ತೀರಿ, ಮತ್ತು ನಿಮ್ಮ ಬಗ್ಗೆ ಗೌರವವೂ ಹೆಚ್ಚುತ್ತದೆ.

ಶ್ರೀ ಬಿ.ಸಿ.ಪಾಟೀಲ್: ಉಪಾಧ್ಯಕ್ಷರೆ, ನಮ್ಮ ಪ್ರಕಾಶ್ ಸಾಹೇಬರ ಮೀಸೆಗೆ ಅಷ್ಟು ಗೌರವ ಸಿಕ್ಕಿರುವುದರಿಂದ ಅವರು ಮೀಸೆಯನ್ನು ಕಂಟಿನ್ಯೂ ಮಾಡುವುದೊಳ್ಳೆಯದು. ಮೀಸೆ ತೆಗೆಯಬೇಡಿ.

ಶ್ರೀ ಕೆ.ಶ್ರೀನಿವಾಸಗೌಡ ಕುಡವನಹಳ್ಳಿ: ಮೀಸೆ ಇರಬೇಕೇ ಬೇಡವೇ ಎಂಬ ಬಗ್ಗೆ ಮತಕ್ಕೆ ಹಾಕಿದರೆ ಲವಲಕೆಯಿಂದಾದರೂ ಆಗುತ್ತದೆ, ಚರ್ಚೆನೂ ಸಹ ಆಗಬಹುದು.

ಉಪಾಧ್ಯಕ್ಷರುಃ ಈಗ ಅವರೊಬ್ಬರ ಮೀಸೆ ಬಗ್ಗೆಯೇ ಅಥವಾ ಎಲ್ಲರದ್ದೇನಾ?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೆ, ಇತಿಹಾಸದಲ್ಲಿ ಕೂಡ Fredric, the great ಈ ತರಹದಲ್ಲಿ ಯೋಚನೆ ಮಾಡುತ್ತಾರೆ. ಆತ ಪರ್ಷಿಯಾದ ಒಬ್ಬ ದೊಡ್ಡ ಸಾಮ್ರಾಟ. ಇಂಗ್ಲೇಂಡ್‌ನಲ್ಲಿ ಇಷ್ಟೆಲ್ಲಾ ಪ್ರಗತಿಯಾಗುತ್ತಿದೆ, ನಮ್ಮಲ್ಲೇನೂ ಆಗುತ್ತಿಲ್ಲ. ನೀವೆಲ್ಲರೂ ಬಹಳವಾಗಿ ಗಡ್ಡ ಮೀಸೆ ಬಿಡುತ್ತಿರುವುದರಿಂದ ನಾವು ಗ್ರೋಥ್‌ನಲ್ಲಿ ಬಹಳ ಹಿಂದುಳಿದವರಾಗಿದ್ದೇವೆ. ಆದ್ದರಿಂದ, ನೀವು ಗಡ್ಡ, ಮೀಸೆ ಬೋಳಿಸಬೇಕೆಂದು ಆತ ಆಜ್ಞೆ ಮಾಡುತ್ತಾನೆ. ಆದರೆ ಯಾರೂ ಕೂಡ ಆ ಮಾತನ್ನು ಕೇಳುವುದಿಲ್ಲ ನಿಮಗೆಲ್ಲಾ ಗೊತ್ತಿದ್ದಂತೆ ಮಾರ್ಕ್ಸ್, ಫೆಡ್ರಿಕ್ ಏಂಜೆಲ್ಸ್ ಎಲ್ಲರೂ ಗಡ್ಡ ಮೀಸೆ ಬಿಡುತ್ತಿದ್ದರು. ಆದ್ದರಿಂದ, ಒಬ್ಬ ವ್ಯಕ್ತಿ ಯಾವ ರೀತಿ ಇರಬೇಕೆಂಬ ಬಗ್ಗೆ ಸರ್ಕಾರದವರಾದ ನಾವು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರೆ, ಬಿ.ಸಿ.ಪಾಟೀಲ್‌ರವರು ಹೇಳಿದಂತೆ, ಇದನ್ನು ಸಾಕುವುದು ಬಹಳ ಕಷ್ಟ ಏಕೆಂದರೆ, ಅವರಂತೆ ನಾವು ಮತ್ತೆ ಬಣ್ಣ ಹಚ್ಚಿಕೊಳ್ಳುವುದು ಬಹಳ ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ, ನಾವು ಬೋಳಿಸುವುದೇ ಒಳ್ಳೆಯದು.

ಶ್ರೀ ಬಿ.ಸಿ.ಪಾಟೀಲ್: ಸರ್, ಮೀಸೆಗೆ ಬಣ್ಣನೋ? ಅಥವಾ ಮುಖಕ್ಕೆ ಬಣ್ಣನೋ?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಬಹಳ ಒಳ್ಳೆಯ ಕಾರ್ಯಕ್ರಮವಿತ್ತು. ವಾಟಾಳ್ ನಾಗರಾಜ್‌ರವರು ನಿನ್ನೆ ರಾತ್ರಿ 11.30 ಗಂಟೆಗೆ ಅದನ್ನು ನೋಡಿರುವುದಾಗಿ ಹೇಳಿದರು. ಏಣಗಿ ಬಾಳಪ್ಪನವರಿಂದ ಹಿಡಿದು ಸುಭದ್ರಮ್ಮ ಮನ್ಸೂರು, ನಾಗರತ್ನಮ್ಮ ಅವರೆಲ್ಲರೂ ಬಹಳ ದೊಡ್ಡ ಕಲಾವಿದರು. ಆ ಕಲಾದ ಸಂಗೀತ ಪ್ರಧಾನವಾದ ನಾಟಕಗಳಲ್ಲಿ ಅವರು ಹಾಡುಗಳನ್ನು ಹೇಳುತ್ತಿದ್ದರು. ರಂಗಗೀತೆಗಳನ್ನು ಉಳಿಸಬೇಕೆಂಬ ಕಾರಣಕ್ಕಾಗಿಯೇ ಈ ಟಿವಿಯವರ ಒಂದು ಕಾರ್ಯಕ್ರಮದಲ್ಲಿ ನಾನು ಕಂಪೇರ್ ಮಾಡುತ್ತಿದ್ದೆ. ಅದು ನಮಗೆ ಖುಷಿ ಕೊಡುವಂಥ ಕಾರ್ಯಕ್ರಮ. ತಾವೂ ಕೂಡ ಅದನ್ನು ಒಪ್ಪಿಕೊಳ್ಳುತ್ತೀರಿ. ಅದು ರಾತ್ರಿ 11.30 ಗಂಟೆಗೆ ದೂರದರ್ಶನದಲ್ಲಿ ಪ್ರಸ್ತಾರವಾದ್ದರಿಂದ ಬಹಳಷ್ಟು ಜನರು ನೋಡಿರಲಿಕ್ಕಿಲ್ಲ. ಆದರೂ ತಾವು ಹಾಗೂ ಅನೇಕರು ನೋಡಿರುವುದಕ್ಕೆ ಧನ್ಯವಾದಗಳು. ಸನ್ಮಾನ್ಯ ಉಪಾಧ್ಯಕ್ಷರೆ, 2006–07ರ ಆಯವ್ಯಯವನ್ನು ಮಾನ್ಯ ಯಡಿಯೂರಪ್ಪನವರು ಏನು ಮಂಡಿಸಿದ್ದಾರೆ, ಇದು ಇತ್ತೀಚಿನ ದಿನಮಾನಗಳಲ್ಲಿ ಮಂಡಿಸಿರುವ ಒಂದು ಉತ್ತಮವಾದ ಆಯವ್ಯಯವೆಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಬಹಳ ಮುಖ್ಯವಾಗಿ ನಾವು ಪರಿಗಣಿಸಬೇಕಾಗಿರುವ ಒಂದು ಹೊಸ ವಿಧಾನವೇನೆಂದರೆ, gender in-equality ವಿಚಾರಗಳಲ್ಲಿ ಲಿಂಗಭೇದಿ ಸಂಬಂಧವಾಗಿರುವ ವಿಷಯವನ್ನು ಪ್ರಥಮಬಾರಿಗೆ ಅಮರ್ತ್ಯಸೇನ್‌ರವರು ಪ್ರಸ್ತಾಪಿಸುತ್ತಾರೆ. ನಮ್ಮಲ್ಲಿ ಹಿಂದುಳಿದ ಜನಾಂಗದವರಿಗೆ ಈ ವಿಚಾರಗಳನ್ನು ಪ್ರಸ್ತಾಪಿಸಿದರೂ ಯಾವುದೇ ಜಾತಿಯ ಹೆಣ್ಣುಮಕ್ಕಳೂ ಕೂಡ ಹಿಂದುಳಿದ ಜನಾಂಗಕ್ಕೆ

ಸೇರಿದಂತಹವರೇ. ಪುರುಷ ಪ್ರಧಾನವಾದ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಬಹಳ ತಾರತಮ್ಯ ನೀತಿ ಅನುಸರಿಸುತ್ತಾರೆನ್ನುವ ಕಾರಣಕ್ಕಾಗಿಯೇ ಅವರಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ಡಾಃ ರಾಮಮನೋಹರ ಲೋಹಿಯಾರವರು ಪ್ರಸ್ತಾಪಿಸುತ್ತಾರೆ. ಅವರು ಎಷ್ಟರವರೆಗೂ ಹೋಗುತ್ತಿದ್ದರೆಂದರೆ. All women are beautiful, some are more ಎಂದು ಹೇಳುತ್ತಿದ್ದರು. ಅಲ್ಲಿ ನಿಜವಾಗಿಯೂ ಕೂಡ ಪ್ರತಿಯೊಬ್ಬ ಸ್ತ್ರೀ ಕೂಡ ಸುಂದರಿ, ಆದರೆ ಕೆಲವರು ಹೆಚ್ಚು ಸುಂದರಿಯರಾಗಿರುತ್ತಾರೆಂಬ ಆ ತರಹದ ಒಂದು ಪರಿಕಲ್ಪನೆ ಇಟ್ಟುಕೊಂಡಿರುವ ಸಂದರ್ಭದಲ್ಲಿ ಈ ವರ್ಷ ನಮ್ಮ ಕರ್ನಾಟಕವೇ ಪ್ರಥಮಬಾರಿಗೆ Union Government ಅವರೂ ಕೂಡ ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ, ಇಲ್ಲವೆಂದಲ್ಲ. ಮಹಿಳೆಯರ ಸಬಲೀಕರಣಕ್ಕಾಗಿ ಆ ವಿಚಾರಗಳಿಗೆ ಸಂಬಂಧಪಟ್ಟಂತೆ ಸುಮಾರು 205 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಕೊಡತಕ್ಕಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. 640.7 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡುವುದರ ಮೂಲಕ, ಕಳೆದ ವರ್ಷ 439 ಕೋಟಿರೂಗಿಂತಲೂ ಹೆಚ್ಚಾಗುತ್ತದೆ. ಅಂದರೆ, 201.78 ಕೋಟಿ ರೂಪಾಯಿಗಳನ್ನು ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ಮತ್ತು ಅವರ ಅಭಿವೃದ್ಧಿಗೆ ಸಂಬಂಧಪಟ್ಟಿರತಕ್ಕಂಥಾದ್ದಕ್ಕೆ ಕೊಡುವುದರ ಮೂಲಕ ಒಂದು ಹೊಸ ಹೆಜ್ಜೆಯನ್ನು ಈ ವರ್ಷ ಈ ಆಯವ್ಯಯದಲ್ಲಿ 2006–07ರಲ್ಲಿ ಅವರು ಇಟ್ಟಿರುವುದು ಬಹಳ ಅಭಿನಂದನೀಯವಾದಂಥ ಸಂಗತಿಯಾಗಿದೆ. ಆದರೆ, ಎಂಎಸ್.ಶ್ರೀನಿವಾಸ್‌ರವರು ಕೆಲವು ವಿಚಾರಗಳನ್ನು ಮಾತನಾಡುತ್ತಾರೆ. ಮಹಿಳೆಯರು ಹೆಚು ಸಬಲೀಕರಣ ಆದನಂತರ ಅವರ ಜೀವನದ ವೆಚ್ಚಕ್ಕೆ ಸಂಬಂಧಪಟ್ಟಿರತಕ್ಕಂಥ ಹಣಕಾಸಿನ ಅನುಕೂಲಗಳಾದ ತಕ್ಷಣ ಮನೆಯೊಳಗೆ ಬಿಟ್ಟು ಮನೆ ಹೊರಗಡೆ ಇರುವ ಕೆಲಸಗಳಿಗೆ ಹೆಣ್ಣುಮಕ್ಕಳು ಹೋಗಬಾರದೆಂಬ ಅನಾವಶ್ಯಕವಾಗಿರತಕ್ಕಂಥ ನಿಷೇಧಗಳು ಬರುತ್ತವೆ. ಇದರ ಮೂಲಕವಾಗಿ ದೊಡ್ಡ ದೊಡ್ಡ ಬಡಾವಣೆಗಳಲ್ಲಿ, ಶ್ರೀಮಂತರ ಬಡಾವಣೆಗಳಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ನಾವು ಏನಾದರೂ ಮಾಡುವಾಗ ಮಹಿಳೆಯರು ಅಲ್ಲಿ ಹೊರಗಡೆಗೆ ಬರುವುದಿಲ್ಲ ಮತ್ತು ಹೊರಗಡೆ ಹೋಗಿ ದುಡಿಯುವುದು ಅಪಮಾನದ ಸಂಗತಿ ಎಂದು ಪರಿಭಾವಿಸಿಕೊಳ್ಳುತ್ತಾರೆ. ಇದಕ್ಕೆ ಅವರು ಹೇಳುತ್ತಾರೆ ಇಮ್ಮೂರ್‌ಮಂಟ್ ಎಂದು ಮಾತನಾಡುತ್ತಾರೆ. ಈ ಇಮ್ಮೂರ್ ಮೆಂಟ್‌ನ culture ಏನು ಬರುತ್ತದೆ, ಮನೆ ಹೊರಗಡೆ ಕೆಲಸ ಮಾಡುವುದೇನಿದೆ, ಇದು ಸರಿಯಾದದ್ದಲ್ಲ. ಇದರ ಬಗ್ಗೆ ಕೂಡ ಯೋಚನೆ ಮಾಡಬೇಕೆಂದು. ಹೇಳಿ ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರಲ್ಲಿ ನಾನು ವಿನಂತಿಸಿಕೊಳ್ಳುವುದಿಷ್ಟೆ. ನೀವು ಮನೆ ಕೆಲಸಕ್ಕೆ ಮತ್ತು ಮಕ್ಕಳ ಪಾಲನೆ ಪೋಷಣೆಗೆ ಸಂಬಂಧಿಸಿದಂತೆ ಯಾವ ತಾಯಿಂದಿರು ಕೆಲಸ ಮಾಡುತ್ತಾರೆ, ಆ ಕೆಲಸ ಕೂಡ ಸಂಪತ್ತಿನ ಉತ್ಪತ್ತಿ ಮತ್ತು ಅವರ ದುಡಿಮೆಯ ಭಾಗ. ಈ ವಿಚಾರದಲ್ಲಿ ನಮ್ಮ ದೇವಕಿ ಜೈನ್ ಎಲ್.ಸಿ.ಜೈನ್‌ರವರ ಕುಟುಂಬವು ಅಂತರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಯಾರ ವರಮಾನದ ವಿಚಾರಗಳು ಪ್ರಸ್ತಾಪ ಮಾಡುತ್ತೇವೆ, ಆ ವರಮಾನಕ್ಕೆ ಸಂಬಂಧಿಸಿದಂತೆ ಹೆಣ್ಣುಮಕ್ಕಳು ಮನೆ ಕೆಲಸದಲ್ಲಿ ನಿರತರಾಗಿ ಅವರು ಮಾಡತಕ್ಕಂಥ ದೈನಂದಿನ ಕೆಲಸಗಳೇನಿವೆ, ಅಡುಗೆ ಮಾಡುವುದಿರಬಹುದು, ಪಾತ್ರೆ ತೊಳೆಯುವುದಾಗಿರಬಹುದು, ಬಟ್ಟೆ ತೊಳೆಯತಕ್ಕಂಥದ್ದಾಗಿರಬಹುದು, ಮಕ್ಕಳ ಪಾಲನೆ–ಪೋಷಣೆ ಮತ್ತು ಗಂಡನ ಪಾಲನೆ–ಪೋಷಣೆಗೆ ಇದಕ್ಕೆ ಸಂಬಂಧಿಸಿದಂತೆ ದುಡಿಮೆಗೆ ಅವರು ಏನು ತಮ್ಮ

ಶ್ರಮಶಕ್ತಿ ಹಾಕಿರುತ್ತಾರೆ, ಅದೂ ಕೂಡ ಸಂಪತ್ತಿನ ಒಂದು ಭಾಗವಾಗಿ ಪರಿಗಣಿಸಬೇಕು ಮತ್ತು ಅದಕ್ಕೂ ಕೂಡ ಪರಿಗಣಿಸಬೇಕೆನ್ನುವಂಥ ಕಾರಣ ಇರುವುದರಿಂದ, ಈ ಮನೆ ಕೆಲಸ ಮೂಲಕವಾಗಿ ಹೆಣ್ಣುಮಕ್ಕಳು ತಮ್ಮ ದುಡಿಮೆ ಹಾಕುತ್ತಾರೆ. ಅದನ್ನೂ ಕೂಡ ತಾವು ಪರಿಕಲ್ಪಿಸಬೇಕೆಂಬ ಮಾತನ್ನು ಹೇಳುವುದರಿಂದ ಆ ವಿಚಾರದಲ್ಲಿ ಆಯವ್ಯಯದಲ್ಲಿ ಒಂದು ಹೊಸ ದೃಷ್ಟಿಕೋನಗಳನ್ನು ಇಟ್ಟುಕೊಂಡು ಹೋಗುವುದು ಬಹಳ ಮುಖ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾವೆಲ್ಲಾ ಪರಿಗಣಿಸಬೇಕಾದ ಬಹಳ ಮುಖ್ಯವಾದಂಥ ವಿಷಯ Finance is not merely airthmetic. Finance is a great policy. Without sound finance, no sound government is posssible. Without sound government, no sound finance is possible. ಆದ್ದರಿಂದ ಒಂದರ ಮೇಲೆ ಅವಲಂಬಿತವಾಗಿರತಕ್ಕದ್ದು. ಒಂದು ಸರ್ಕಾರಕ್ಕೆ ಸ್ಥಿರತೆ ಬಂದರೆ ಅದು ತನ್ನದೇ ಆದಂಥ ಸರ್ಕಾರದ ಆಡಳಿತದಲ್ಲಿ ಒಂದು ಸುಸ್ಥಿರತೆಯನ್ನು ತರುತ್ತದೆ. ಅದರ ಮೂಲಕ continuity ಎಂದು ಏನು ಕರೆಯುತ್ತೇವೆ, ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗತಕ್ಕ ರಾಜಕೀಯ ಇಚ್ಛಾಶಕ್ತಿಗೆ ಹೆಚ್ಚು ಪ್ರಬಲತೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಈ ಅಸ್ಥಿರತೆಗಳು ಪದೇ ಪದೇ ಆಗತಕ್ಕ ಕಾರಣವಾಗಿರಬಹುದು ಆ ಕಾರಣಗಳಿಗಾಗಿ ಒಂದು ಉತ್ತಮವಾಗಿರತಕ್ಕ ಹಣಕಾಸಿನ ನಿರ್ವಹಣೆಯನ್ನು ಮಾಡಲಿಕ್ಕೆ ಸಾಧ್ಯತೆಯಾಗುವುದಿಲ್ಲ. ಉತ್ತಮ ಹಣಕಾಸಿನ ನಿರ್ವಹಣೆಯನ್ನು ಮಾಡಿದರೆ ಉತ್ತಮ ಸರ್ಕಾರವನ್ನು ಮಾಡಬಹುದು. ಉತ್ತಮ ಸರ್ಕಾರ, ಸ್ಥಿರ ಸರ್ಕಾರವಿದ್ದರೆ ಉತ್ತಮ ಹಣಕಾಸಿನ ನಿರ್ವಹಣೆಯನ್ನು ಮಾಡಬಹುದಾಗುತ್ತದೆ. ಈ ದೃಷ್ಟಿಕೋನದಿಂದ ಈಗ ಅಸ್ಥಿರತೆ ಸ್ವಲ್ಪಮಟ್ಟಿಗೆ ಹೋಗಿ ಗೊಂದಲದ ಪರಿಸ್ಥಿತಿ ಕೂಡ ನಿವಾರಣೆಯಾಗಿ ಕಳೆದ ವರ್ಷದ ಎಲ್ಲಾ ವಿಚಾರಗಳ ಬಗ್ಗೆ ಈ ಸರ್ಕಾರದವರು ಮಂಡಿಸಿರತಕ್ಕ ಈ ಆಯವ್ಯಯದಲ್ಲಿ ಮುಂದೆ ತಾವು ಇಡಬಹುದಾಗಿರತಕ್ಕ ಹೆಜ್ಜೆಗಳ ಗುರುತಾಗಿ ಅವರು ಮಾತನಾಡಿದ್ದಾರೆ. ಈಗಾಗಲೇ ಪೂರಕ ಅಂದಾಜುಗಳ ಸಂದರ್ಭ ಬಂದಾಗ ಮಾನ್ಯ ಮಾಧುಸ್ವಾಮಿಯವರು, ರಾಯರೆಡ್ಡಿಯವರು ಹಾಗೂ ಇನ್ನೂ ಕೆಲವರು ಹೇಗೆ ನಾವು ಅನಾವಶ್ಯಕವಾದ ಖರ್ಚುಗಳನ್ನು ಮಾಡುತ್ತಿದ್ದೇವೆ. ಹಾಗೂ ಅವಶ್ಯಕವಾಗಿರುವಂಥ ಖರ್ಚುಗಳಿಗೆ. ಮಾಡುತ್ತಿಲ್ಲವೆಂಬ ಬಗ್ಗೆ ಪ್ರಸ್ತಾಪಮಾಡಿದರು. ಮಾನ್ಯ ಜ್ಞಾನೇಂದ್ರರವರು ಹೇಳಿದಾಗ, 67 ಕೋಟಿ ರೂಪಾಯಿಗಳನ್ನೇನು ಶಿಷ್ಯವೇತನಕ್ಕೆ ಕೊಡಬೇಕಾಗಿರತಕ್ಕದ್ದನ್ನು ಕೊಡದೆಯೆ ಅನಾವಶ್ಯಕವಾಗಿ 67 ಲಕ್ಷ ರೂಪಾಯಿಗಳನ್ನು ಒಬ್ಬ ತನ್ನ ಪ್ರವಾಸ ಭತ್ಯೆಯನ್ನು ತೆಗೆದುಕೊಳ್ಳಲು ಕೊಡತಕ್ಕ ವಿಚಾರದಲ್ಲಿ ಮಾನ್ಯ ವಿಶ್ವೇಶ್ವರಯ್ಯನವರು ಹೇಳಿದಂಥ ಮಾತು ಬಹಳ ಮನನೀಯವಾಗಿರತಕ್ಕ ಮಾತು. ನಾವೆಲ್ಲಾ ವಿಶ್ವೇಶ್ವರಯ್ಯನವರನ್ನು ಇಂಜಿನಿಯರ್ ಎಂದು ಭಾವಿಸಿದ್ದೇವೆ. ಅವರು ಉತ್ತಮವಾದ ಇಂಜಿನಿಯರ್ ಆಗಿದ್ದರೂ ಸಹ ಉತ್ತಮವಾದ ಹಣಕಾಸಿನ ನಿರ್ವಹಣೆಯನ್ನು ಮಾಡುತ್ತಿದ್ದರು If you spend a money which is unnecessary, ultimately you will have no money to spend, which is necessary ಎಂದು ಹೇಳುತ್ತಾರೆ. ಆದ್ದರಿಂದ ನಾವು ಈ ರೀತಿಯಾದಂಥ ಪ್ರಯಾಣ ವೆಚ್ಚ ಮೊದಲಾದವುಗಳಿಗೆ, ಅನಾವಶ್ಯಕವಾದ ಖರ್ಚುಗಳಿಗೆ ಹೆಚ್ಚು ಖರ್ಚನ್ನು ಮಾಡಿದರೆ ನಾವು ಅಗತ್ಯವಾಗಿ ಮಾಡಲೇ ಬೇಕಾಗಿರುವ ಖರ್ಚುವೆಚ್ಚಗಳಿಗೆ ನಮ್ಮ ಹತ್ತಿರ ಹಣ ಇರುವುದಿಲ್ಲ. ಅದರ

ಬಗ್ಗೆ ವಿಚಾರಗಳು ಇದೆ. ನೀರಾವರಿಗೆ ಹೆಚ್ಚಿನ ಹಣ ಕೊಟ್ಟಿಲ್ಲ. ಈ ರೀತಿ 67 ಕೋಟಿ ರೂಪಾಯಿ ಶಿಷ್ಯವೇತನವನ್ನೇನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ. ಇಂಥ ಮಾತುಗಳೆಲ್ಲಾ ಬರುವುದಕ್ಕೆ ಕಾರಣ ಅನಾವಶ್ಯಕವಾಗಿರತಕ್ಕ ಖರ್ಚುಗಳಿಗೆ ಹೆಚ್ಚು ಒತ್ತು ಕೊಡುವುದರಿಂದ. ಇಲ್ಲಿ ಬಹಳ ಉತ್ತಮವಾದ ಮಾತನ್ನು ಹೇಳಿದ್ದಾರೆ. ನಾವು ಈ ಅನಾವಶ್ಯಕವಾಗಿರತಕ್ಕ ದುಂದುವೆಚ್ಚದ ಮೇಲೆ ಕಡಿವಾಣವನ್ನು ಹಾಕುತ್ತೇವೆ. ಐದು ಪರ್‌ಸೆಂಟ್‌ನಷ್ಟು ನಾವು ಅದರಲ್ಲಿ ಸಾಧನೆಯನ್ನು ಮಾಡಿ ತೋರಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ಆ ಮಾತಿಗೆ ಪೂರಕವಾಗಿರತಕ್ಕ ವಿಚಾರಗಳು ಇದರಲ್ಲಿ ಪ್ರಸ್ತಾಪವಾಗಿಲ್ಲ. ಈ ದೃಷ್ಟಿಕೋನದಿಂದ ನಾವು ಯೋಚನೆ ಮಾಡಬೇಕಾಗಿರತಕ್ಕದ್ದು ನಮ್ಮ ಇಡೀ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಬಹಳ ಜನ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಟೀಕೆಯನ್ನು ಮಾಡಿದ್ದಾರೆ. ಇದರಲ್ಲಿ ಹೊಸ ವಿಚಾರಗಳೇನೂ ಇಲ್ಲ. ಹಳೆಯ ವಿಚಾರಗಳನ್ನೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಬೇರೆ ಬೇರೆ ರೀತಿಯ ಹೊಸ ವ್ಯಾಖ್ಯಾನಗಳನ್ನು ಬರೆದಿದ್ದಾರೆಯೇ ವಿನಹ ಇದರಲ್ಲಿ ಹೊಸತಾಗಿ ಏನನ್ನೂ ಕಂಡಿಲ್ಲವೆಂದು ಹೇಳಿದ್ದಾರೆ. ಆದರೆ ಈ ಆಯವ್ಯಯವನ್ನು ಮಾಡಬೇಕಾದರೆ ಅದರ ಎಲ್ಲೆಗಳನ್ನು ಮತ್ತು ಅದರ ಉಬ್ಬುತಬ್ಬುಗಳನ್ನು contours of budget-making ಎನ್ನತಕ್ಕ ವಿಚಾರಗಳನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಒಂದು ಆಯವ್ಯಯವನ್ನು ತಯಾರು ಮಾಡಬೇಕಾಗಿದ್ದರೆ ಹಿಂದಿನ ಸರ್ಕಾರದವರು ಮಾಡಿರತಕ್ಕಂಥ ಯೋಜನೆಗಳು, ಅದರ ಅನುಷ್ಠಾನ ಅದಕ್ಕೆ ತೋರಿಸಿರತಕ್ಕ ಶ್ರದ್ಧೆ ಮತ್ತು ಹಣಕಾಸಿನ ವ್ಯವಸ್ಥೆ ಇವುಗಳನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾಗಿರತಕ್ಕದ್ದು ಪ್ರತಿಯೊಂದು ಸರ್ಕಾರದ ಕರ್ತವ್ಯ. ನಾವು ನಮ್ಮದೇ ಆಗಿರತಕ್ಕ ಕಾರಣಕ್ಕಾಗಿ ಇದು ಕುಮಾರಸ್ವಾಮಿಯವರ ಸರ್ಕಾರ ಅಥವಾ ಧರ್ಮ್‌ಸಿಂಗ್‌ರವರ ಸರ್ಕಾರ ಎಂದು ಹೇಳಬಹುದು. ಆದರೆ ಅದು ನಮ್ಮದೇ ಆಗಿರತಕ್ಕ ವ್ಯವಹಾರದ ಪರಿಭಾಷೆಯಲ್ಲಿ ಮಾತನಾಡತಕ್ಕದ್ದು. ಆದರೆ ನಿಜವಾಗಿಯೂ ಯೋಚನೆ ಮಾಡಬೇಕಾಗಿರತಕ್ಕದ್ದು ಇದು ಕನ್ನಡಿಗರ ಸರ್ಕಾರ ಅಥವಾ ಭಾರತ ದೇಶದ ಸರ್ಕಾರ. ಈ ದೃಷ್ಟಿಕೋನದಿಂದ ನಾವು ಹಿಂದೆ ಮಾಡಿರತಕ್ಕ ಕಾರ್ಯಕ್ರಮಗಳೆಲ್ಲವನ್ನೂ ಕೂಡ ಮುಂದುವರೆಸಿಕೊಂಡೇ ಹೋಗಬೇಕಾಗುತ್ತದೆ. ಅದು ನೀರಾವರಿ ವಿಚಾರವಾಗಿರಬಹುದು, ಪರಿಸರ ಪದ್ಧತಿಗೆ ಸಂಬಂಧಪಟ್ಟಿರತಕ್ಕದ್ದು ಆಗಬಹುದು ಅಥವಾ ಹಣಕಾಸಿನ ವ್ಯವಹಾರಗಳಿಗೆ ಇರಬಹುದು, ಆರು ಹೊಸ ಕಾಲೇಜುಗಳಿಗೆ ಕೊಡತಕ್ಕದ್ದು ಆಗಬಹುದು. ಇವೆಲ್ಲವೂ ಕೂಡ ನಿರಂತರವಾಗಿ ಮುಂದುವರೆಸಿಕೊಂಡು ಹೋಗಬೇಕಾಗಿರತಕ್ಕ ಕಾರ್ಯಕ್ರಮಗಳಾಗಿರುವುದರಿಂದ ಹಿಂದಿನ ಮಾತನ್ನೇ ಇಲ್ಲಿ ಪ್ರಯೋಗ ಮಾಡಿದ್ದೀರಿ ಎಂಬುದಲ್ಲ, ಹಿಂದಿನ ಕಾರ್ಯಕ್ರಮಗಳನ್ನೂ ಕೂಡ ಮುಂದುವರೆಸಿಕೊಂಡು ಹೋಗಬೇಕಾಗಿರತಕ್ಕದ್ದು ನಮ್ಮ ಆದ್ಯಕರ್ತವ್ಯವಾಗಿರುತ್ತದೆ. ಆದರೆ ನಾವು ಹಣಕಾಸಿನ ನಿರ್ವಹಣೆಯಲ್ಲಿ ನಮ್ಮ ಪೂರ್ವಜರು ಬಿಟ್ಟು ಹೋಗಿರತಕ್ಕ ಕೆಲವು ಸಂಪತ್ತು ಮತ್ತು ಅವರು ಮಾಡಿದಂಥ ಕಾರ್ಯಕ್ರಮಗಳು ಹೇಗೆ ನಮ್ಮನ್ನು ಈ ಒಂದು ಸುಸ್ಥಿತಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಯೊ ಹಾಗೆಯೇ ಅವು ದಾರಿ ತಪ್ಪಿಸಿದಂಥ ಅದರ ಮೂಲಕವಾಗಿ ನಮಗೆ ತೊಂದರೆ ಅನುಭವಿಸಿರುವುದನ್ನು ನಾವು ಕಾಣುತ್ತೇವೆ. ನಿಮಗೆಲ್ಲಾ ಗೊತ್ತಿದ್ದಂತೆ ನೆಹರುರವರ ಯುಗದಲ್ಲಿ ಗ್ರಾಮೀಣಾಭಿವೃದ್ಧಿಯನ್ನು ಸಮೂದಾಯದ ಅಭಿವೃದ್ಧಿ, ಸಿ.ಡಿ.ಬ್ಲಾಕ್‌ನ ಪರಿಕಲ್ಪನೆಯನ್ನೂ

ಕೂಡ ತಂದಿದ್ದರು. ಸಮೂದಾಯದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅದನ್ನು ಸಮೀಕರಿಸಿದ್ದರಿಂದ ಆ ಇಡೀ ಪರಿಕಲ್ಪನೆ ಎನ್ನತಕ್ಕದ್ದು ಬೇರೆ ಬೇರೆ ಕಾರಣಕ್ಕಾಗಿ ನೆಹರು ಯುಗ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದರೂ ಕೂಡ ಆರ್ಥಿಕ ಸಬಲಿಕರಣಕ್ಕೆ ಸಂಬಂಧಪಟ್ಟಂತೆ ಅದು ವಿಫಲವಾಗಿರತಕ್ಕದ್ದನ್ನು ನಾವು ಕಾಣುತ್ತೇವೆ. 70ರ ದಶಕದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಸಮಗ್ರ ಗ್ರಾಮೀಣ ಕಾರ್ಯಕ್ರಮ ಐ.ಆರ್.ಡಿ.ಪಿ.ಯನ್ನು ತಂದರು. ಆದರೆ ಅದು ಫಲಾನುಭವಿಗಳ ಆಧಾರಿತವಾದಂಥ ಕಾರ್ಯಕ್ರಮವಾಗಿದ್ದರಿಂದ ಅದು ನಾವು ನಿರೀಕ್ಷಿತವಾದ ಪ್ರತಿಫಲವನ್ನು ಕೊಡುವುದಕ್ಕಾಗಲಿಲ್ಲ. ಅದು Doles ಎಂದು ಏನು ಕರೆಯುತ್ತೇವೆ, ಫಲಾನುಭವಿಗಳನ್ನು ಗುರುತಿಸಿ ವ್ಯಕ್ತಿಗತವಾಗಿ ಅವರನ್ನು ಮೇಲೆ ತರುವುದರಿಂದ ಮೂಲಕ ನಾವು ಸಮಗ್ರ ಅಭಿವೃದ್ಧಿಯನ್ನು ತರುತ್ತೇವೆ ಎನ್ನುವ ಪರಿಕಲ್ಪನೆ ಏನಿದೆ ಅದು ಹಳೆಯ ಪರಿಕಲ್ಪನೆಗಳಾಗಿವೆ. ತಮಗೆಲ್ಲಾ ಗೊತ್ತಿದ್ದಂತೆ ಅವರಿಗೆ ನೀವು ತಿನ್ನುವುದಕ್ಕೆ ಮೀನು ಕೊಡಬೇಡಿ ಅದರೆ ಮೀನನ್ನು ಹಿಡಿಯುವುದನ್ನು ಕಲಿಸಿಕೊಡಿ ಎಂದು ಏನು ಹಳೆಯ ಗಾದೆಯ ಮಾತಿದೆ ಹಾಗೆ ನಾವು ವ್ಯಕ್ತಿಗತವಾಗಿರತಕ್ಕ ಜನಗಳ ಫಲಾನುಭವಿಗಳ ಆಧಾರಿತವಾಗಿರತಕ್ಕ ಕಾರ್ಯಕ್ರಮಗಳು ಹೆಚ್ಚು ಫಲಪ್ರದವಾಗದೆ ಇದ್ದು ನಂತರ ಗ್ರಾಮೀಣ ಅಭಿವೃದ್ಧಿಯನ್ನು 90ರ ದಶಕದ ಈಚೆಗೆ ನಾವು ವಿಕೇಂದ್ರಿಕರಣದ ವ್ಯವಸ್ಥೆಯ ಸ್ವರೂಪದಲ್ಲಿ ನೋಡುತ್ತಿದ್ದೇವೆ. ಗ್ರಾಮೀಣ ಅಂದರೆ ಅದು ಒಂದು ಬದುಕಿನ ಕ್ರಮ. ಗ್ರಾಮೀಣ ಅಭಿವೃದ್ಧಿ ಅಂದರೆ ಆ ಬದುಕಿನ ಕ್ರಮಕ್ಕೆ ಬೇಕಾಗಿರುವ ಪೂರಕ ಸಿದ್ದತೆಗಳನ್ನು, ಸವಲತ್ತುಗಳನ್ನು ಒದಗಿಸಿಕೊಡುವುದರ ಮೂಲಕವಾಗಿ ವಿಕಸನದ ಹಾದಿಯಲ್ಲಿ ಅವುಗಳನ್ನು ತೆಗೆದುಕೊಂಡು ಹೋಗತಕ್ಕದ್ದು ಕ್ರಮ. ಆ ಗ್ರಾಮೀಣ ಅಭಿವೃದ್ಧಿಯನ್ನು ನಾವು 243 (ಜಿ) ಸಂವಿಧಾನದ ತಿದ್ದುಪಡಿಯ ಹಿನ್ನೆಲೆಯಲ್ಲಿ ಯೋಚನೆ ಮಾಡುವುದಾಗಿದ್ದರೆ ಇಲ್ಲಿ ಆಗಿರತಕ್ಕ ಸಬಲೀಕರಣದ ವಿಚಾರದಲ್ಲಿ ತಾವು ಈ ಆಯವ್ಯಯದಲ್ಲಿ ನೇರವಾಗಿ ವಿಚಾರಗಳನ್ನು ಪ್ರಸ್ತಾಪ ಮಾಡದಿದ್ದರೂ ಕೂಡ ತಾವು ಯೋಚನೆ ಮಾಡಬೇಕು, ಜನರ ಯೋಜನೆ ಬೇರೆ ಮತ್ತು ಜನರಿಗಾಗಿ ಯೋಜನೆಗಳು ಬೇರೆ. ಜನರ ಯೋಜನೆ ಎಂದರೆ ಅದು ಕೆಳಗಿನಿಂದ ಮೇಲಕ್ಕೆ ಹರಿಯಬೇಕಾಗಿರತಕ್ಕ ಸ್ಥಿತಿ. ಅದು ಒಂದು ಕಾರ್ಯಕ್ರಮ. ಅಂದರೆ ಹಳ್ಳಿಯಿಂದ ದಿಲ್ಲಿಗೆ ಆಗಬೇಕಾಗಿರತಕ್ಕ ಕಾರ್ಯಕ್ರಮಕ್ಕೆ ನಾವು ಜನರ ಯೋಜನೆ ಎಂದು ಕರೆಯುತ್ತೇವೆ. ಆದರೆ ಜನರಿಗಾಗಿ ಯೋಜನೆಯನ್ನು ತಯಾರು ಮಾಡಿದರೆ ಅದು trickling down methods ಎಂದು ಪ್ರಾರಂಭ ಮಾಡಿ ಮೇಲಿನಿಂದ ಬರತಕ್ಕದನ್ನು, ದಿಲ್ಲಿಯಿಂದ ಬರತಕ್ಕದ್ದನ್ನು ಹಳ್ಳಿಗಳಿಗೆ ಮುಟ್ಟಿಸುತ್ತೇವೆ ಎನ್ನತಕ್ಕದ್ದೇನಿದೆ ಇದು ಜನರಿಗಾಗಿ ಮಾಡುವಂಥ ಯೋಜನೆ. 90ರ ದಶಕದಲ್ಲಿ 243ರ ಕಲಂನ್ನು ಸಂವಿಧಾನದಲ್ಲಿ ತಿದ್ದುಪಡಿ ಮಾಡಿದ ಮೇಲೆ ವಿಕೇಂದ್ರಿಕರಣದ ವ್ಯವಸ್ಥೆಯ ಅಡಿಯಲ್ಲಿ ಈ ಯೋಜನೆಗಳನ್ನು ಮಾಡಬೇಕೇ ವಿನಹ ನಾವು ತಯಾರು ಮಾಡಿರತಕ್ಕ ಕಾರ್ಯಕ್ರಮಗಳ ಮೂಲಕವಾಗಿ ಇದನ್ನು ಯೋಚನೆ ಮಾಡತಕ್ಕದ್ದು ಈ ಒಪ್ಪಿತವಾದಂಥ ಕಾರ್ಯಕ್ರಮಕ್ಕೆ ಹಿನ್ನಡೆಯನ್ನು ತಂದು ಕೊಡುತ್ತದೆ. ನಾವು ಸಾಧಿಸಬೇಕಾಗಿರುವುದನ್ನೂ ಕೂಡ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ಈವತ್ತು ಈ ಆಯವ್ಯಯದಲ್ಲಿ ನಾವು ಅದನ್ನು ಗುರುತಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸತಕ್ಕದ್ದು ಯೋಜನಾ ಕ್ರಮಗಳ ಅನುಷ್ಠಾನದ ಮೌಲ್ಯಮಾಪನ ನಮ್ಮ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿರತಕ್ಕ 310ರ ಪ್ರಕಾರ

ಪ್ರತಿಯೊಂದು ಜಿಲ್ಲೆಗೂ ಒಂದು ಯೋಜನಾ ಸಮಿತಿ ಎನ್ನತಕ್ಕದ್ದು ಇದ್ದಾಗ ಯೋಜನಾ ಸಮಿತಿಯವರು ಆ ಯೋಜನೆಗಳಿಗೆ ಸಂಬಂಧಪಟ್ಟಿರುವ ವಿಷಯಗಳನ್ನು ಎಷ್ಟರಮಟ್ಟಿಗೆ ನಾವು ಇದರಲ್ಲಿ ಕ್ರೋಢೀಕರಿಸಿದ್ದೇವೆ, ಅದನ್ನು ಎಷ್ಟರಮಟ್ಟಿಗೆ ಜಾರಿಗೊಳಿಸುವುದಕ್ಕೆ ಯೋಚನೆ ಮಾಡುತ್ತೇವೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಇದರಲ್ಲಿ ನಮ್ಮ Line Departments ಎಂದು ಹೇಳಿ ಏನು ಕರೆಯುತ್ತೇವೆ, ಇವರು ಯಾವಾಗಲೂ ಕೂಡ ನಮ್ಮ ಸಮವಿಕಾಸ ಯೋಜನೆಯಂಥವನ್ನೂ ಕೂಡ ವಿಫಲಗೊಳಿಸಿರುವುದನ್ನು ಕಾಣುತ್ತೇವೆ. ನಿಮಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ವಿರೋಧ ಪಕ್ಷದಲ್ಲಿ ಹಿರಿಯರಾಗಿರತಕ್ಕ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ರಾಷ್ಟ್ರೀಯ ಸಮವಿಕಾಸ ಯೋಜನೆಗಳೇನಿದೆ, ಐದು ಜಿಲ್ಲೆಗಳಿಗೆ ಬಂದಿದೆ ದಾವಣಗೆರೆ, ಚಿತ್ರದುರ್ಗ, ಬೀದರ್ ಈ ಜಿಲ್ಲೆಗಳಿಗೆ ಬಂದಿರತಕ್ಕದ್ದರಲ್ಲಿ ಅವರು ಸಮವಿಕಾಸ ಯೋಜನೆಯ ಮೂಲಕ ನಾವು ಹೆಚ್ಚು ಖರ್ಚು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ನಮ್ಮ Line Departments ಗಳು ಏನು ಮಾಡುತ್ತವೆಂದರೆ ಸಮವಿಕಾಸ ಯೋಜನೆಗಾಗಿ ಕೊಟ್ಟಿರತಕ್ಕ ಹಣವನ್ನು ತಾವು ಈಗಾಗಲೇ ಏನು ಯೋಜನೆಯನ್ನು ತಯಾರು ಮಾಡಿರುತ್ತಾರೆ ಅದಕ್ಕೆ ಸಂಬಂಧಪಟ್ಟಿರತಕ್ಕದನ್ನು ಹೇಳಿ ತಾವು ಹಮ್ಮಿಕೊಂಡಿರತಕ್ಕ ಕಾರ್ಯಗಳನ್ನೇ ಈ ಕಾರ್ಯಕ್ರಮಗಳು ಎಂದು ಹೇಳಿ ಸಮವಿಕಾಸ ಯೋಜನೆಗಳಲ್ಲಿ ಅಳವಡಿಸಿದ್ದಾರೆ. ಈಗ ದಾವಣಗೆರೆ, ಚಿತ್ರದುರ್ಗ, ಬೀದರ್, ಗುಲ್ಬರ್ಗಾಗಳಲ್ಲಿ ಆಗುತ್ತಿರುವುದೂ ಅದೇ ಆಗಿದೆ. ಈ ತಾಂತ್ರಿಕ ಸಂಗತಿಗಳನ್ನು ಕೇಂದ್ರ ಯೋಜನಾ ಆಯೋಗ ನಿರ್ಧಾರ ಮಾಡಿರುವ ಬಗ್ಗೆ ಈ ಯೋಜನೆಯ ನಿಜವಾದಂಥ ಸ್ವರೂಪವನ್ನು ಅಸಮಾನತೆಯನ್ನು ತೆಗೆದು ಹಾಕಬೇಕು ಎಂಬ ಕಾರಣಕ್ಕಾಗಿ ರೂಪಿಸಿರತಕ್ಕ ಈ ಕಾರ್ಯಕ್ರಮ ಹೇಗೆ ವಿಫಲವಾಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಇದಕ್ಕೆ ಬಜೆಟ್‌ನಲ್ಲಿ ಇರತಕ್ಕಂಥ ಅಂಕಿ ಸಂಖ್ಯೆಗಳ ಬಗ್ಗೆ ಹೆಚ್ಚು ಮಾತನಾಡಬೇಕಾದಂತಹ ಅಗತ್ಯ ಇಲ್ಲ. ಇದು ನಿಜವಾಗಿಯೂ ಕೂಡ ನಾವು ಹೆಮ್ಮೆ ಪಡಬೇಕಾಗಿರತಕ್ಕಂಥ ಸಂಗತಿ. ಹಿಂದಿನ ಸರ್ಕಾರದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರಾಗಿದ್ದಂತಹ ಮಾನ್ಯ ಸಿದ್ದರಾಮಯ್ಯನವರನ್ನೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆ ಕಾರಣದಿಂದ ಅವತ್ತಿನಿಂದ ಇಲ್ಲಿಯವರೆಗೂ ಕೂಡ ಒಂದು ಸುಸ್ಥಿರವಾಗಿರತಕ್ಕಂಥ ಆಡಳಿತವನ್ನು, ಹಣಕಾಸಿನ ನಿರ್ವಹಣೆಯನ್ನು ತರಲು ಸಾಧ್ಯವಾಗಿದೆ ಒಂದೇ ದಿವಸದಲ್ಲಿ ನಾವು ಇದನ್ನು ಮಾಡಿದ್ದೇವೆ ಎನ್ನತಕ್ಕಂಥ ಮಾತಲ್ಲ, ಹಿಂದೆ ಅವರು ತಂದಿದ್ದಂಥ ಒಂದು financial discipline ಎಂದೇನು ನಾವು ಕರೆಯುತೇವೆಯೋ, ಆ ಹಣಕಾಸಿನಲ್ಲಿ ತೋರಿಸಬೇಕಾಗಿರತಕ್ಕಂಥ ಶಿಸ್ತು, ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾದಂತಹ ಸಂದರ್ಭದಲ್ಲಿ ತೋರಿಸುವಂತಹ ಕಠಿಣತೆ, ನಮ್ಮ ಸರಳೀಕೃತವಾಗಿರತಕ್ಕಂಥ ತೆರಿಗೆ ವ್ಯವಸ್ಥೆಯಲ್ಲಿ ಮಾಡಬೇಕಾದಂತಹ ಕೆಲವು ಬದಲಾವಣೆಗಳು, ಇವು ನಿಜವಾಗಿಯೂ ಕೂಡ ಉತ್ತಮವಾದಂತಹ ಆರ್ಥಿಕ ನಿರ್ವಹಣೆಯನ್ನು ಕರ್ನಾಟಕ ಸರ್ಕಾರ ಮಾಡಿದೆ ಎಂದು ಹೇಳಿ ಕೇಂದ್ರ ಸರ್ಕಾರದೊಂದಿಗೆ ಯೋಜನಾ ಆಯೋಗದವರು ಕೊಟ್ಟಿರತಕ್ಕಂಥ ಶಿಫಾರಸ್ಸೇ ನಿಜವಾಗಿಯೂ ಕೂಡ ಮೆಚ್ಚುವಂಥಾದ್ದು ಆಗಿದೆ. ಅದನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ಇಂತಹ ವಿಚಾರಗಳಲ್ಲಿ ಹಿಂದೆ ನೀವು ಕೆಲಸ ಮಾಡಿರುವಂತಹ ಸಂದರ್ಭದಲ್ಲಿ ಯೋಜನಾ

ಆಯೋಗದವರಾಗಲಿ, 310 ವಿಚಾರದಲ್ಲಿ ನಾವು ಯಾವುದೇ ಪ್ರಸ್ತಾಪ ಮಾಡದೆ, ಅದರ ಮೂಲಕ ತೆಗೆದುಕೊಳ್ಳಬೇಕಾಗಿರತಕ್ಕಂಥ ಜನರ ಕಾರ್ಯಕ್ರಮಗಳನ್ನು ಇದರಲ್ಲಿ ಅಳವಡಿಸಿಕೊಂಡಿಲ್ಲ. ಅವರಿಗೆ ಸಮಯದ ಅಭಾವ ಇತ್ತು ಕೇವಲ 30-40 ದಿವಸಗಳು ಇತ್ತು ಈಗಾಗಲೇ ಪ್ರಾಯಶಃ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಹಣಕಾಸಿನ ಮಂತ್ರಿಗಳಾದಂತಹ ಸಂದರ್ಭದಲ್ಲಿ ಈ ಆಯವ್ಯಯದ ಬಗ್ಗೆ ಪೂರಕ ಸಿದ್ಧತೆಗಳೆಲ್ಲಾ ನಡೆದಿದ್ದವು. ಆ ಪೂರಕ ಸಿದ್ದತೆಗಳನ್ನು ಮಾನ್ಯ ಯಡಿಯೂರಪ್ಪನವರೂ ಕೂಡ ಮುಂದುವರೆಸಿ, ಹೊಸ ಕಾರ್ಯಕ್ರಮಗಳಿಗೆ ಬೇಕಾಗಿರತಕ್ಕಂಥದ್ದನ್ನು ಇದರಲ್ಲಿ ಅಳವಡಿಸಿಕೊಂಡಿದ್ದಾರೆ. ಇದು ಒಂದು ದಿವಸದಲ್ಲಿ ಆಗಿರತಕ್ಕಂಥದ್ದಲ್ಲ ಇಂದು ನಿನ್ನೆಗೆ ಋಣಿಯಾಗಿರುತ್ತದೆ, ನಾಳೆ ಇಂದಿಗೆ ಋಣಿಯಾಗಿರುತ್ತದೆ. ಆದ್ದರಿಂದ ಯಾವುದೇ ಸರ್ಕಾರವಾಗಿರಲಿ, ಆ ಸರ್ಕಾರ ಹಿಂದೆ ಮಾಡಿರತಕ್ಕಂಥ ಕಾರ್ಯಕ್ರಮಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಬೇಕೇ ವಿನಃ ನಾವೇ ಇದನ್ನು ಮಾಡಿದ್ದೇವೆಎನ್ನತಕ್ಕಂಥ ಹೆಗ್ಗಳಿಕೆ ತೆಗೆದುಕೊಳ್ಳತಕ್ಕಂಥದ್ದು ಏನಲ್ಲ. ಆದ್ದರಿಂದ, ಇವತ್ತು, ಈ ಪ್ರಸ್ತುತ, ನಿನ್ನೆಗೆ ಋಣಿಯಾಗಿದೆ. ಹಾಗೆಯೇ, ನಾಳೆ ಕೂಡ ಇಂದಿಗೆ ಋಣಿಯಾಗಬೇಕಾಗಿರತಕ್ಕಂಥ ಅನಿವಾರ್ಯತೆ, ಅಗತ್ಯತೆ ಮತ್ತು ಜೀವನದ ಕ್ರಮ ಕೂಡ ಇದೆ. PURA ದ ವಿಚಾರದಲ್ಲಿ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ 25 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ ಎನ್ನುವಂತಹ ಮಾತನ್ನು ಬಜೆಟ್ಟಿನಲ್ಲಿ ಹೇಳಿದ್ದಾರೆ. ನಿಮಗೆಲ್ಲಾ ಗೊತ್ತಿದ್ದಂತೆ ಸನ್ಮಾನ್ಯ ಉಪಾಧ್ಯಕ್ಷರೆ, ಪ್ರತಿ ಜಿಲ್ಲೆಯಲ್ಲಿ ಒಂದು ಮಧ್ಯಮ ತರಗತಿಯ ಒಂದು ನಗರವನ್ನು ತೆಗೆದುಕೊಂಡು, ಆ ನಗರದ ಐದು ಕಿಲೋಮೀಟರ್‌ನ ಆಜುಬಾಜಿನಲ್ಲಿ ಯಾವುದಾದರೂ 10-15 ಗ್ರಾಮಗಳನ್ನು ತೆಗೆದುಕೊಂಡು, ಆ ಗ್ರಾಮಗಳನ್ನು ಈ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದಂತಹ ರೀತಿಯಲ್ಲಿ ಮಾಡತಕ್ಕಂಥದ್ದೇ ಕೇಂದ್ರದ ಯೋಜನೆ. ಅದನ್ನೇ PURA ಎಂದು ನಾವು ಕರೆಯುತ್ತೇವೆ. ಅದು 'ಪುರ' ಅನ್ನತಕ್ಕಂಥ ರೀತಿಯಲ್ಲೇ ಪ್ರತಿಪಾದಿಸಲ್ಪಟ್ಟಿದೆ. ಹಾಗಿರುವಾಗ, 23 ಜಿಲ್ಲೆಗಳಿರುವಲ್ಲಿ ಯಾವುದಾದರೂ ಒಂದು ಮಧ್ಯಮ ತರಗತಿಯ ನಗರವನ್ನು ಆಯ್ಕೆ ಮಾಡಿ, ಆ ನಗರದ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರತಕ್ಕಂಥ ಬೇರೆ ಬೇರೆ ಗ್ರಾಮಗಳನ್ನು ಗುರುತಿಸಿ, ನಗರ ಪ್ರದೇಶಗಳಲ್ಲಿ ಇರತಕ್ಕಂಥ ಎಲ್ಲಾ ಸೌಕರ್ಯಗಳನ್ನು ಅಲ್ಲಿಗೆ ಕಲ್ಪಿಸಿಕೊಡಬೇಕಾಗಿದ್ದರೆ, 25 ಕೋಟಿ ರೂಪಾಯಿಗಳ ಹಣ ಸಾಕಾಗುವುದಿಲ್ಲ. ಆದ್ದರಿಂದ, ನಾವೇನು ರಾಷ್ಟ್ರಪತಿಗಳಿಗೆ ಅಭಿನಂದನೆ ಸಲ್ಲಿಸತಕ್ಕಂಥ ಸಂದರ್ಭದಲ್ಲಿ PURA ಯೋಜನೆಗಳನ್ನು ನಾವು ತರುತ್ತೇವೆ ಅನ್ನುವಂತಹ ಮಾತನ್ನೇನು ನಾವು ಹೇಳಿದ್ದೆವೋ, ಅದು ನಿಜವಾಗಿಯೂ ಕೂಡ ಕಾರ್ಯಗತವಾಗಬೇಕಾಗಿರುತ್ತದೆ. ಈಗ 25 ಕೋಟಿ ರೂಪಾಯಿಗಳಿಂದ ಯಾವ ಕಾರ್ಯಕ್ರಮ ಕೂಡ ಆಗುವುದಿಲ್ಲ. ನಿಮಗೆ ಈಗಾಗಲೇ ಗೊತ್ತಿದ್ದಂತೆ, ಈ ನಿರ್ಮಲ ಕರ್ನಾಟಕ ಅಥವಾ ಸ್ವಚ್ಛ ಗ್ರಾಮ, ಶೌಚಾಲಯಗಳ ನಿರ್ಮಾಣ ಇವುಗಳ ಬಗ್ಗೆ ನಾವೆಲ್ಲಾ ಹೆಚ್ಚು ಮಾತನಾಡುತ್ತೇವೆ. ನಾವು ಭೌತಿಕ ಗುರಿಯನ್ನು ಇಟ್ಟುಕೊಳ್ಳತಕ್ಕಂಥದ್ದರ ಕಡೆಗೆ ಪ್ರಯತ್ನವನ್ನು ಮಾಡುತ್ತೇವೆಯೇ ವಿನಃ ಭೌತಿಕ ಗುರಿಗೆ ಸಂಬಂಧಪಡುವಂತೆ ಆರ್ಥಿಕ ಗುರಿಗಳೇನು ಅನ್ನತಕ್ಕಂಥದ್ದನ್ನು ನಾವು ನೋಡುವುದಿಲ್ಲ ಆ ಆರ್ಥಿಕ ಗುರಿಗಳ ಯೋಜನೆಯನ್ನೇ ತಾವು ಇಟ್ಟುಕೊಳ್ಳುವುದಾಗಿದ್ದರೆ, 500 ರೂಪಾಯಿಗಳನ್ನು ನಾವು ಸಬ್ಸಿಡಿ ಕೊಟ್ಟರೆ, ಯಾರೂ ಕೂಡ ಶೌಚಾಲಯಗಳನ್ನು ಕಟ್ಟಲಿಕ್ಕಾಗುವುದಿಲ್ಲ. 20 ಸಾವಿರ

ರೂಪಾಯಿಗಳಷ್ಟು ವಾರ್ಷಿಕ ಆದಾಯ ಇರತಕ್ಕಂಥ ಕರ್ನಾಟಕದಲ್ಲಿ ಇರುವಂತಹ ಜನ ಸಾಮಾನ್ಯ ಮೂರೂವರೆ ಸಾವಿರ ರೂಪಾಯಿಗಳು ಕನಿಷ್ಟ ಇಲ್ಲದಿದ್ದರೆ, ಒಂದು ಉತ್ತಮವಾದಂತಹ, ಯಾವುದೇ ತರವಾಗಿರತಕ್ಕಂಥ ಐಷಾರಾಮಿ ಅಲ್ಲದಂತಹ ಒಂದು ಶೌಚಾಲಯವನ್ನು ಕಟ್ಟಬೇಕಾಗುತ್ತದೆ. ಈ ಶೌಚಾಲಯವನ್ನು ಕಟ್ಟಬೇಕಾಗಿದ್ದರೂ ಕೂಡ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಇರತಕ್ಕಂಥ ಕುಂದು ಕೊರತೆಗಳು ತಮಗೆ ಗೊತ್ತಿವೆ, ಹಿಂದೆ ನಾವು ಬಡತನ ಸೀಮಾ ರೇಖೆಯ ಕೆಳಗಡೆ ಇರತಕ್ಕಂಥವರಿಗೆ ಎರಡು ಸಾವಿರ ರೂಪಾಯಿಗಳು, ಬಡತನ ಸೀಮಾ ರೇಖೆಯ ಮೇಲೆ ಇರತಕ್ಕಂತವರಿಗೆ 1200 ರೂಪಾಯಿಗಳನ್ನು ನಾವು ಉಚಿತವಾಗಿ ಕೊಡುತ್ತೇವೆ ಅನ್ನತಕ್ಕಂಥ ಕಾರ್ಯಕ್ರಮ ನಿರ್ಮಲ ಕರ್ನಾಟಕದಲ್ಲಿ ಪ್ರಾರಂಭ ಮಾಡಿದ್ದೆವು. ದಕ್ಷಿಣ ಕನ್ನಡ ಜಿಲ್ಲೆ. ಅಂದರೆ ಅವತ್ತಿನ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗವನ್ನು ಬಿಟ್ಟರೆ, ಪ್ರಾಯಶಃ ನಮ್ಮ ಬಯಲು ಸೀಮೆಯಲ್ಲಿ ಬಹಳ ಅಗತ್ಯವಾಗಿ ಇರಬೇಕಾಗಿರತಕ್ಕಂಥ ಈ ಕಾರ್ಯಕ್ರಮ, ಅದು ಯಶಸ್ವಿಯಾಗಲಿಲ್ಲ. ಕನ್ನಡ ವಿಶ್ವವಿದ್ಯಾನಿಲಯದ ಮೂಲಕವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಈ ಶೌಚಾಲಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಗಿರುವ ಕುಂದು ಕೊರತೆಗಳು ಮತ್ತು ಪ್ರಗತಿಯ ವಿಚಾರದಲ್ಲಿ ಒಂದು ಅಧ್ಯಯನ ಮಾಡಿ ವರದಿಯನ್ನು ಕೊಡಬೇಕು ಎಂದು ಕೇಳಿದಂತಹ ಸಂದರ್ಭದಲ್ಲಿ ಅವರು ಹೇಳಿದರು. ಸುಮಾರು ಶೇಕಡ 10ರಷ್ಟು ಶೌಚಾಲಯಗಳೇ ಇಲ್ಲ. ಇದರ ಜೊತೆಗೆ ನೂರಕ್ಕೆ 60ರಷ್ಟು ಹಿಂದುಳಿದ ಜನಾಂಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಈ ಶೌಚಾಲಯಗಳನ್ನು ಕಟ್ಟಿದರೂ ಕೂಡ ಯಾವ ಉದ್ದೇಶಕ್ಕಾಗಿ ಶೌಚಾಲಯಗಳನ್ನು ಬಳಸಬೇಕಾಗಿತ್ತೋ, ಆ ಉದ್ದೇಶಕ್ಕಾಗಿ ಅವುಗಳನ್ನು ಬಳಸದೆ, ಅವುಗಳನ್ನು ಅನ್ಯ ಕಾರಣಗಳಿಗಾಗಿ ಉಪಯೋಗಿಸಿದ್ದಾರೆ ಅನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದಾರೆ. ಅಂದರೆ ಇದು ದೂರದ ದಾರಿಯನ್ನು ಕ್ರಮಿಸಬೇಕಾಗಿದೆ. ನಾವು ಬಹಳ ದೂರ ಹೋಗಬೇಕಾಗಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ, ನಿಮಗೆಲ್ಲಾ ಗೊತ್ತಿದೆ, ಶೌಚಾಲಯಕ್ಕೆ ಹೋಗತಕ್ಕಂಥದ್ದಕ್ಕೆ ನಾವು ಬಹಿರ್ದೆಸೆ ಎಂದು ಕರೆಯುತ್ತೇವೆ, ಬಯಲಿಗೆ ಹೋಗುವುದು ಎಂದು ಕರೆಯುತ್ತೇವೆ. ಬಯಲಿಗೆ ಹೋಗುವುದು ಎಂದರೆ, ಎಲ್ಲಿ ಬೇಕೋ ಅಲ್ಲೇ defacation ಮಾಡತಕ್ಕಂಥ ಪದ್ಧತಿ ಇವತ್ತಿಗೂ ಇರತಕ್ಕಂಥದ್ದು ಗೊತ್ತಿದೆ. ನಿಮಗೆಲ್ಲಾ ಒಂದು ವಿಚಾರ ಹೇಳುತ್ತೇನೆ. ಹಿಂದೆ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಮ್ಮ ಭಾರತೀಯರಲ್ಲಿ ಈ ಹಳ್ಳಿಗಾಡಿನ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ದುರ್ಭರದ ಪರಿಸ್ಥಿತಿ ಇದೆ ಎಂದರೆ, ಹಿಂದೆ ಸಾಮಾನ್ಯವಾಗಿ ಇರತಕ್ಕಂಥ ಒಂದು ತಮಾಷೆಯ ವಿಚಾರವನ್ನು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಕ್ರುಶ್ಚೇವ್‌ರವರು ಭಾರತಕ್ಕೆ ಬಂದಾಗ ನೆಹರೂರವರು ದೆಹಲಿಯ ಪಕ್ಕದಲ್ಲಿ ಇರತಕ್ಕಂಥ ಪಂಜಾಬಿನ ಕೆಲವು ಹಳ್ಳಿಗಳಿಗೆ ಅವರನ್ನು ಕರೆದುಕೊಂಡು ಹೋದರು. ಅವರು ಆ ಹಳ್ಳಿಗಳನ್ನು ನೋಡಿಕೊಂಡು, ಬಹಳ ಖುಷಿಯಾಗಿ ವಾಪಸ್ಸು ಬರುವಾಗ, ದೆಹಲಿಯ ಹತ್ತಿರದಲ್ಲಿ ಇರತಕ್ಕಂಥ ಕೆಲವು ಹಳ್ಳಿಗಳಲ್ಲಿ ರಸ್ತೆ ಮೇಲೆ ಸಾಲಾಗಿ ಜನಗಳು ಕುಳಿತಿದ್ದರು ಆಗ ಕ್ರುಶ್ಚೇವ್ ಇವರು ಏಕೆ ಸಾಲಾಗಿ ಕುಳಿತಿದ್ದಾರೆ ಎಂದು ಕೇಳುತ್ತಾರೆ. ಇದರಿಂದ ನೆಹರೂರವರಿಗೆ ಬಹಳ ಸಂಕೋಚವಾಯಿತು. ಆದರೆ ಅನಿವಾರ್ಯವಾಗಿ, ನಮ್ಮ ಅತಿಥಿಗಳು, ಅವರಿಗೆ ಹೇಳಲೇಬೇಕು

ಎನ್ನುವಂತಹ ಕಾರಣಕ್ಕಾಗಿ, ಇಲ್ಲಾ ಅವರು ಬಹಿರ್ದೆಸೆಗೆ ಹೋಗಿದ್ದಾರೆ, ನಮ್ಮಲ್ಲಿ ಬಹಳ ಅನಿಷ್ಟವಾದಂತಹ ಪದ್ಧತಿ ಇದೆ ಎಂದು ತಲೆತಗ್ಗಿಸಿ ನೆಹರೂರವರು ಹೇಳಿದರು. ಆಗ ಕುಶ್ಚೇವ್‌ರವರು ಇದೇನಾದರೂ ನನ್ನ ದೇಶದಲ್ಲಿ ನಡೆದಿದ್ದರೆ, ಅಂತಹ ಪ್ರತಿಯೊಬ್ಬರನ್ನೂ ಸಾಲಾಗಿ ನಿಲ್ಲಿಸಿ ಗುಂಡೇಟಿನಿಂದ ಅವರನ್ನು ಕೊಂದು ಬಿಡುತ್ತಿದ್ದೆ, ಸುಟ್ಟು ಹಾಕುತ್ತಿದ್ದೆ ಎಂಬ ಮಾತನ್ನು ಹೇಳುತ್ತಾರೆ. ಮುಂದೆ ನೆಹರೂರವರು ಮಾಸ್ಕೋಗೆ ಹೋಗುತ್ತಾರೆ. ಅವರು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ, ಅವರು ಅಲ್ಲಿಯ ಹಳ್ಳಿಗಳ ಪ್ರಗತಿಯನ್ನು ನೋಡಿ ವಾಪಸ್ಸು ಮಾಸ್ಕೋಗೆ ಬರಬೇಕಾದರೆ, ರಾತ್ರಿ ಹೊತ್ತಿನಲ್ಲಿ ರಸ್ತೆಯಲ್ಲಿ ಒಂದಿಬ್ಬರು ಆ ರಸ್ತೆಯ ಬದಿಗೆ ಕುಳಿತಿದ್ದರು. ನೆಹರೂರವರಿಗೆ ಬಹಳ ಖುಷಿಯಾಗುತ್ತದೆ. ಓಹೋ! ಇಲ್ಲಿಯೂ ಕೂಡ ಇಂತಹ ಅನಿಷ್ಟ ಪರಂಪರೆ ಇದೆ ಎಂದು ಭಾವಿಸಿ, ಕುಶ್ಚೇವ್‌ರವರಿಗೆ ಏಕೆ ಜನ ಇಲ್ಲಿ ಕುಳಿತಿದ್ದಾರೆ ಎಂದು ಕೇಳುತ್ತಾರೆ. ಇವರಿಗೆ ಬಹಳ ನಾಚಿಕೆಯಾಗುತ್ತದೆ. ಅವರು ಎಲ್ಲಿದ್ದರೂ ಕೂಡ ಅವರನ್ನು ಹಿಡಿದುಕೊಂಡು ಬನ್ನಿ, ಅವರನ್ನು arrest ಮಾಡಿ ಎಂದು ಅವರು ಹೇಳುತ್ತಾರೆ. ಆದರೆ ತಮಾಷೆ ಏನೆಂದರೆ, ಅವರನ್ನು ಹಿಡಿದುಕೊಂಡು ಬಂದಾಗ, ಅವರಿಬ್ಬರೂ ಭಾರತೀಯರಾಗಿದ್ದರು. ಅವರೇನೂ ರಷ್ಯಾದವರಾಗಿರಲಿಲ್ಲ. ಆದ್ದರಿಂದ ನಮ್ಮ ಈ ಅನಿಷ್ಟ ಪರಂಪರೆಯನ್ನು ತೊಲಗಿಸಬೇಕಾಗಿದ್ದರೆ, ಆ ಶೌಚಾಲಯಕ್ಕೆ ಸಂಬಂಧಪಟ್ಟಂತಹ ಐನೂರು ರೂಪಾಯಿಗಳ ಯೋಜನೆಯನ್ನೇನು ಕೇಂದ್ರ ಸರ್ಕಾರ ಕೊಟ್ಟಿದೆಯೋ, ಅದೊಂದು ತೋರಿಕೆಯ ಕಾರ್ಯಕ್ರಮ. ಆ ತೋರಿಕೆಯ ಕಾರ್ಯಕ್ರಮಕ್ಕೆ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಈ ವರ್ಷ ನಾವು ಬಹಳ ದೊಡ್ಡ ಪ್ರಮಾಣದಲ್ಲಿ ನೈರ್ಮಲ್ಯದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ, ಈ ಐನೂರು ರೂಪಾಯಿಗಳಿಗೆ ಏನೂ ಕೂಡ ಆಗುವುದಿಲ್ಲ, ಇದನ್ನು ಮಾನ್ಯ ಹಣಕಾಸಿನ ಸಚಿವರು ನೋಡಿ ಇದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು. ಸಂಪೂರ್ಣ ನೈರ್ಮಲ್ಯ ಆಂದೋಲನ ಆಗಬೇಕು ಎನ್ನುವಂತಹ ಬಯಕೆ ನಿಮಗಿದ್ದರೆ, ಬೇರೆ ಬೇರೆ ವಿಷಯದಲ್ಲಿ ನಾವು ಪ್ರಗತಿಯನ್ನು ಸಾಧಿಸಿದ್ದೇವೆ, ಇಲ್ಲವೆಂದು ನಾನು ಹೇಳುವುದಿಲ್ಲ, ಆದರೆ ನೈರ್ಮಲ್ಯದ ಕಡೆಗೆ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಗಿರತಕ್ಕಂಥ ಕಾರಣ ಇರುವುದರಿಂದ, ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೆ, ಕೇಂದ್ರದವರು ಅಭಿವೃದ್ಧಿಗೆ ಸಂಬಂಧಪಟ್ಟಂತೆ 8.1ರಷ್ಟು ಪ್ರತಿಶತ ಅಭಿವೃದ್ಧಿಯನ್ನು ನಾವು ಕಾಣುತ್ತೇವೆ ಎಂದು ಹೇಳಿ, ಸ್ಥಿರ ಬೆಲೆಗಳ ಲೆಕ್ಕಾಚಾರದ ಮೂಲಕವಾಗಿ ನಾವು ಪ್ರಾಥಮಿಕ ವಲಯದಲ್ಲಿ ಇದ್ದಂತಹ 6.3%ನ ಉತ್ಪಾದನಾ ವೇಗವನ್ನು ಉತ್ಪಾದನಾ ವಲಯದಲ್ಲಿ ಇರುವಂತಹ 5.7%ನ್ನು ನಾವು 8.7%ಗೆ ತೆಗೆದುಕೊಂಡು ಹೋಗುತ್ತೇವೆ ಎನ್ನುವಂತಹದ್ದನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಬಹುತೇಕವಾಗಿ ನಿಲುಕಲಾರದಂತಹ ಒಂದು ಗುರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ನೆಲುವಿಗೆ ಹಾರದ ಬೆಕ್ಕು, ಆಕಾಶಕ್ಕೆ ಹಾರೀತೇ? ಅನ್ನತಕ್ಕಂಥ ಒಂದು ಗಾದೆ ಮಾತು ಇದೆ. ಆ ನೆಲುವಿಗೆ, ಅಲ್ಲಿ ಬೆಣ್ಣೆ ಇಟ್ಟಿರುತ್ತಾರೆ, ಮಜ್ಜಿಗೆ ಇಟ್ಟಿರುತ್ತಾರೆ, ಅದನ್ನು ಬೆಕ್ಕು ಹಾರಿ ತಿನ್ನಬೇಕಾಗುತ್ತದೆ. ಈಗ ನಾವು ಸ್ಥಿರ ಬೆಲೆಯ ಆಧಾರದ ಮೇಲೆ ಏನಾದರೂ ಮಾಡುತ್ತೇವೆ ಎನ್ನುವುದಾದರೆ, ಉತ್ಪಾದನಾ ವಲಯದಲ್ಲಿ ಇರತಕ್ಕಂಥದ್ದು ಈ ವರ್ಷದಲ್ಲಿ 5.7 ಇದೆ, ಅದು ಪ್ರಾಥಮಿಕ ವಲಯದಲ್ಲಿ ....

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನೋಡಿ, Deputy Chief Minister ಇಲ್ಲ. OK ಆ ಸದನಕ್ಕೆ ಅವರ ಅವಶ್ಯಕತೆ ಇದೆ, ಆದ್ದರಿಂದ ಅವರು ಅಲ್ಲಿಗೆ ಹೋಗಲಿ Principal Secretary, Finance ಯವರಾದರೂ ಇಲ್ಲಿ ಇರುವುದು ಬೇಡವೇ? ಇಲ್ಲಿ Secretary, Finance, Miss Latha ರವರು ಮಾತ್ರ ಇದ್ದಾರೆ. ಅದು ನನಗೆ ಗೊತ್ತು. ಮಾನ್ಯ ಅರ್ಥ ಮಂತ್ರಿಗಳು ಇಲ್ಲದಂತಹ ಸಂದರ್ಭದಲ್ಲಿ Principal Secretary, Finance ರವರಾದರೂ ಇಲ್ಲಿರಬೇಕಲ್ಲವೇ? ಎಲ್ಲರೂ ಆ ಕಡೆಯೇ ಹೊರಟು ಹೋಗುವುದಾದರೆ, ಮತ್ತೆ ಇಲ್ಲಿ ಏಕೆ ಚರ್ಚೆಯಾಗಬೇಕು?

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿರವರೆ, ಒಂದು ನಿಮಿಷ. ಮಾನ್ಯ Deputy Chief Minister ರವರೂ ಕೂಡ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ನಡೆಯುತ್ತಿರುವುದು ಪೂರಕ ಅಂದಾಜುಗಳ ಮೇಲಿನ ಚರ್ಚೆ.

ಉಪಾಧ್ಯಕ್ಷರು : ಗೋಕುಲ್‌ರಾಂರವರು ಇಷ್ಟೊತ್ತು ಇಲ್ಲೇ ಇದ್ದರು. ಅವರನ್ನು ಒಂದೆರಡು ನಿಮಿಷಗಳಲ್ಲಿ ಕರೆಸುತ್ತೇನೆ. ಅವರು ಈಗ ಬರುತ್ತಾರೆ ಅವರು ಮಾತನಾಡಲಿ.

SRI BASAVARAJA RAYA REDDY : Let me complete

ಉಪಾಧ್ಯಕ್ಷರು : ತಾವು ಹೇಳಿದ್ದು ನನಗೆ ಅರ್ಥವಾಯಿತು.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಸದಸ್ಯರು ಹೇಳಿದ್ದನ್ನು ನಾವು ನೋಟ್ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ :- ಮಂತ್ರಿಗಳು ನೋಟ್ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳಲಿಲ್ಲ, ನಾನು ಹೇಳುತ್ತಿರುವುದು ಇಷ್ಟೆ, ಪ್ರಕಾಶ್‌ರವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಆ ಸದನಕ್ಕೆ ಅವಶ್ಯಕತೆ ಇದೆ ಮಾನ್ಯ ಮಂತ್ರಿಗಳು ಹೋಗಲಿ. ಕೊನೇ ಪಕ್ಷ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಇಲ್ಲವೆಂದರೆ ಹೇಗೆ, ಮುಖ್ಯ ಕಾರ್ಯದರ್ಶಿಗಳೂ ಇಲ್ಲ.

ಉಪಾಧ್ಯಕ್ಷರು : ಗೋಕುಲರಾಮ್‌ರವರು ಇದ್ದಾರೆ. ರಾಯರೆಡ್ಡಿಯವರೇ.....

ಶ್ರೀ ಗೋವಿಂದ ಎಂ.ಕಾರಜೋಳ : ಹಣಕಾಸು ಇಲಾಖೆಯ ಕಾರ್ಯದರ್ಶಿ ಲತಾ.....

ಶ್ರೀ ಬಸವರಾಜ ರಾಯರೆಡ್ಡಿ: ನನಗೆ ಗೊತ್ತು ಗೋವಿಂದ ಕಾರಜೋಳರವರೇ, ನಿಮ್ಮಿಂದ ಕಲಿತುಕೊಳ್ಳಬೇಕಾ ಅವರು ಕಾರ್ಯದರ್ಶಿ ಎಂದು ಹೇಳಿ. ನಾನು ಹೇಳುವುದು ಇಷ್ಟೆ, ಯಾರಾದರೂ ಒಬ್ಬರು ಇರಬೇಕಲ್ಲಾ, ಅಲ್ಲಿ ಚರ್ಚೆ ಪೂರಕ ಅಂದಾಜುಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಇಲ್ಲ ನಡೆಯುತ್ತಿರುವುದು ಬಜೆಟ್ ಮೇಲಿನ ಚರ್ಚೆ. ಬಜೆಟ್ ಮೇಲಿನ ಚರ್ಚೆ ಆಗಿರುವುದರಿಂದ ಅವರು ಇರಬೇಕಾಗುತ್ತದೆ. ಮಾನ್ಯ ಪ್ರಕಾಶ್‌ರವರು ಕೆಲವು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ, ನಾವೂ ಕೆಲವು ಸಲಹೆಗಳನ್ನು ಕೊಡುತ್ತೇವೆ, ಅದನ್ನು ನೋಟ್ ಮಾಡುವವರು ಯಾರು? ದಯವಿಟ್ಟು ಒಬ್ಬರಿಗಾದರೂ ಕರೆಸಿ. Please call the Principal Secretary .

ಉಪಾಧ್ಯಕ್ಷರು: ಕಾರ್ಯದರ್ಶಿಗಳಾದ ಲತಾ ಕೃಷ್ಣರಾವ್ ರವರು ಇದ್ದಾರೆ. ಕರೆಯುವುದಕ್ಕೂ ಹೋಗಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರು ಎತ್ತಿದಂತಹ ಪ್ರಶ್ನೆ ಬೇರೆ ಸಂದರ್ಭದಲ್ಲಿ ಆದರೆ ಬಹಳ ಸಮಂಜಸವಾಗುತ್ತಿತ್ತು, ಪೂರಕ ಅಂದಾಜುಗಳು ವಿಧಾನ ಪರಿಷತ್ತಿನಲ್ಲಿ ನಡೆಯುವಾಗ ಮಾನ್ಯ ಹಣಕಾಸಿನ ಸಚಿವರಿಗೆ ನೆರವನ್ನು ಕೊಡಬೇಕೆನ್ನುವ ಕಾರಣಕ್ಕಾಗಿ ಪ್ರಧಾನ ಕಾರ್ಯದರ್ಶಿಯವರು ಹೋಗಿದ್ದಾರೆ, ಆದರೆ ಮತ್ತೊಬ್ಬ ಕಾರ್ಯದರ್ಶಿಗಳು ಇಲ್ಲಿ ಇದ್ದಾರೆ. ಮತ್ತು ಎಲ್ಲಾ ಮಂತ್ರಿಗಳೂ ಕೂಡ ಇದ್ದಾರೆ. ಉಭಯ ಸದನಗಳು ಸೇರಿದಂತಹ ಸಂದರ್ಭದಲ್ಲಿ ಆಗತಕ್ಕಂತಹ ಒಂದು ಸಣ್ಣ ವಿಷಯ ವಿನ: ಇದು ಉದ್ದೇಶಪೂರ್ವಕವಾಗಿ ಆಗಿರುವಂಥದ್ದು ಅಲ್ಲ, ಕೆಲವು ಸಂದರ್ಭಗಳಲ್ಲಿ ಆಗುತ್ತದೆ. ಇದನ್ನು ಇವರು ಗಮನದಲ್ಲಿಟ್ಟುಕೊಂಡೇ ಎಲ್ಲರೂ ಹಾಜರಾಗಿರತಕ್ಕಂಥದ್ದು ನಾವು ಕಂಡಿದ್ದೇವೆ. ಈ ಆಯವ್ಯಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಪ್ರತಿಶತವಾಗಿ ಬೆಳೆಸುತ್ತೇವೆ, ಎನ್ನತಕ್ಕಂತಹ ಮಾತು ಏನಿದೆ, ಇದು ನಿಜವಾಗಿಯೂ ಕೂಡ ಕಾರ್ಯಸಾಧುವಲ್ಲದ ಒಂದು ಬಯಕೆ. ಅದನ್ನು ನಾವು ಭ್ರಮೆ ಎಂದು ಕರೆಯಬೇಕಾಗುತ್ತದೆ. ಅದು ನಮ್ಮ ಉದ್ದೇಶ ಎಂದೂ ಕೂಡ ಕರೆಯುವುದಕ್ಕಾಗುವುದಿಲ್ಲ. ಕನಸಾಗಿದ್ದರೆ ಅದನ್ನು ನನಸು ಮಾಡಬಹುದಾಗಿತ್ತು. ಅದರೆ ಬರೀ ನಮ್ಮ ವಿಶ್‌ಫುಲ್ ಥಿಂಕಿಂಗ್ ಎಂದು ಕರೆಯುತ್ತೇವೆ. ನಾವು ಏನೋ ಇದು ಆಗಿ ಬಿಡಬಹುದು ಎಂದು ತಿರುಕನ ಕನಸಿನ ತರಹ ಆಗುತ್ತದೆ. ಆದ್ದರಿಂದ ಒಂದು ನೈಜವಾದ ಪ್ರವೃತ್ತಿಯ ಮೂಲಕ ಕೇಂದ್ರ ಸರ್ಕಾರದವರ ಪ್ರತಿಶತ 8.1 ಜಿಡಿಪಿ ಗ್ರೋಥನ್ನು ಕೂಡ ಸಂಶಯ ಪಡತಕ್ಕಂತಹವರು ಇದ್ದಾರೆ. ಅದು ಅಷ್ಟು ಆಗಿಲ್ಲ ಎನ್ನತಕ್ಕಂತಹ ಮಾತೂ ಕೂಡ ಇದೆ. ಅದು ಏನಾದರೂ ಇರಲಿ, ಈ ಸಂದರ್ಭದಲ್ಲಿ ಸನ್ಮಾನ್ಯ ಉಪಾಧ್ಯಕ್ಷರೆ, ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥದ್ದರಲ್ಲಿ ಉತ್ತಮವಾದ ವಿಷಯಗಳನ್ನು ಹೇಳುತ್ತಿದ್ದಾರೆ. ಅದರಲ್ಲಿ ಶೇಕಡ ನಾಲ್ಕರಷ್ಟು ಬಡ್ಡಿ ದರದಲ್ಲಿ ಕೃಷಿ ಸಾಲ ನೀಡುವ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಇದು ನಿಜವಾಗಿಯೂ ಕೂಡ ಅಭಿನಂದನೀಯವಾಗಿರತಕ್ಕಂತಹ ಸಂಗತಿ. ನಾವು ಶೇಕಡ ಆರು ಪರ್ಸೆಂಟ್ ಮಾಡಿದಂತಹ ಸಂದರ್ಭದಲ್ಲಿ ಬಹಳ ದೊಡ್ಡ ಮೆಚ್ಚುಗೆ ಆಯಿತು. ಭಾರತ ದೇಶದ ಯಾವ ರಾಜ್ಯಗಳೂ ಕೂಡ ಆರು ಪರ್ಸೆಂಟ್‌ಗೆ ಬರಲಿಲ್ಲ. ಆದರೆ ಆದರಿಂದ ಒಂದು ಪೂರಕವಾದ ಪ್ರತಿಕ್ರಿಯೆ ಪ್ರಾರಂಭವಾಗಿ ಏಳು ಪರ್ಸೆಂಟ್ ಗೆ ಕೇಂದ್ರದ ಆಯವ್ಯಯದಲ್ಲಿ ಪ್ರಸ್ತಾಪಿಸಲ್ಪಟ್ಟಿತು. ಇದು ಪ್ರಾಯಶ: ಕರ್ನಾಟಕದ ಆಯವ್ಯಯದಲ್ಲಿ ಮಾನ್ಯ ಸಿದ್ದರಾಮಯ್ಯನವರು ಅವತ್ತು ತೆಗೆದುಕೊಂಡ ನಿಲುವೇ ಆಗಿರಬಹುದು, ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ ತೆಗೆದುಕೊಂಡತಹ ನಿಲುವು ಈ ಆರು ಪರ್ಸೆಂಟ್‌ಗೆ ಸಾಲ ಕೊಡತಕ್ಕಂಥದ್ದು ಕೇಂದ್ರ ಸರ್ಕಾರದಲ್ಲಿಯೂ ಕೂಡ ಚರ್ಚಿತವಾಗಿ ಅವರು ಅದನ್ನು ಏಳು ಪರ್ಸೆಂಟ್‌ಗೆ ಇಳಿಸತಕ್ಕಂಥದ್ದು ಆಯಿತು. ಆದರೂ ಕೂಡ ಕೇಂದ್ರ ಸರ್ಕಾರದವರು ಎಷ್ಟು ಜಿಪುಣರಾಗಿದ್ದಾರೆಂದರೆ ಕೃಷಿ ಸಾಲಕ್ಕೆ ಮಾತ್ರ ಏಳು ಪರ್ಸೆಂಟ್ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಅದೂ ಕೂಡ ಕೇವಲ ಮೂರು ವರ್ಷಗಳಿಗೆ ಮಾತ್ರ ಪ್ರಾಯೋಗಿಕವಾಗಿ ಅದನ್ನು ಅಳವಡಿಸುತ್ತೇವೆ ಎನ್ನ ತಕ್ಕಂತಹ ಮಾತನ್ನು ಹೇಳುತ್ತಾರೆ. ಭಾರತ ಸರ್ಕಾರ ಒಂದು ದೊಡ್ಡ ಯೋಜನೆಗಳನ್ನು ರೂಪಿಸತಕ್ಕಂತಹ ಸರ್ಕಾರ ಬಡವರ ಪರವಾಗಿ ಯೋಚನೆ ಮಾಡಬೇಕಾಗಿರತಕ್ಕಂತಹ ಡಾ : ಮನಮೋಹನಸಿಂಗ್ ರವರ ನೇತೃತ್ವದ ಸರ್ಕಾರದವರು ಏಳು ಪರ್ಸೆಂಟ್ ಬಡ್ಡಿಯನ್ನು ಕೇವಲ ಕೃಷಿ ಬೆಳೆ ಸಾಲಕ್ಕೆ ಮಾತ್ರ ಸೀಮಿತಗೊಳಿಸಿ, ಅದನ್ನು ಮೂರು

ವರ್ಷದ ಪ್ರಾಯೋಗಿಕ ಅವಧಿಗೆ ಮಾತ್ರ ಹೇಳಿರುವಂಥದ್ದು ನಿಜವಾಗಿ ಕೂಡ ಸರಿಯಾದುದು ಅಲ್ಲ. ಈ ಸರ್ಕಾರ ರೂಪಿಸಿರತಕ್ಕಂತಹ ಶೇಕಡ ನಾಲ್ಕು ಪರ್ಸೆಂಟ್ ಬಡ್ಡಿಯ ವ್ಯವಸ್ಥೆಯನ್ನು ನೋಡಿಕೊಂಡ ಮೇಲೆ, ಕೇಂದ್ರ ಸರ್ಕಾರದವರೂ ಕೂಡ ನಾವು ಆರು ಪರ್ಸೆಂಟ್ ಅಥವಾ ನಾಲ್ಕು ಪರ್ಸೆಂಟ್‌ಗೆ ಇಳಿಸುವುದನ್ನು ಮಾಡಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ನಾವು ಆ ಸಂದರ್ಭದಲ್ಲಿ ಯೋಚನೆ ಮಾಡಿದೆವು, ನಾವು ಒಂದು ಪರ್ಸೆಂಟ್ ಬಡ್ಡಿಯನ್ನು ಸಬ್ಸಿಡಿಯಾಗಿ ಕೊಟ್ಟು ವಾಣಿಜ್ಯ ಬ್ಯಾಂಕುಗಳು ಏಳು ಪರ್ಸೆಂಟ್ ಇದ್ದರೆ ಅದನ್ನು ಆರು ಪರ್ಸೆಂಟ್‌ಗೆ ತೆಗೆದುಕೊಂಡು ಬಂದು, ವಾಣಿಜ್ಯ ಬ್ಯಾಂಕುಗಳಲ್ಲಿ ಕರ್ನಾಟಕದ ರೈತ ಸಮುದಾಯ ತೆಗೆದುಕೊಳ್ಳತಕ್ಕಂತಹ ಸಾಲಕ್ಕೆ ಒಂದು ಪರ್ಸೆಂಟ್ ರಿಯಾಯಿತಿಯನ್ನು ಕೊಡಬೇಕೆನ್ನುವುದನ್ನು ನಾವು ವ್ಯಾಪಕವಾಗಿ ಚರ್ಚೆ ಮಾಡಬೇಕು. ಪ್ರಾಯಶ: ಆದಾದರೆ ಉತ್ತರ ಸಿಗಬಹುದು ಎಂದು ಹೇಳಿ. ಆದರೆ ಇವತ್ತು ಮಾನ್ಯ ಯಡಿಯೂರಪ್ಪನವರು ಈ ನಮ್ಮ ಹಣಕಾಸಿನ ಸ್ಥಿತಿಯಲ್ಲಿ ಕರ್ನಾಟಕ ಸರ್ಕಾರ ತೋರಿಸಿದ ಸಾಧನೆಯನ್ನು ಪರಿಗಣಿಸಿಕೊಂಡು ಶೇಕಡ ನಾಲ್ಕು ಪರ್ಸೆಂಟ್‌ಗೆ ಅದನ್ನು ಇಳಿಸಿರುವುದರಿಂದ ನಮ್ಮೆಲ್ಲರ ಅಭಿನಂದನೆಗೆ ಮತ್ತು ಅಭಿಮಾನಕ್ಕೆ ಅವರು ಪಾತ್ರರಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು ಇದು ನಾವೆಲ್ಲರೂ ಕೂಡಮೆಚ್ಚಬೇಕಾಗಿರತಕ್ಕಂತಹ ಒಂದು ಕಾರ್ಯಕ್ರಮ.

ಶ್ರೀ ಎಸ್.ಎಸ್. ಪಾಟೀಲ್: ಪ್ರಕಾಶ್‌ರವರೇ, ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಒಳ್ಳೆಯ ಕಾರ್ಯಕ್ರಮ. ದಯವಿಟ್ಟು ತಾವು ಇಲ್ಲಿ ಲಕ್ಷ್ಯ ಕೊಡಬೇಕು. ಈ ಪರಿಸ್ಥಿತಿ ಆದರೆ ಸಹಕಾರಿ ಸಂಸ್ಥೆಗಳು ಉಳಿಯುತ್ತವೆ ಹೇಗೆ? ಆ ಮೇಲೆ ಮುಂದೆ ನಾವು ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ ಹೇಗೆ? ಸಹಕಾರಿ ಸಂಸ್ಥೆಗಳು ಮುಚ್ಚಿ ಹೋಗುತ್ತವೆ. ಇವತ್ತು ಪರಿಸ್ಥಿತಿ ನಿಮಗೆ ಹೇಳುತ್ತೇನೆ. ಇನ್ನೂ 800 ಕೋಟಿ ರೂಪಾಯಿಗಳನ್ನು ತುಂಬಬೇಕಾಗಿದೆ. ಒಂದು ಲ್ಯಾಂಡ್ ಬ್ಯಾಂಕ್‌ಗೆ 226 ಕೋಟಿ ರೂಪಾಯಿ ತುಂಬಬೇಕು, ಅಪೆಕ್ಸ್ ಬ್ಯಾಂಕ್‌ಗೆ 600 ಕೋಟಿ ರೂಪಾಯಿ ತುಂಬಬೇಕು. ಈಗಾಗಲೇ ಅದಕ್ಕೆ 80 ಕೋಟಿ ರೂಪಾಯಿ ಬಡ್ಡಿ ಆಗಿದೆ. ನಾವು ಮೊನ್ನೆ ಲೆಕ್ಕ ಹಾಕಿದೆವು. ಈಗ ಇಲ್ಲಿಯವರೆಗೆ ಏನು ತುಂಬಿಲ್ಲ ಅದಕ್ಕೆ 80 ಕೋಟಿ ರೂಪಾಯಿ ಬಡ್ಡಿ ಆಗುತ್ತದೆ. ಇನ್ನು ಇವರು ಎಷ್ಟು ತುಂಬುತ್ತಾರೆ ನೋಡಿ, ಹೀಗಾದರೆ ಸಂಸ್ಥೆಗಳು ಉಳಿಯುವುದಿಲ್ಲ. ಇದನ್ನು ನೀವು ಮಾಡುತ್ತಿದ್ದರೆ ರೈತರಿಗೆ ಒಳ್ಳೆಯ ಕೆಲಸ. ನಾಲ್ಕು ಪರ್ಸೆಂಟ್‌ಗೆ ಕೊಟ್ಟಿದ್ದು ಬಹಳ ಒಳ್ಳೆಯದು. ಆದರೆ ಅದನ್ನು ತಕ್ಷಣ ತುಂಬುವಂತಹ ವ್ಯವಸ್ಥೆ ಆಗಬೇಕು. ಇದು ಹಿಂದಿನಿಂದ ಬಂದಿದೆ. ಪ್ರಕಾಶ್‌ರವರೇ, ಇದು ಇವತ್ತೇನೂ ಆಗಿಲ್ಲ. ನಾನು ಹಿಂದೆ ಸಹಕಾರಿ ಮಂತ್ರಿ ಇದ್ದಾಗ ಮಾನ್ಯ ಕೃಷ್ಣರವರ ಕಡೆಯಿಂದ ಬೈಸಿಕೊಂಡು ಆರು ನೂರು ಕೋಟಿ ರೂಪಾಯಿ ತುಂಬಿದ್ದೇನೆ, ಐದು ವರ್ಷದ ಮೇಲೆ. ಇದೇ ಪರಿಸ್ಥಿತಿ ಮುಂದುವರಿದರೆ ರೈತರಿಗೆ ಸಾಲ ಕೊಡುವುದಕ್ಕೂ ಆಗುವುದಿಲ್ಲ, ಎಲ್ಲಿಂದಲೂ ಸಾಲ ಹುಟ್ಟುವುದಿಲ್ಲ, ಎಲ್ಲಾ ಸಂಸ್ಥೆಗಳು ಮುಳುಗಿ ಹೋಗುತ್ತವೆ. ಇದಕ್ಕೆ ಏನು ಮಾಡುತ್ತೀರಿ, ಇದಕ್ಕೆ ತಮ್ಮ ಸಲಹೆ ಏನೆಂದು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಹಿಂದೆ ಒಂದು ಕಾಲ ಇತ್ತು. ನಾವು ಪ್ರಾರಂಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಪ್ರಾರಂಭವಾದಾಗ ಈ ಬಡ್ಡಿ ಮನ್ನದ ಯೋಜನೆಯನ್ನು ಪ್ರಥಮ ಬಾರಿಗೆ ತಂದಂತಹವರು ನಾವು. ಆ ಸಂದರ್ಭದಲ್ಲಿ 18,000 ಕೋ-ಅಪರೇಟಿವ್ ಸೊಸೈಟಿಗಳಿಗೆ ಕೊಡಬೇಕಾದ ಹಣ ಕೊಡಲಿಲ್ಲ. ಅವೆಲ್ಲವೂ ಬಹಳ ಅನಾರೋಗ್ಯದ ಸ್ಥಿತಿಗೆ ಬಂದವು ಎಂದು ತಮಗೆ ಗೊತ್ತಿದೆ. ಈಗ ಸುಮಾರು 27,000 ಕ್ಕಿಂತಲೂ ಹೆಚ್ಚು ನಮ್ಮ ಸೇವಾ ಸಹಕಾರ ಸಂಘಗಳು ಇವೆ. ಅದಕ್ಕೆ ನಾವು ಹಣಕಾಸನ್ನು ಕೊಡದೇ ಇದ್ದರೆ ಅವು ರೋಗಗ್ರಸ್ಥ ಆಗುತ್ತದೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವೂ ಕೂಡ ಹಿಂದೆ ಸಹಕಾರಿ ಮಂತ್ರಿಗಳಾಗಿ ಕೆಲಸ ಮಾಡಿದಂತಹವರಾಗಿದ್ದೀರಿ, ತಮಗೆ ಗೊತ್ತಿದೆ, ಅನೇಕ ಸೇವಾ ಸಹಕಾರ ಸಂಘಗಳು ಸಕ್ಕರೆ, ಅಕ್ಕಿ ಮತ್ತು ಗೋಧಿ ಮಾರತಕ್ಕಂತಹ ಸಂಸ್ಥೆಗಳು ಆಗಿದ್ದವೇ ವಿನಃ ಅವು ನಿಜವಾಗಿಯೂ ಕೂಡ ಜನತೆಗೆ ಸಹಾಯ ಮಾಡತಕ್ಕಂತಹ ರೀತಿಯ ಶಕ್ತಿ ಅವರಿಗೆ ಇರಲಿಲ್ಲ. ಈ ಯೋಜನೆಯಿಂದ ಆಗರಿತಕ್ಕಂಥದ್ದರ ಫಲ ಏನು ಎಂದರೆ, ಅವೆಲ್ಲವೂ ಕೂಡ ಸಶಕ್ತ ಆದವು ಈಗ. ಈ ಹಣವನ್ನು ರಾಜ್ಯ ಸರ್ಕಾರ ತುಂಬಿ ಕೊಡುತ್ತದೆ. ಇಲ್ಲದಿದ್ದರೆ ನಾವು ಅಲ್ಲಿ ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದವರಾಗಲಿ ಅಥವಾ ನಬಾರ್ಡ್ ಬ್ಯಾಂಕ್‌ದವರಾಗಲಿ ಒಪ್ಪುವುದಿಲ್ಲ. ತಾವು ಹೇಳಿದಂತಹ ಮಾತಿಗೆ ನಾನು ಬರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಅವುಗಳ ಪರಿಸ್ಥಿತಿ ನೋಡಿದರೆ ಸಶಕ್ತ ಆಗಿಲ್ಲ ಅವು ಅದರ ಲೆಕ್ಕ ನೀವು ತರಿಸಿ. ಎಷ್ಟು 5,000 ಚಿಲ್ಲರೆ ಸೊಸೈಟಿಗಳಲ್ಲಿ ಎಷ್ಟು ಹಾನಿಗೊಳಗಾಗಿವೆ, ಎಷ್ಟು ಸರಿ ಇವೆ, ಗ್ಯಾಪ್ ಎಷ್ಟು ಇದೆ? ಬರೀ ಲ್ಯಾಂಡ್ ಬ್ಯಾಂಕಿನ ಗ್ಯಾಪ್ ಇವತ್ತು ಕೊಟ್ಟಿದ್ದಾರೆ, 193 ಕೋಟಿರೂ ಗ್ಯಾಪ್ ಆಗಿದೆ. 193 ಕೋಟಿ ರೂ; ಹಾನಿ ಬೇರೆ. ಸುಮಾರು ಸಾವಿರಾರು ಕೋಟಿ ರೂ ಹಾನಿಯಲ್ಲಿವೆ. ಹೇಳುವಾಗ ಸಶಕ್ತ ಆಗಿವೆ ಎಂದು ಹೇಳುವುದು ತತ್ವದ ಮಾತು ಬೇರೆ. ಆದರೆ ನಿಜವಾಗಿ ಇದ್ದಂತಹ ಪರಿಸ್ಥಿತಿ cleansing the balance sheet ಏನು ಇದೆ ಅದನ್ನು ನಾವು ಸರಿಯಾಗಿ ಮಾಡಿ ಕೊಡದೆ ಇದ್ದರೆ, ಪುನ: ಇದನ್ನು ಇನ್ನು ಎರಡು ವರ್ಷ- ಮೂರು ವರ್ಷ ನಾವು 800 ಕೋಟಿ ರೂಪಾಯಿ ತುಂಬಿದರೆ ಸಂಪೂರ್ಣವಾಗಿ ಅಶಕ್ತ ಆಗಿ ಹೋಗುತ್ತದೆ.

ಶ್ರೀ ಡಿ.ಆರ್.ಪಾಟೀಲ್: ಈ ವರ್ಷ ಕೇಂದ್ರ ಸರ್ಕಾರದ ಬಜೆಟ್‌ದಲ್ಲಿ ಈ ಕೋ-ಅಪರೇಟಿವ್ ಕ್ರೆಡಿಟ್ ಸ್ಟ್ರಕ್ಚರ್ ಅನ್ನು rejuvenate ಮಾಡುವುದಕ್ಕೆ 14,000 ಕೋಟಿ ರೂಪಾಯಿ ಇಟ್ಟಿದ್ದಾರೆ. ಅದರ ಉಪಯೋಗ ಮಾಡಿಕೊಂಡು ನಾವು ಇವುಗಳೆಲ್ಲವನ್ನೂ ಸಶಕ್ತವಾಗಿ ಮಾಡಬಹುದು.

ಶ್ರೀ ಎಸ್.ಎಸ್. ಪಾಟೀಲ್: ಬಜೆಟ್‌ನಲ್ಲಿ ಅದಕ್ಕೆ ಏನೂ ಹಣ ಇಟ್ಟಿಲ್ಲ. ಒಂದು ಸಾರಿ ನಾವು cleansing the balance sheet ಮಾಡಿಕೊಳ್ಳದೆ ಹೋದರೆ ಸಹಕಾರಿ ಸಂಸ್ಥೆಗಳು ಸಂಪೂರ್ಣವಾಗಿ ಮುಚ್ಚಿ ಹೋಗುತ್ತವೆ. ಇನ್ನೊಂದು ಐದು ವರ್ಷ ಉಳಿಯುತ್ತವೆ ಅಷ್ಟೆ ಇದೇ ಸ್ಥಿತಿ ಇದ್ದರೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲರ ಆತಂಕಕ್ಕೆ ಯಾವ ಸಕಾರಣ ಕೂಡ ಇಲ್ಲ. ನಿಮಗೆಲ್ಲಾ ಗೊತ್ತಿದ್ದಂತೆ ಮೂರನೇ ಪೂರಕ ಅಂದಾಜುಗಳಲ್ಲಿ 400 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ರೈತರ ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಯೋಜನೆ ಅಡಿ ಆಯವ್ಯಯದಲ್ಲಿ ಕೊರತೆ ಆದ ಕಾರಣ 400 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಹಿಂದೆ ಕೂಡ 267 ಕೋಟಿ ರೂಪಾಯಿಗಿಂತ ಹೆಚ್ಚು ಕೊಟ್ಟಿದ್ದೆವು.

ಶ್ರೀ ಎಸ್.ಎಸ್. ಪಾಟೀಲ್ : ಅದು ಸಂಪೂರ್ಣ ಅಲ್ಲ. 800 ಕೋಟಿ ರೂ ನಲ್ಲಿ 400 ಕೋಟಿ ರೂ ಕೊಟ್ಟಿದ್ದಿರಿ. 400 ಕೋಟಿ ರೂ ಕೊಟ್ಟು ಈಗ ಒಂದು ವರ್ಷ ಆಗಿದೆ. 800 ಕೋಟಿ ರೂ ಒಂದು ವರ್ಷ ಕೊಡುವುದು ಅದರ ಬಡ್ಡಿ 100 ಕೋಟಿ ರೂ ಆಗುತ್ತದೆ. ಗ್ಯಾಪ್ ಆಗುತ್ತದೆ. ನಾನು ಹೇಳುವುದು ಮಾಡುವುದು ಸರಿ ಇದೆ. ಆದರೆ ಆ ಸಂಸ್ಥೆಗಳು ಉಳಿಯುವಂತಹ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸುಮ್ಮನೆ ನಾವು ಇದನ್ನು ಹೇಳುವುದು ಆಗುತ್ತದೆ. ಸಹಕಾರಿ ಸಂಸ್ಥೆಗಳ ಮೇಲೆ ಇಲ್ಲಿ ಒಮ್ಮೆ ಚರ್ಚೆ ಇಡಿ. ಸಹಕಾರಿ ಮಂತ್ರಿಗಳ ಬಳಿ ಮಾಹಿತಿ ಇದೆ ಅದನ್ನೆಲ್ಲಾ ತರಿಸಿ, ಅದರ ಮೇಲೆ ಚರ್ಚೆ ನಡೆಯಲಿ. ಅವು ಸಶಕ್ತ ಆಗಿವೆ, ಹಾಳಾಗಿವೆ ಎಂದೂ ಕೂಡ ಚರ್ಚೆಯಾಗಲಿ. ಸುಮ್ಮನೆ ಇಲ್ಲಿ ಹೇಳಿ ಹೋಗಿ ಬಿಟ್ಟರೆ ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಈ ಯೋಜನೆಯ ಸದುದ್ದೇಶ ಮತ್ತು ಇದರ ಪರಿಣಾಮದ ಬಗ್ಗೆ ತಾವು ಮೆಚ್ಚುಗೆಯನ್ನು ಸೂಚಿಸಿದ್ದೀರಿ. ತಮಗೆ ಇರತಕ್ಕಂತಹ ಆತಂಕ ಇಷ್ಟೆ, ನೀವು ಇಂತಹ ಯೋಚನೆಗಳನ್ನು ಪ್ರಕಟಿಸಿ ಹಣವನ್ನು ಕೊಡದೇ ಇದ್ದರೆ, ಅವೆಲ್ಲವೂ ನಿಶ್ಯಕ್ತ ಆಗುತ್ತವೆ ಎಂದು ನಿಮ್ಮ ಆತಂಕ. ಆದರೆ ಈ ಸರ್ಕಾರ ಹೆಜ್ಜೆ ಇಟ್ಟಿರತಕ್ಕಂಥದ್ದನ್ನು ತಾವು ಯೋಚನೆ ಮಾಡಬೇಕು. ಮೂರನೆಯ ಪೂರಕ ಬೇಡಿಕೆಯಲ್ಲಿ 400 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ನೀವೇ ಹಿಂದೆ ಸಹಕಾರಿ ಮಂತ್ರಿಗಳಾಗಿದ್ದಿರಿ, ನೂರಕ್ಕೆ ತೊಂಬತ್ತೆಂಟು ಭಾಗದಷ್ಟು ಪಿ.ಎಲ್.ಡಿ. ಬ್ಯಾಂಕ್‌ಗಳು ರೋಗಗ್ರಸ್ಥವಾಗಿದ್ದವು. ಈಗ ನಾವು ಈ ಯೋಜನೆಯನ್ನು ತಂದು, ಹಣಕಾಸಿನ ನೆರವನ್ನು ಕೊಟ್ಟ ತಕ್ಷಣವೇ, ಸರ್ಕಾರ ಅದರ ಯೋಜನೆಯನ್ನು ಕೈಗೊಂಡು, ಬಡ್ಡಿ ಕಟ್ಟಿದ ತಕ್ಷಣವೇ ನೂರಕ್ಕೆ ತೊಂಬತ್ತೊಂಬತ್ತರಷ್ಟು ಇವತ್ತು ಎಲ್ಲ ಪಿ.ಎಲ್.ಡಿ. ಬ್ಯಾಂಕ್‌ಗಳು ಸ್ವಶಕ್ತವಾಗಿವೆ ಮತ್ತು ಅವು ಇವತ್ತು ಸಾಲ ಕೊಡತಕ್ಕಂಥ ಯೋಗ್ಯತೆಯನ್ನು ಮತ್ತು ಅರ್ಹತೆಯನ್ನು ಪಡೆದುಕೊಂಡಿವೆ. ಆದರೆ ಹಣವನ್ನು ನಾವು ಕೊಡಬೇಕಾದರೆ ....

ಶ್ರೀ ಎಸ್.ಎಸ್. ಪಾಟೀಲ್: ಪ್ರಕಾಶ್‌ರವರೆ ಇವತ್ತೇ ಅದರ ಲೆಕ್ಕ ತರಿಸಿದ್ದೇನೆ. ಏಕೆಂದರೆ ಮಾತನಾಡುವ ಮುಂಚೆಯೇ ಇದು ಚರ್ಚೆಯಾಗಬೇಕು. 226 ಕೋಟಿ ಅವರಿಗೆ ತುಂಬಬೇಕು. 297 ಕೋಟಿ ಗ್ಯಾಪ್ ಇದೆ. ಡಿ.ಸಿ.ಆರ್.ಡಿ. ಬ್ಯಾಂಕ್‌ನಲ್ಲಿ ಗ್ಯಾಪ್ ಇದೆ. ಅಂದರೆ ಸಂಪೂರ್ಣ ಸಾಲ ವಸೂಲಾದರೂ ಕೂಡ ಇನ್ನೂ 300 ಕೋಟಿ ರೂಪಾಯಿ ಕಡಿಮೆ ಬೀಳುತ್ತದೆ ಹಂಡ್ರೆಡ್ ಪರ್ಸೆಂಟ್ ರಿಕವರಿ ಆದರೂ 300 ಕೋಟಿ ತುಂಬುವವರು ಯಾರು?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಹಿಂದೊಂದು ಕಾಲದಲ್ಲಿ ಆದಂಥ ಅನುಭವಗಳ ಮೂಲಕ ನಾವು ಪಾಠವನ್ನು ಕಲಿತಿದ್ದೇವೆ. ಹಿಂದೆ ಐದೈದು ವರ್ಷಗಳೇ ಆಗಿದ್ದರೂ ಕೂಡ ನಾವು ಹಣಕಾಸನ್ನು ಅವರಿಗೆ ಕಟ್ಟಿರಲಿಲ್ಲ. ಪ್ರಥಮ ಬಾರಿ ನಾವು 148 ಕೋಟಿ ರೂಪಾಯಿಗಳನ್ನು ಶ್ರೀಮಾನ್ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾದಂಥ ಸಂದರ್ಭದಲ್ಲಿ ಈ ಬಡ್ಡಿಮನ್ನಾ ಮಾಡಿದಂಥ ಸಂದರ್ಬ ಅದಾದ ನಂತರ ದೇವೇಗೌಡರ ಕಾಲದಲ್ಲಿ, ಜೆ.ಹೆಚ್.ಪಟೇಲರ ಕಾಲದಲ್ಲಿ ಒಟ್ಟು ಮೂರನೆಯ ಬಾರಿಯಾಗಿ, ಇದು ಈಗ ನಾಲ್ಕನೆಯ ಬಾರಿ ಆಗಿರತಕ್ಕಂಥದ್ದು, ಎಂಬುದನ್ನು ತಾವು ಕಂಡಿದ್ದೀರಿ. ಈಗ 2006 ಮತ್ತು 2007ರ ಆಯವ್ಯಯದಲ್ಲಿ ಯಾವುದೇ ತರಹದ ವ್ಯತ್ಯಾಸ ಇಲ್ಲದಂಥ ರೀತಿಯಲ್ಲಿ ಹೆಚ್ಚಿನ ಹಣವನ್ನು ಕೊಡಲಿಕ್ಕೂ ಕೂಡ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ. ಆ ಯಾವುದೇ ಸೇವಾ ಸಹಕಾರ ಸಂಘಗಳಾಗಲಿ ಅಥವಾ ಸಹಕಾರದ ಸಂಘ ಸಂಸ್ಥೆಗಳು, ಹಣಕಾಸಿನ ಸಂಸ್ಥೆಗಳಾಗಲಿ ಸರ್ಕಾರದವರು ಕೊಡಬೇಕಾಗಿರತಕ್ಕಂಥ ಬಡ್ಡಿಯನ್ನು ತುಂಬದೇ ಇರತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಇದು ನಮ್ಮ ಬದ್ಧತೆ. ಈ ಸರ್ಕಾರ ಅದನ್ನು ನಡೆಸೇ ತೀರುತ್ತದೆ ಎನ್ನತಕ್ಕಂಥ ಮಾತನ್ನೂ ಕೂಡ ನಾನು ಹೇಳುತ್ತೇನೆ. ಆದ್ದರಿಂದ ತಾವು ಅಂಥ ಅತಂಕಕ್ಕೆ ಒಳಪಡಬೇಕಾಗಿರತಕ್ಕಂಥ ಅಗತ್ಯತೆ ಇಲ್ಲ. ಅದಕ್ಕಾಗಿ ಈಗ ಮೂರನೆಯ ಪೂರಕ ಬಜೆಟ್‌ನಲ್ಲಿ 400 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದೇ, ನಾವು ಯಾವ ದಿಸೆಯಲ್ಲಿ ನಮ್ಮ ಹೆಜ್ಜೆಯನ್ನು ಇಡುತ್ತೇವೆ ಎನ್ನುವುದಕ್ಕೆ ಒಂದು ಮಾರ್ಗಸೂಚಿ ಎಂದು ತಾವು ಭಾವಿಸಬಹುದು. ಆ ಕಾರಣಕ್ಕಾಗಿ ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು 4 ಪರ್ಸೆಂಟ್ ಬಡ್ಡಿಗೆ ಕೊಟ್ಟಿರತಕ್ಕಂಥದ್ದು ಒಂದು ದಿಕ್ಸೂಚಿಯಾಗುತ್ತದೆ. ಭಾರತ ಸರ್ಕಾರದವರೂ ಕೂಡ ಇದರ ಬಗ್ಗೆ ಯೋಜನೆಯನ್ನು ಮಾಡಬೇಕಾಗುತ್ತದೆ. ಮುಂದಿನ ದಿನಮಾನಗಳಲ್ಲಿ ನಾವು "ಕ್ಯಾಟಲಿಸ್ಟಿಕ್ ಫೋರ್ಸ್" ಎಂದು ಏನು ಕರೆಯುತ್ತೇವೆ, ಇಂಥ ವಿಚಾರಗಳನ್ನು ಯೋಚನೆ ಮಾಡುವುದರಲ್ಲಿ ಕರ್ನಾಟಕವೇ ಹರಿಕಾರರಾಗಿ ಮಾನ್ಯ ಚಿದಂಬರಂರವರ ಮೇಲೆ ಅಥವಾ ಮುಂದಿನ ಹಣಕಾಸಿನ ಕೇಂದ್ರದಲ್ಲಿರತಕ್ಕಂಥ ಸಚಿವರ ಮೇಲೆ ಒಂದು ಒತ್ತಡವನ್ನು ತರುವುದಕ್ಕೆ ಸಾಧ್ಯವಾಗುತ್ತೆದೆ. ಆ ಕಾರಣಕ್ಕಾಗಿಯೇ, ನಾವು ಈ ಸರ್ಕಾರದ ಹಣಕಾಸಿನ ಸಚಿವರನ್ನು ನಾವು ಖಂಡಿತವಾಗಿಯೂ ಅಭಿನಂದಿಸಬೇಕಾಗುತ್ತದೆ. ಇಲ್ಲಿ ಕೆಲವು ವಿಚಾರಗಳನ್ನು ಅವರು ಹೇಳುತ್ತಾ ಹೋಗಿದ್ದಾರೆ. ಕರ್ನಾಟಕ ಸಂಸ್ಕೃತಿ ಸಂರಕ್ಷಣೆ ಪ್ರಾಧಿಕಾರದ ರಚನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದರ ಅಗತ್ಯ ಇಲ್ಲ ಏಕೆಂದರೆ ಈಗಾಗಲೇ ಪ್ರಾಧಿಕಾರಗಳು ಬೇಕಾದಷ್ಟು ಇವೆ. ಈಗಾಗಲೇ ನಮಗೆ ಗೊತ್ತಿದ್ದಂತೆ ನಾವು ಏನು ಸರ್ಕಾರದ ಯೋಜನೇತರ ವೆಚ್ಚಗಳನ್ನು ಹೆಚ್ಚು ಖರ್ಚು ಮಾಡುತ್ತಿದ್ದೇವೆ ಆ ವೆಚ್ಚ ಖರ್ಚು ಮಾಡಬೇಕಾದಂಥ ನಿಯಂತ್ರಣ ಮಾಡಬೇಕಾಗುತ್ತದೆ. ಅದಕ್ಕೆ " ಸಂಸ್ಕೃತಿ ಸಂರಕ್ಷಣ ಪ್ರಾಧಿಕಾರ " ಎನ್ನತಕ್ಕಂಥದ್ದನ್ನು ರಚನೆ ಮಾಡಬೇಕಾಂಥ ಅಗತ್ಯತೆ ಇಲ್ಲ. ನಮ್ಮ ಸಂಸ್ಕೃತಿ ವಿಚಾರದಲ್ಲಿ ಒಂದು ರಾಷ್ಟ್ರೀಯ ನೀತಿ ಎನ್ನತಕ್ಕಂಥದ್ದು ಇಲ್ಲಿಯವರೆಗೂ ಇಲ್ಲ. ಆದರೆ ನಮ್ಮದೇ ಆಗಿರತಕ್ಕಂಥ ಒಂದು ಪರಂಪರಿಕವಾದಂಥ ಸಾಂಸ್ಕೃತಿಕ ಪರಿಕಲ್ಪನೆಯ ಹಿನ್ನಲೆಯಲ್ಲಿ ಆ ತರಹ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿರತಕ್ಕಂಥದ್ದು ನಿಜ. ಆದರೆ ಅದಕ್ಕೆ ಇವೊತ್ತು ನಾವು ಸುಮಾರು 40 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸುವರ್ಣ ಕರ್ನಾಟಕದ ಕಾರ್ಯ ಕ್ರಾರ್ಯಕ್ರಮಗಳಿಗಾಗಿ ಖರ್ಚು ಮಾಡುತ್ತೇವೆ. ಈ ಸಂಸ್ಕೃತಿ

ಸಂರಕ್ಷಣ ಪ್ರಾಧಿಕಾರ ರಚನೆ ಕಾರ್ಯಕ್ರಮದ ಬದಲು ನಮ್ಮಲ್ಲಿರತಕ್ಕಂಥ ಏಳು ಅಕಾಡಮಿಗಳೇನಿವೆ ಆ ಅಕಾಡೆಮಿಗಳು ಸಾಹಿತ್ಯ, ಸಂಗೀತ, ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ, ಉರ್ದು ಅಕಾಡೆಮಿ, ಕೊಂಕಣಿ ಅಕಾಡೆಮಿ, ತುಳು ಅಕಾಡೆಮಿ, ಇಂಥ ಅಕಾಡೆಮಿಗಳೇನಿವೆ ಅವಕ್ಕೆ ನಾವು ಕೊಡತಕ್ಕಂಥ ಹಣ ಕೇವಲ 15 ಲಕ್ಷ ರೂಪಾಯಿಗಳು ಮಾತ್ರ. ಈ 15 ಲಕ್ಷ ರೂಪಾಯಿಗಳಲ್ಲಿ ಅವರು ಹೆಚ್ಚು ಪರಿಣಾಮಕಾರಿಯಾಗಿರತಕ್ಕಂಥ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಸುವರ್ಣ ಕರ್ನಾಟಕದ ಈ ಸಂಧರ್ಬದಲ್ಲಿ 40 ಕೋಟಿ ರೂಪಾಯಿಗಳನ್ನು ಕನಿಷ್ಟವಾಗಿಯೂ ಕೊಡುವುದಾದರೆ ಈ ಎಲ್ಲ ಅಕಾಡೆಮಿಗಳಿಗೂ ಹಣವನ್ನು ಕೊಡುವುದು ದ್ವಿಗುಣಗೊಳಿಸತಕ್ಕಂಥ ಕಾರ್ಯಕ್ರಮವಾಗಬೇಕು. ಉತ್ತಮ ಚಲನಚಿತ್ರಕ್ಕೆ ನಾವು 20 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿರುವ ಹಾಗೆ ಅದೇ ರೀತಿಯಾಗಿ ಇಂಥದ್ದನ್ನು ಮಾಡಿದರೆ ನಾವು ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬಸವ ಕಲ್ಯಾಣ ಮತ್ತು ಕಾಗಿನೆಲೆ ಕ್ಷೇತ್ರಗಳಿಗೆ ಅಭಿವೃದ್ಧಿಗಾಗಿ ಹಿಂದೆ 5 ಕೋಟಿ ರೂಪಾಯಿಗಳನ್ನು ಬಸವಕಲ್ಯಾಣಕ್ಕೆ ಕೊಟ್ಟಿತ್ತು, ಈಗ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಿಂದೆ 3 ಕೋಟಿ ರೂಪಾಯಿಗಳನ್ನು ಕಾಗಿನೆಲೆಗೆ ಇಟ್ಟಿದ್ದು ಈಗ ಅದಕ್ಕೆ ನಾವು 5 ಕೋಟಿ ರೂಪಾಯಿಗಳಿಗೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದಕ್ಕೆ ನಾನು ಮಾನ್ಯ ಹಣಕಾಸಿನ ಸಚಿವರನ್ನು ಅಭಿನಂದಿಸುತ್ತೇನೆ. ಈ ಸಲ ಅದನ್ನು ಖರ್ಚು ಮಾಡತಕ್ಕಂಥ ರೀತಿಯಲ್ಲಿ ಕೂಡ ನಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಇಂಥ ಒಂದು ಸ್ಥಳಗಳನ್ನು ನಾವು ಗುರುತಿಸುವಾಗ 20 ಕೋಟಿ ರೂಪಾಯಿಗಳೂ ಕೂಡ ಕಡಿಮೆಯಾಗುತ್ತದೆ. ಇನ್ನೊಂದು ಯೋಜನೆ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಸನ್ನತಿ ಪ್ರಾಧಿಕಾರವನ್ನು ಮಾಡಬೇಕು ಎನ್ನುವಂಥ ಪ್ರಸ್ತಾಪವನ್ನು ಕಳೆದ ಸರ್ಕಾರದಲ್ಲಿ ಧರ್ಮಸಿಂಗ್‌ರವರ ನೇತೃತ್ವದಲ್ಲಯೇ ಆಯಿತು. ಅದನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಪ್ರಸ್ತಾಪವನ್ನು ಈ ಸದನದಲ್ಲಿ ಮಾಡಿದರು. ಸನ್ನತಿ ಎನ್ನತಕ್ಕಂಥದ್ದು ಭೀಮಾ ನದಿಯ ದಂಡೆಯಲ್ಲಿ ಇರತಕ್ಕಂಥದ್ದು. ಗುಲ್ಬರ್ಗಾ ಜಿಲ್ಲೆಯಲ್ಲಿ. ಅದು ಒಂದು ಬೌದ್ಧರ ವಿಹಾರ. ಮತ್ತು ಅಲ್ಲಿ ಒಂದು ಚೈತನ್ಯ ಇತ್ತು ಬೌದ್ಧರ ದೊಡ್ಡ ಪ್ರಭಾವಕ್ಕೆ ಒಳಗಾಗಿರತಕ್ಕಂಥ ಕೃಷ್ಣಾ ಮತ್ತು ಭೀಮಾ ನದಿಗಳು ಕರ್ನಾಟಕ ರಾಜ್ಯದಲ್ಲಿ ಹರಿದುಹೋಗುತ್ತಿದೆ. ಚೈತನ್ಯ, ವಿಹಾರ, ಸ್ತೂಪ, ಇವುಗಳಿಗೆ ಸಂಬಂಧಪಟ್ಟಂತೆ ಆಂಧ್ರ ಮತ್ತು ಕರ್ನಾಟಕದಲ್ಲಿ ಬೌದ್ಧರ ಒಂದು ದೊಡ್ಡ ಪರಂಪರೆ ನಮ್ಮಲ್ಲಿವೆ. ಚಿತಾಪುರ್ ಜಿಲ್ಲೆಯಲ್ಲಿ ನಾಗಾವಿ ಎನ್ನುವಂಥ ವಿಶ್ವವಿದ್ಯಾಲಯವೂ ಕೂಡ ಇದೆ ಆ ನಾಗಾವಿ ವಿಶ್ವವಿದ್ಯಾಲಯ ತಕ್ಷರ ಮತ್ತು ನಮ್ಮ ಪಾಟಲೀಪುತ್ರದ ಪಕ್ಕದಲ್ಲಿ ನಳಂದ ವಿಶ್ವವಿದ್ಯಾಲಯಕ್ಕೆ ಸಮಾನವಾಗಿರತಕ್ಕಂಥ ವಿಶ್ವವಿದ್ಯಾಲಯವನ್ನು ಬುದ್ಧರ ಕಾಲದಲ್ಲಿ ಚಿತಾಪುರ್ ಜಿಲ್ಲೆಯ ನಾಗಾವಿಯಲ್ಲಿತ್ತು. ಅದಕ್ಕಾಗಿಯೇ ಅದನ್ನು ನಾವು ಘಟಿಕಾ ಸ್ಥಾನ ಎಂದು ನಾವು ಕರೆಯುತ್ತೇವೆ. ನಮ್ಮ ಕನ್‌ವೊಕೇಶನ್ ಎನ್ನತಕ್ಕಂಥದ್ದನ್ನು ಘಟಿಕೋತ್ಸವ ಎಂದು ಹೇಗೆ ನಾವು ಪರಿವರ್ತನೆಗೊಳಿಸುತ್ತೇವೆ, ಹಾಗೆಯೇ ಈ ಬೌದ್ಧರ ಪರಿಕಲ್ಪನೆಯಲ್ಲಿರ ತಕ್ಕಂಥ ಶಿಕ್ಷಣ ವಿಚಾರದಲ್ಲಿ 64 ಬದುಕಿಗೆ ಬೇಕಾಗಿರತಕ್ಕಂಥ ವಿದ್ಯೆಯನ್ನು ಕಲಿಸತಕ್ಕಂಥದ್ದೇ ಘಟಿಕಾ ಸ್ಥಾನವಾಗಿ ಪರಿವರ್ತನೆಗೊಳ್ಳುತ್ತದೆ. ಅದನ್ನೂ ಕೂಡ ಸನ್ನತಿ ಪ್ರಾಧಿಕಾರದಲ್ಲಿ ಸೇರಿಸಬೇಕು ಎನ್ನುವಂಥ ಪ್ರಸ್ತಾಪ ನಮ್ಮಲ್ಲಿತ್ತು ಮಾನ್ಯ ಯಡಿಯೂರಪ್ಪನವರು ಈ ಬಾರಿ ಕಾಗಿನೆಲೆಗೆ ಸಂಬಂಧಪಟ್ಟಂತೆ, ಗುಡುತಡಿಗೆ

ಏನಾದರೂ ಅವರು ಯೋಜನೆ ಮಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಆ ಸಂದರ್ಭದಲ್ಲಿರಯೂ ಕೂಡ ಸನ್ನತಿ ಪ್ರಾಧಿಕಾರವನ್ನು ಮಾಡಬೇಕಾಗಿರುತ್ತದೆ. ಅದು ಹಿಂದಿನ ಸರ್ಕಾರಕ್ಕೆ, ಅವರು ಮಾಡಿದಂಥ ಕಾರ್ಯಕ್ರಮಕ್ಕೆ ನಾವು ತೋರಿಸಬೇಕಾಗಿರತಕ್ಕಂಥ ಗೌರವ. ನಾವು ಸರ್ಕಾರ ಎನ್ನತಕ್ಕಂಥದ್ದು ಪರಂಪರೆ ಇರತಕ್ಕಂಥದ್ದು. ಧರ್ಮಸಿಂಗ್‌ರವರು ಅಥವಾ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದ್ದರು. ಅದನ್ನು ನಾವು ಒತ್ತಿ ಪ್ರಸ್ತಾಪ ಮಾಡಿದ್ದೇವೆ ಎಂದು ಹೇಳಿ ಕೈಬಿಡತಕ್ಕಂಥದ್ದಲ್ಲ. ಈ ದೇಶದಲ್ಲಿ ಬೌದ್ಧರು ಕೊಟ್ಟಿರತಕ್ಕಂಥ ಒಂದು ದೊಡ್ಡ ಕೊಡುಗೆ ಅದು. ಸಂಸ್ಕೃತಿಯನ್ನು, ಧರ್ಮವನ್ನು ರೂಪಿಸಲಿಕ್ಕೆ ಅವರು ಮಾಡಿದಂಥ ಒಂದು ದೊಡ್ಡ ಪ್ರಯತ್ನ. ಇವುಗಳನ್ನು ನಾವು ಮೆಚ್ಚಲೇ ಬೇಕಾದ ಕಾರಣವಾಗಿರುವುದರಿಂದ ಒಂದು ಘಟಿಕಾ ಸ್ಥಾನಕ್ಕೆ ಸಂಬಂಧಪಡುವಂಥ ಸನ್ನತಿ ಮತ್ತು ನಾಗಾವಿ ಈ ಪ್ರದೇಶಗಳನ್ನು ಕೂಡಿರತಕ್ಕಂಥದ್ದರ ಕಡೆಗೆ ಅವರು ಕೆಲಸವನ್ನು ಮಾಡಬೇಕಾಗುತ್ತದೆ. ಎರಡನೆಯದು ನಾನು ಒಪ್ಪದೇ ಇರತಕ್ಕಂಥ ಮಾತು ಸನ್ಮಾನ್ಯ ಉಪಾಧ್ಯಕ್ಷರೆ, ಅವರವರ ಜಿಲ್ಲೆ ಅವರವರ ಕ್ಷೇತ್ರದ ಬಗ್ಗೆ ಹೆಚ್ಚು ಅಭಿಮಾನಿಗಳಾಗಿರಬೇಕಾದಂಥದ್ದು, ಅಧಿಕಾರ ಬಂದಾಗ ಅವುಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸುವುದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲವೂ ಕೂಡ ಶಿವಮೊಗ್ಗ ಜಿಲ್ಲೆಗೇ ತೆಗೆದುಕೊಂಡು ಹೋಗತಕ್ಕಂಥದ್ದು.....

ಶ್ರೀ ಜೆ.ಸಿ. ಮಾಧುಸ್ವಾಮಿ: ಒಪ್ಪುತ್ತೇನೆ ಎಂದು ತಾವು ಹೇಳಬಾರದು. ನೋಡಿ ನಾವು ಕಂಟೆಪ್ಟ್ ಮಾಡಿಬಿಡುತ್ತೇವೆ. ನಾಳೆ ನಾವು ಕಂಟೆಂಪ್ಟ್ ಪ್ರೊಸಿಡಿಂಗ್ಸ್ ಮೂವ್ ಮಾಡುತ್ತೇವೆ. ಮಂತ್ರಿಗಳೆಲ್ಲಾ ಅವರವರ ಜಿಲ್ಲೆಗೆ ಮಾಡಿಕೊಳ್ಳುವುದಕ್ಕೆ ಶುರು ಮಾಡಿದರೆ, ನೀವು ನೆಕ್ಸ್ಟ್ ಹೇಳುವುದಕ್ಕೆ ಹೊರಟಿರುವುದು ಸರಿ, ಒಪ್ಪುತ್ತೇನೆ ಎಂದು ದಯವಿಟ್ಟು ಹೇಳಬೇಡಿ. ಏಕೆಂದರೆ ಎಲ್ಲ ಮಂತ್ರಿಗಳು, ಮುಖ್ಯಮಂತ್ರಿಗಳು ಅವರವರ ಜಿಲ್ಲೆಗಳಿಗೆ, ಅವರವರ ಕ್ಷೇತ್ರಗಳಿಗೆ ಯೋಜನೆಗಳನ್ನು ಮಾಡಿಕೊಳ್ಳುವುದಕ್ಕೆ ಶುರು ಮಾಡಿಬಿಟ್ಟರೆ ರಾಜ್ಯ ಎಂದು ಕರೆಯುವುದು ಯಾರನ್ನು.

ಶ್ರೀ ಎಂ.ಪಿ.ಪ್ರಕಾಶ್: ಹಾಗೆ ಹೇಳುವುದಾದರೆ ನೀವು ಶಾಸಕರ ಅನುದಾನವನ್ನು ಸಂಸತಿನ ಸಂಸದರ ಅನುದಾನವನ್ನು ಕೈಬಿಡಬೇಕು ಎಂದು ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಏಕೆಂದರೆ ನಮ್ಮ ಅಭಿವೃದ್ಧಿಯ ಪರಿಕಲ್ಪನೆಗಳಲ್ಲಿ, ಯೋಜನೆಯ........

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದ್ನಿಮಿಷ ಸಾರ್. ನಾವು ಈಗಲೂ ಹೇಳುತ್ತಿದ್ದೇವೆ, ತಾವೇನು ಜಿಲ್ಲಾ ಪ್ಲಾನಿಂಗ್ ಕಮಿಟಿ ಇದೆ ಅದನ್ನೇ ನೀವು existence ಗೆ ತರಬೇಕು, ಅವರು ಪ್ಲಾನ್ ಮಾಡಿದ್ದರಲ್ಲಿ ನಾವು ಆಯ್ಕೆ ಮಾಡುವಂಥ ಸ್ಥಿತಿ ನಿರ್ಮಾಣ ಮಾಡಿದರೆ ಮಾತ್ರ ಈ ರಾಜ್ಯ ಉಳಿಯುತ್ತದೆ. ಅದನ್ನು ಬಿಟ್ಟು ಹೀಗೆ ಡಿಸ್ಕ್ರಿಶನಲ್ಲಿ ಈ ರಾಜ್ಯವನ್ನು ಡೆವಲಪ್ ಮಾಡುವುದಕ್ಕೆ ಆಗುವುದಿಲ್ಲಾ ನಮಗೆ ಬೇಕಾದ್ದನ್ನು ನಾವು ಮಾಡಿಕೊಂಡು ಹೋದರೆ ಗತಿ ಏನು ನಾಳೆ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಾರಂಭದಲ್ಲಿಯೇ ಹೇಳಿದೆ. ಜನರ ಯೋಜನೆಗಳು ಬೇರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನಾವು ಜಿಲ್ಲಾ ಪ್ಲಾನ್ ಮಾಡುವುದರ ಜೊತೆಗೆ ಲೋಕಸಭಾ ಸದಸ್ಯರ ನಿಧಿಯೂ ಇರಬಾರದು.

ಶ್ರೀ ಎಂ.ಪಿ. ಪ್ರಕಾಶ್: ಡಾ: ನಂಜುಂಡಪ್ಪ ವರದಿಯಲ್ಲಿ ಎಲ್ಲಾ ಅಭಿವೃದ್ಧಿ ಮಂಡಳಿಗಳನ್ನು ತೆಗೆದುಹಾಕಬೇಕು ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: we agree ನಾವು ನಿನ್ನೆಯೂ ಹೇಳಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಲ್ಲಿ ಲೋಕಸಭಾ ಸದಸ್ಯರಿಗೆ ನಿಧಿ ಕೊಡುವುದು. ಇಲ್ಲಿ ಅವರಿಗೆ ರಾಜ್ಯ ಸರ್ಕಾರದವರು ಅವರಿಗೆ ಕಾರ್ ಕೊಡುವುದು, ಪೆಟ್ರೋಲ್ ಕೊಡುವುದು. ಇದು ಹೇಗಾಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪಾರ್ಲಿಮೆಂಟ್ ಮೆಂಬರ್ಸ್‌ಗೆ ಮೂರು ಕಾರ್‌ಗಳನ್ನು 15 ಲಕ್ಷ ರೂಪಾಯಿ ಕೊಟ್ಟು ಕೊಂಡು ಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಾವು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಏಕೆಂದರೆ ಸಣ್ಣವರಾಗುತ್ತೇವೆ ನಿಮ್ಮ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಅವರದ್ದು ವೆಚ್ಚಇದೆ we do not criticize ಅವರಿಗೂ ಇರಬಾರದು ಸಾರ್, ನಾನು ಭಾಷಣ ಮಾಡುವಾಗ ಹೇಳಿದ್ದೇನೆ, length of the road, kilometres ಮೇಲೆ ನೀವು ಗ್ರ್ಯಾಂಟ್ ಕೊಡಿ, ನಮಗೆ ಕೊಡಬೇಡಿ ಎಂದು ನಾವು ಹೇಳಿದ್ದೇವೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಈಗ ನಮ್ಮ ಎಂ.ಪಿ. ಪ್ರಕಾಶ್ ಸಾಹೇಬರು ಹೇಳಿದರು. ಎಲ್ಲ ಅಭಿವೃದ್ಧಿ ಮಂಡಳಿಗಳನ್ನು ತೆಗೆದುಹಾಕಬೇಕೆಂದು ನಂಜುಂಡಪ್ಪ ವರದಿಯಲ್ಲಿ ಇರಬಹುದು. ಆದರೆ ಯಾವಾಗ ತೆಗೆದುಹಾಕಬೇಕೆಂದು ಹೇಳಿದ್ದಾರೆಂದರೆ, ಅವರೇನು ಶಿಫಾರಸ್ಸು ಮಾಡಿದ್ದಾರೆ ಅದನ್ನು ನೀವು ಅನುಷ್ಠಾನಕ್ಕೆ ತರುವುದಾದರೆ, ನೀವು ತೆಗೆದುಹಾಕಬೇಕು ಎಂದು ಅವರು ಹೇಳಿದ್ದಾರೆ ನೀವು ನಂಜುಂಡಪ್ಪ ವರದಿಯಲ್ಲಿ ಸೂಚಿಸಿರುವ 16 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇ ಆದರೆ ಅಭಿವೃದ್ಧಿ ಮಂಡಳಿಗಳ ಅವಶ್ಯಕತೆಯೇ ಇಲ್ಲ. ಆದರೆ ಈ ಸರ್ಕಾರ ಏನು ಮಾಡಿದೆಯೆಂದರೆ ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ಮಾಡುವುದಕ್ಕೂ ಮುಂದೆ ಬಂದಿಲ್ಲ, ಅಭಿವೃದ್ಧಿ ಮಂಡಳಿಗೆ ಕೊಡತಕ್ಕಂಥ ಹಣವನ್ನೂ ಕಡಿಮೆ ಮಾಡಿದೆ. ನಂಜುಂಡಪ್ಪ ವರದಿಯ ಬಗ್ಗೆ ಮಾನ್ಯ ಯಡಿಯೂರಪ್ಪನವರು ಆಗಿಂದಲೇ ಹೇಳಿಕೊಂಡು ಬಂದರೂ, ಈಗ ಅದರ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ನಾನು ಅವರ ಪ್ರಶ್ನೆಗೆ ಉತ್ತರ ಕೊಡುವುದನ್ನು ಅವರೂ ಕೂಡ ಒಪ್ಪಿದ್ದಾರೆ. ಇವತ್ತು ಏನಾಗಿದೆ ಪರಿಸ್ಥಿತಿ ಎಂದರೆ, ನಾವು ಸರಿಯಾದಂತಹ ದಾರಿಯಲ್ಲಿ ಹೋಗುತ್ತಿಲ್ಲ. ಈ ಪ್ರಾದೇಶಿಕ ಅಸಮಾನತೆ ಮತ್ತು ಯೋಜನೆಗಳ ವಿಚಾರದಲ್ಲಿ ಜನರಿಗಾಗಿ ಯೋಜನೆಯನ್ನು ತಯಾರು ಮಾಡಲು ನಾವೇ ರೂಪಿಸಿರುವಂತಹ 310ನೇ ಕಲಂಮಿಗೆ ನಾವು ಗೌರವವನ್ನು ಕೊಡುತ್ತಿಲ್ಲ. ಅಧಿಕಾರದ ವಿಕೇಂದ್ರಿಕರಣದ ಮೂಲಕ ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವಂತಹ 90 ರ ದಶಕದ ಪರಿಣಾಮಕಾರಿಯಾಗಿರತಕ್ಕಂಥ ಯೋಜನೆಗಳನ್ನು ನಾವು, ಮಾನಸಿಕವಾಗಿ ಶಾಸಕರು ಮತ್ತು ಸಂಸದರು ಒಪ್ಪಿಕೊಳ್ಳುವಂತಹ

ಪರಿಸ್ಥಿತಿಯಲ್ಲೆ ಇಲ್ಲ. ನಾವು ಈಗ ಎಲ್ಲಾ ಕಮಿಟಿಯಲ್ಲಿ ಏನು ಹೇಳುತ್ತೇವೆ, ಫಲಾನುಭವಿಗಳ ಆಯ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಆಗಬೇಕು. ಅಥವಾ ಇನ್ಯಾವುದೋ ಹಣ ಕೊಡುವಂತಹ ವಿಚಾರ ಇದ್ದರೆ, ಶಾಸಕರ ಅಧ್ಯಕ್ಷತೆಯಲ್ಲಿ ನಿರ್ಣಯವಾಗಬೇಕು ಎಂದು ಹೇಳುತ್ತೇವೆ. ಇದು ನಮ್ಮಲ್ಲಿರತಕ್ಕಂಥ ದಂಧ್ವಗಳು. ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ನಾವು ಅಧಿಕಾರದಲ್ಲಿ ಇದ್ದಾಗ ನಮ್ಮ ಸ್ವಂತ ಕ್ಷೇತ್ರ ನಮ್ಮ ಸ್ವಂತ ಊರನ್ನು ಹೆಚ್ಚು ಬೆಳೆಸುವಂತಹ ಕೆಲಸವನ್ನು ಮಾಡುತ್ತೇವೆ. ಅದು ಸಮಗ್ರವಾಗಿರತಕ್ಕಂಥ ಯೋಜನೆಯ ದೃಷ್ಟಿಕೋನವನ್ನು ಇಟ್ಟುಕೊಳ್ಳದೆ ಇರುವಂತಹ ಕಾರಣವಾಗಿರುವುದರಿಂದ ಇಡೀ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಉತ್ತರ ಕರ್ನಾಟಕದಲ್ಲೆ 56ರ ಈಚೆ ಆಗಿರತಕ್ಕಂಥ ಅನಾಹುತಕ್ಕೆ ಕಾರಣವೇನು? ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ತಮಗೆ ಗೊತ್ತಿದ್ದ ಹಾಗೆ 10ನೇ ಶೆಡ್ಯುಲ್‌ನಲ್ಲಿ ಅವರು ಈ ವಿಚಾರಗಳನ್ನು ತಿದ್ದುಪಡಿ ಮಾಡಿದ್ದಾರೆ. ಆ 10ನೇ ಶೆಡ್ಯುಲ್‌ನ ತಿದ್ದುಪಡಿಯಲ್ಲಿ ಯಾವ್ಯಾವುದು ಸಂರಕ್ಷಿಸಲ್ಪಟ್ಟ ಅಥವಾ ರಕ್ಷಣೆಗೆ ಸಂವಿಧಾನದಲ್ಲೆ 371 ರ 10ನೇ ಶೆಡ್ಯುಲ್‌ನಲ್ಲಿ ಒಳಪಟ್ಟಿರತಕ್ಕಂಥ ಪ್ರದೇಶಗಳಿಗೆ ಮಾತ್ರ ಅವರು ಹಣವನ್ನು ಕೊಡುತ್ತಾರೆಯೇ. ಹೊರತು ಬೇರೆಯವರಿಗೆ ಹಣವನ್ನು ಕೊಡುವುದಿಲ್ಲ. ಈಗ ನಮ್ಮ ಹೈದರಾಬಾದ್ ಕರ್ನಾಟಕ ಅಥವಾ ಬೇರೆ ಹಿಂದುಳಿದಿರತಕ್ಕಂಥ ಜಿಲ್ಲೆಗಳನ್ನು ತಾಲ್ಲೂಕುಗಳನ್ನು ಏನು ಗುರುತಿಸಿದ್ದೇವೆ, ಇವುಗಳಿಗೆ ಹಣ ಬೇಕು ಎನ್ನುವುದಾಗಿದ್ದರೆ ಸಂವಿಧಾನದ ಕಲಂ 371 ರ ಪರವಾಗಿ ನಮ್ಮದೇ ಆಗಿರತಕ್ಕಂಥ ಸಂರಕ್ಷಿತ ಪ್ರದೇಶಗಳು ಇಲ್ಲ. ಸಂವಿಧಾನದಲ್ಲಿ ಅದಕ್ಕೆ ಕೂಡಬೇಕಾಗಿರತಕ್ಕಂಥ ರಕ್ಷಣಾ ಕವಚವನ್ನು ಕೂಡದೇ ಇರುವುದರಿಂದ ಈಗ ಕೇಂದ್ರ ಸರ್ಕಾರದ ಹಣ ನಮಗೆ ಬರುವುದಿಲ್ಲ. ಆದರೆ ಇವತು ಈಶಾನ್ಯ ರಾಜ್ಯಗಳಿಗೆ ಈ ಹಣ ಬರುತ್ತಿದೆ. ತೆಲಂಗಾಣದ ಭಾಗಕ್ಕೆ ಈ ಹಣ ಬರುತ್ತಿದೆ. ವಿದರ್ಭ ಭಾಗಕ್ಕೆ ಹಣ ಬರುತ್ತಿದೆ ಮಾನ್ಯ ವೈಜನಾಥ್ ಪಾಟೀಲ್‌ರವರು ಈ 371 ರ ಕಲಂಮಿನ ವಿಚಾರದಲ್ಲೇ ಪದೇ ಪದೇ ಪ್ರಸ್ತಾಪ ಮಾಡಿದಾಗ ನಾವು ಅವರನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತೇವೆ. ಅವರು ಹಾಸ್ಯ ಭರಿತವಾಗಿ ಮಾತನಾಡುತ್ತಿದ್ದಾರೆ ಎಂದು ತಿಳಿದುಕೊಳ್ಳುತ್ತೇವೆ. ಅವರು ಕೇವಲ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ, ಅಥವಾ ಆ ಪ್ರದೇಶದ ಅಸಮಾನತೆಗೆ ಸಂಬಂಧಪಟ್ಟಂತಹ ಮಾತುಗಳನ್ನು ಅಷ್ಟೆ ಅವರು ಹೇಳಿಲ್ಲ. ಅದಕ್ಕಿಂತ ಹೆಚ್ಚಿನದಾಗಿ ತಾರತಮ್ಯ ಮಾಡಿರತಕ್ಕಂಥ ಕೇಂದ್ರ ಸರ್ಕಾರ 371ರ ವಿಧಿಯಲ್ಲೆ ಈ ಪ್ರದೇಶವನ್ನು ಸೇರಿಸುವುದಕ್ಕೆ ಏನು ತೊಂದರೆಯಾಗಿದೆ? ಇದಕ್ಕೆ ನಮ್ಮ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ ಪದೇ ಪದೇ ನಾವು ಇಲ್ಲೆ ಇಷ್ಟೆಲ್ಲಾ ದೊಡ್ಡದಾಗಿ ಮಾಡಿದಾಗ.................

ಶ್ರೀ ಜೆ.ಸಿ.ಮಾಧುಸ್ವಾಮಿ : ಬರೀ ತಾರತಮ್ಯ ಅಷ್ಟೇ ಅಲ್ಲ ಸಾರ್. ರಾಜ್ಯಗಳಿಗೆ ಇರಬೇಕಾದ ಸ್ವಾಯತ್ತತೆ ನಾಶವಾಗಿದೆ. ಎಜುಕೇಷನ್ ಕನ್‌ಕರೆಂಟ್ ಲಿಸ್ಟ್ ಸ್ಟೇಟ್ ಲಿಸ್ಟ್‌ನಲ್ಲಿ, ಇರಬೇಕಾದ್ದು ಆರ್‌ಡಿಪಿಆರ್ ಇರಬೇಕಾದ್ದು, ಅಗ್ರಿಕಲ್ಚರ್ ಇರಬೇಕಾದ್ದು ಎಲ್ಲಾದರ ಮೇಲೆ ಅವರಿಗೆ ಶಾಸನ ಮಾಡುವುದಕ್ಕೆ, ಎಲ್ಲದರ ಮೇಲೆ ಡೆವಲಪ್‌ಮೆಂಟ್ ಮಾಡುವುದಕ್ಕೆ ದುಡ್ಡು ಹಾಕಲು ನಾವು ಕನ್ಸೆಂಟ್ ಕೊಟ್ಟಾಗಿಬಿಟ್ಟಿದೆ. ನಮಗೆ ಏನೂ ಉಳಿದುಕೊಂಡಿಲ್ಲ ಒಂದು ಕಡೆ ಪಾರ್ಲಿಮೆಂಟ್ ಮೆಂಬರ್ ಮಾಡುತ್ತಾರೆ, ಇನ್ನೊಂದು ಕಡೆ ಡಿಸೆಂಟ್ರಲೈಸೇಷನ್ ಅಡಿಯಲ್ಲಿ ಕೆಳಗಡೆಯವರು ಮಾಡುತ್ತಾರೆ. ಮಧ್ಯ ನಾವೇನು ಮಾಡಬೇಕು? ತ್ರಿಶಂಕುಗಳಾಗಿದ್ದೇವಲ್ಲ ಎನ್ನವುದು ಈಗ ನಮ್ಮ ಚರ್ಚೆ ನಮ್ಮನ್ನು ಬಿಟ್ಟುಬಿಡಿ ಅವರನ್ನು ಬಿಟ್ಟಿಬಿಡಿ. ಅವರ್‍ಯಾರು ಊರಲ್ಲಿ ಒಂದು ಬೋರ್ ಹಾಕಿಸುವುದಕ್ಕೆ? ಅವರ್‍ಯಾರು ಬಂದು ರೋಡ್ ಮಾಡುವುದಕ್ಕೆ ಎಲ್ಲಿದೆ ಈಗ ಅವರಿಗೆ ಅವಕಾಶ?

ಶ್ರೀ ಸಿ.ಎಸ್.ಪುಟ್ಟೆಗೌಡ: ಮಾನ್ಯ ಉಪಾಧ್ಯಕ್ಷರೆ ಏನಾಗಿದೆ ಎಂದರೆ ಶಾಸಕರು ಎಲ್ಲಾದಕ್ಕೂ ಬಯಕೆ ವ್ಯಕ್ತಪಡಿಸುತ್ತಾರೆ ಎನ್ನುವಂತಹ ಮಾತನ್ನು ನಮ್ಮ ಮುಖಂಡರಾದ ಮಾನ್ಯ ಪ್ರಕಾಶ್‌ರವರು ಹೇಳುತ್ತಿದ್ದಾರೆ. ನಿಮ್ಮ ಭಾವನೆ ಆ ರೀತಿ ಇದೆ. ಆದರೆ ಏನಾಗಿದೆ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ನಮಗೆ ಅಂದರೆ ಶಾಸಕರಿಗೆ ಅ ಇಚ್ಛೆ ಇಲ್ಲ. ಜನತಾ ಮನೆಯನ್ನು ಕೊಡಬೇಕು ಎಂದು ನಮಗೆ ಫಲಾನುಭವಿಗಳನ್ನು ಗುರುತಿಸುವ ಇಚ್ಛೆಇಲ್ಲ ಅಲ್ಲೆ ಆಗುತ್ತಿರುವಂತಹ ಅನಿಷ್ಟಗಳನ್ನು ನೋಡಿದರೆ 20 ಜನ ಮೆಂಬರ್ ಇದ್ದರೆ 20 ಜನ ನೀವು ಕೊಡುವ ದುಡ್ಡು ಹಾಗೂ ಮನೆ ಪಾಲು ಹಾಕಿಕೊಳ್ಳುತ್ತಾರೆ. ಮೊನ್ನೆ ಫಲಾನುಭವಿಗಳಿಗೆ ಕುರಿ ಕೊಡುವುದಕ್ಕೆ ಹೋದರೆ ಕುರಿ ವ್ಯಾಪಾರ ಮಾಡುವುದಕ್ಕೆ ಕರೆದುಕೊಂಡು ಹೋಗಲಿಲ್ಲ ಎಂದು ಪ್ರಧಾನರಾದಂತಹ ಹೆಣ್ಣುಮಗಳು ಮೀಟಿಂಗ್‌ಗೆ ಬರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಪುಟ್ಟೇಗೌಡರೆ, ತಮ್ಮ ಆಕ್ಷೇಪಣೆಗೆ ನಾನೂ ಕೂಡ ಸಹಮತಿಯನ್ನು ವ್ಯಕ್ತ ಮಾಡುತ್ತೇನೆ. ನಾನು ಇಲ್ಲಿ ಮಾತನಾಡುತ್ತಿದ್ದಂತಹ ರೀತಿ ಯಾವುದು ಎಂದರೆ, ಆಡಳಿತಾತ್ಮಕ ವೈಫಲ್ಯ ಬೇರೆ, ನಾವು ಮಾಡುವಂತಹ ಕಾರ್ಯಕ್ರಮದ ಯೋಚನೆ ಮತ್ತು ಚಿಂತನೆಗಳು ಬೇರೆ. "ನೀವು ಇಲ್ಲಿ ಶಾಸಕರಿಗೆ ಅನುದಾನವನ್ನು ಕೊಡಬೇಡಿ" ಎಂದು ಹೇಳಿಲ್ಲ. ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದಂತೆ ಕೇಂದ್ರ ಸರ್ಕಾರದವರು ಮಾಡಿರತಕ್ಕಂಥ ಅನೇಕ ತಪ್ಪುಗಳು ಕೂಡ, ಪ್ರಾದೇಶಿಕ ಅಸಮಾನತೆಯನ್ನು ತೆಗೆದುಹಾಕಬೇಕು ಎನ್ನುವಂತಹ ವಿಚಾರಗಳು ಬಂದಾಗ, ಯೋಜನೆಗಳು ಕೆಳಮಟ್ಟದಿಂದ ಉದ್ಭವವಾಗಬೇಕು, ಅದರ ಮೂಲಕ ಹಳ್ಳಿಯಿಂದ ದಿಲ್ಲಿಗೆ ಆಗಬೇಕು ಎನ್ನುವಂತಹ ಸಂದರ್ಭದಲ್ಲಿ ನಾವು ಇವುಗಳನ್ನು ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿ ಬಂದಿದೆ. ಕೇಂದ್ರ ಸರ್ಕಾರದವರು ಮಾಡಿರತಕ್ಕಂಥ ಸಂಸದರ ಹಣ ಅದನ್ನು 3 ಕೋಟಿ ರೂಪಾಯಿಗೆ ಹೆಚ್ಚಿಸುವುದಕ್ಕೆ ಹೋಗಿದ್ದರು. ನಮ್ಮಲ್ಲಿದ್ದಂತಹ ಸರ್ಕಾರ, ಆ ಕಾಲದಲ್ಲೆ, ಇವರು, ಅವರು ಎನ್ನುವುದಕ್ಕಿಂತ ಹೆಚ್ಚಾಗಿ ಕೇಂದ್ರದ ವರಿಷ್ಠರ ಕಿವಿಯನ್ನು ಹತ್ತಿರದಲ್ಲೆ ಇಟ್ಟುಕೊಂಡಿರತಕ್ಕಂಥ ಸಂಸದರನ್ನು ನಾವು ಬಹಳ ಮಟ್ಟಿಗೆ ಓಲೈಸಬೇಕು ಎನ್ನುವ ಕಾರಣಕ್ಕಾಗಿ ಇಲ್ಲಿ ಒಬ್ಬ ಮಂತ್ರಿಗೆ ಇರುವಂತಹ ಸ್ಥಾನಮಾನಗಳನ್ನು ಕೊಟ್ಟು 4 ಜನರನ್ನು ಅವರು ಗುತ್ತಿಗೆ ಆಧಾರದ ಮೇಲೆ ಅವರು ಇಟ್ಟುಕೊಳ್ಳಬಹುದು. ಗುತ್ತಿಗೆ ಆಧಾರದ ಮೇಲೆ ಇಬ್ಬರು ಡ್ರೈವರ್‌ಗಳನ್ನು ಇಟ್ಟು ಕೊಳ್ಳಬಹುದು. ಅವರು ತಮ್ಮದೆ ಆಗಿರುವಂತಹ ಮನೆಯಲ್ಲಿ ಉಪಯೋಗಿಸುವಂತಹ ಒಂದು ವಾಹನವನ್ನು ಇಟ್ಟುಕೊಳ್ಳಬಹುದು. ಅವರಿಗಾಗಿ ನಮ್ಮ ಜನರಲ್ ಹಾಸ್ಟೆಲ್‌ನಲ್ಲಿ ಒಂದು ರೂಮನ್ನು ಖಾಯಂ ಆಗಿ ಕೊಡಬಹುದು. ಈ ತರಹ ಎಲ್ಲಾ ಓಲೈಸುವ ಕಾರ್ಯಕ್ರಮಗಳು ಏಕೆ ಮಾಡಿದ್ದೇವೆ ಎಂದರೆ, ಅದರಲ್ಲಿ ಸಂಸದರು ಹೆಚ್ಚು ಕೆಲಸ ಮಾಡಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ನಮ್ಮ ಮೇಲೆ ಚಾಡಿಯನ್ನು ಅಲ್ಲಿನ ವರಿಷ್ಠರಿಗೆ ಹೇಳದೆ ಇದ್ದರೆ ಸಾಕು ಎನ್ನುವಂತಹ ಮಟ್ಟಕ್ಕೆ ನಾವು ಬಂದ ಕಾರಣಕ್ಕಾಗಿ, ಹಿಂದೆ ಇದ್ದು ಇದೆಲ್ಲಾ ತಪ್ಪುಗಳನ್ನು ನಾವೇ ಮಾಡುತ್ತಿದ್ದೇವೆ ಈಗ. ಈ ರೀತಿಯಾದಂತಹ ತಪ್ಪುಗಳನ್ನು ಮಾಡಿ, ನಾವೀಗ ಇದಾಗುತ್ತದೆ, ಅದಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಶಾಸಕರ ಅನುದಾನವನ್ನು ಕೊಡಬೇಕಾದ ಪರಿಸ್ಥಿತಿ ಏಕೆ ಬಂತು? ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗಿರತಕ್ಕಂಥ ಸಂದರ್ಭದಲ್ಲಿ ನಾವು ಆಷಾಢಭೂತಿಗಳು ಆದೆವು. ಈ ಕಾರಣಕ್ಕಾಗಿ

ಸಂಸದರು ಆ ರೀತಿ ಮಾಡತಕ್ಕಂಥಾದ್ದು, ಅನಿವಾರ್ಯವಾಗಿ ನಮಗೂ ಕೂಡ ಬರಬೇಕಾದಂತಹ ಪರಿಸ್ಥಿತಿ ಇದ್ದುದ್ದರಿಂದ ಈ ಸಲದ ಆಯವ್ಯಯದಲ್ಲಿ ಕೊಟ್ಟಿರುವುದನ್ನೂ ನಾವು ಮೆಚ್ಚಿದ್ದೇವೆ. 50 ಲಕ್ಷ ರೂಪಾಯಿಗಳನ್ನು ನಾವು ಸೂಚಿಸುವ ರಸ್ತೆಯ ಕಾಮಗಾರಿಗಳಿಗೆ ಹಣವನ್ನು ಕೊಟ್ಟಿದ್ದಾರೆ. ಹಾಗೆಯೇ ನಮ್ಮ ಶಾಸಕರ ನಿಧಿಯನ್ನು ಕೂಡ ಮುಂದುವರೆಸಿದ್ದಾರೆ. ನಾವೀಗ ಯೋಚನೆ ಮಾಡಬೇಕಾಗಿರುವುದು ಚರ್ಚೆಗೆ ಸಂಬಂಧಪಟ್ಟಂತೆ ಇಡೀ ಸದನ ಇಂತಹ ಒಂದು ಯೋಜನೆಯನ್ನು ಮಾಡಿ ಒಂದು ಉತ್ತಮವಾದಂತಹ ಸಮಗ್ರ ಯೋಜನೆಯನ್ನು ಇಡೀ ಕರ್ನಾಟಕಕ್ಕೆ ಅನ್ವಯಿಸುವಂತಹ ರೀತಿಯಲ್ಲಿ ನಂಜುಂಡಪ್ಪ ಆಯೋಗದವರು ಕೊಟ್ಟಿರುವಂತಹ ವರದಿಯನ್ನು ಒಪ್ಪುವ ರಾಜಕೀಯ ಇಚ್ಛಾಸಕ್ತಿ ನಮಗೆ ಇದೆಯೇ? ಇರುವುದಾದರೆ ಆ 7 ಜಿಲ್ಲೆಗಳಿಗೆ ಕೊಡತಕ್ಕಂಥ ಹಣಕಾಸಿಗೆ ನಮ್ಮದೆ ಆಗಿರುವಂತಹ ಕಾರ್ಯಕ್ರಮಗಳು ಏನು? ಈಗ ತಾವು ಯೋಚನೆಯನ್ನು ಮಾಡಿ.

ಶ್ರೀ ಕೆ. ಗೋಪಾಲ ಪೂಜಾರಿ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಗೆ ಭಾರೀ ಅನ್ಯಾಯವಾಗಿದೆ. ಏಕೆಂದರೆ ನಮ್ಮ ಸರ್ಕಾರ ಕೊಡುವಂತಹ ಅನುದಾನದಲ್ಲಿ ಖಾಸಗಿ ಸಹಭಾಗಿತ್ವ ನಮ್ಮ ಜಿಲ್ಲೆಯಲ್ಲಿ ಇದೆ. ಖಾಸಗಿ ಸಹಭಾಗಿತ್ವದಲ್ಲಿ ನಮ್ ಜಿಲ್ಲೆ ಮುಂದುವರೆದ ಜಿಲ್ಲೆಯಾಗಿದೆ. ಆದುದರಿಂದ ಕೊಡತಕ್ಕಂಥ ಅನುದಾನ ಪ್ರತಿ ಜಿಲ್ಲೆಗೆ ಒಂದೆ ರೀತಿ ಕೊಟ್ಟಾಗ, ಅದೇ ತಾರತಮ್ಯ ಇಟ್ಟುಕೊಂಡು ಹೋದರೆ ಮುಂದುವರೆದ ಜಿಲ್ಲೆಗೆ ಬಹಳ ಅನ್ಯಾಯವಾಗುತ್ತದೆ. ನಮ್ಮದು ಯಾವ ರೀತಿ ಅಭಿವೃದ್ಧಿಯಾಗುತ್ತದೆ? ಇವತ್ತು ಶಿಕ್ಷಣ ಸಂಸ್ಥೆ ನಮ್ಮ ಜಿಲ್ಲೆಯಲ್ಲಿ ಮುಂದುವರೆಯುವುದಕ್ಕೆ ಕಾರಣವೇನೆಂದರೆ ಅಲ್ಲೆ ಸರ್ಕಾರದ ಜೊತೆ ಖಾಸಗಿ ಸಹಭಾಗಿತ್ವ ಇದೆ. ಆದ್ದರಿಂದ ಅಲ್ಲೆ ಶಿಕ್ಷಣ ಸಂಸ್ಥೆ ಮುಂದುವರೆದಿದೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ತಾವು ಸ್ವಲ್ಪ ಇತಿಹಾಸವನ್ನು ತಿಳಿದುಕೊಳ್ಳಬೇಕು. ಇಡೀ ದಕ್ಷಿಣ ಕನ್ನಡ ಜಿಲ್ಲೆ ಒಂದು ಕಾಲದಲ್ಲಿ ಮನಿ ಆರ್ಡರ್ ಮೇಲೆ ಬದುಕುತ್ತಿತ್ತು. ನೀವೆಲ್ಲಾ ಎಷ್ಟು ಕಡುಬಡವರಾಗಿದ್ದಿರಿ ಎಂದು ಗೊತ್ತಿದೆ. ಬೇರೆ ಬೇರೆ ಊರುಗಳಲ್ಲಿ, ಹೋಟೇಲುಗಳಲ್ಲೆ ಮಾಣಿಗಳಾಗಿದ್ದಿರಿ. ನಿಮ್ಮಲ್ಲಿ ಇದ್ದಷ್ಟು ಬಾಲ ಕಾರ್ಮಿಕರ ವಲಸೆ ಬೇರೆ ಯಾವ ಜಿಲ್ಲೆಗಳಲ್ಲೂ ಕೂಡ ಇರಲಿಲ್ಲ. ಮನಿ ಆರ್ಡರ್ ಮೇಲೆ ಬದುಕುತ್ತಿದ್ದ ಜಿಲ್ಲೆಯಲ್ಲೂ ಕೂಡ ಒಂದು ಶಿಸ್ತು ಇತ್ತು. ಶಿಕ್ಷಣ ಇತ್ತು, ಧಾರ್ಮಿಕ ರೀತಿ ನೀತಿಗಳು ಇದ್ದವು. ನಿಮ್ಮಲ್ಲೆ ಶ್ರೀನಿವಾಸ್ ಮಲ್ಯರಂತಹ, ಮಾನ್ಯ ಎ.ಬಿ.ಶೆಟ್ಟಿರಂತಹ, ಕೆ.ಕೆ ಶೆಟ್ಟರಂತಹ ದೊಡ್ಡ ನಾಯಕರು ಇದ್ದರು. ನೆಹರುರವರ ಮೂಲಕವಾಗಿ ಅಭಿವೃದ್ಧಿ ಪಥವನ್ನು ತೆಗೆದುಕೊಂಡು ಬಂದಿರಿ. ನೀವು ಕಾರ್ಯಕ್ಷಮತೆಗೆ ಹೆಸರಾಗಿರುವಂತಹ ಜನ. ಆ ಕಾರಣಕ್ಕಾಗಿ ನಮಗೆ ಉತ್ತರ ಕನ್ನಡ ಭಾಗ ಏನಿದೆ, ನಮ್ಮ ವಿಜಾಪುರ, ಗುಲ್ಬರ್ಗದವರಿಗೆ ಬಳ್ಳಾರಿಯವರಿಗೆ, ದಕ್ಷಿಣ ಕನ್ನಡ ಜಿಲೆ ಎಂದರೆ ನಮ್ಮ ಉಡುಪಿಯ ದಕ್ಷಿಣ ಕನ್ನಡ ಜಿಲ್ಲೆ ಸೇರಿ ನಮಗೆ ಅದು ದುಬಾಯಿ. ಆದರೆ ನೀವು ಅಲ್ಲೆಲ್ಲ. ನೀವು ದುಬೈಗೆ ಹೊರಟು ಹೋಗಿದ್ದೀರಿ. ನೀವು ಮಧ್ಯ ಪ್ರಾಚ್ಯ ಪ್ರದೇಶದ ಕಡೆಗೆ ಹೋಗಿದ್ದೀರಿ. ಆ ಕಾರಣಕ್ಕಾಗಿ ನೀವು ನಮ್ಮನ್ನು ಅಲ್ಲಿಗೆ ಹೋದವರಿಗೆ ಚಪಾತಿ ನಗರ ಎಂದು ಕರೆಯುತ್ತೀರಿ. ಮಂಗಳೂರಿನಲ್ಲೆ, ನಾವು ಇಲ್ಲದೆ ಇದ್ದರೆ ನಿಮ್ಮಲ್ಲೆ ಭತ್ತದ ಕೊಯಿಲು ಮಾಡುವವರು ಇಲ್ಲ, ನಿಮ್ಮ ಬಂದರಿನಲ್ಲಿ ಮೂಟೆಗಳನ್ನು ಹೊತ್ತುಕೊಂಡು

ಹೋಗುವಂತಹ ಹಮಾಲಿಗಳು ಸಿಗುವುದಿಲ್ಲ. ನೀವ್ಯಾರು ಇವತ್ತು ದುಡಿಮೆ ಕಡೆಗೆ ಬಂದಿಲ್ಲ. ಅದನ್ನು ನಾವು ನಿಮ್ಮನ್ನು ನೋಡಿ ಕಲಿತಿದ್ದೇವೆ. ನಮ್ಮ ಜನ ಚುನಾವಣಾ ಸಂದರ್ಭದಲ್ಲಿ ಹೋದಾಗ ಗದಗಿನ ಹುಡುಗಿ ಬಹಳ ಅದ್ಭುತವಾದಂತಹ ಭಾಷಣವನ್ನು ಮಾಡಿದಳು. ಅದು ನಿಮಗೆಲ್ಲಾ ಗೊತ್ತಿದೆ. ಅದು ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಂತಹ ಕಾಲದಲ್ಲೆ ಅವರಿಗೆ ಒಂದು ಒತ್ತುವರಿ ಇರುವಂತಹ ಅರಣ್ಯ ಪ್ರದೇಶದಲ್ಲಿ ಭೂಮಿಯನ್ನು ಕೊಟ್ಟರು. ಎಷ್ಟು ವಿದ್ಯಾವಂತರಾಗಿದ್ದಾರೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆಗೆ ನಮ್ಮವರು ಉಪಾಧ್ಯಾಯರಾಗಿ ನೌಕರಿಯಲ್ಲಿ ಇದ್ದಂತಹವರು ವರ್ಗಾವಣೆ ಮಾಡಿದಾಗ ಹೋಗುವುದಿಲ್ಲ. ಅಲ್ಲಿ ಮಳೆ ಬಹಳ, ತುಳು ಮಾತನಾಡುತ್ತಾರೆ, ಅದು ನಮಗೆ ಬರುವುದಿಲ್ಲವೆಂದು ಹೇಳುತ್ತಿದ್ದರು. ಆದರೆ ಈಗ ಅಲ್ಲಿಗೆ ಹೋದವರು ಯಾರೂ ವಾಪಸ್ಸು ಬರುತ್ತಿಲ್ಲ. ಏಕೆ ಬರುತ್ತಿಲ್ಲವೆಂದರೆ, ನಿಮ್ಮಲ್ಲಿ ಯಾರೂ ಹೆಚ್ಚು ಲಂಚ ಕೊಡುವುದಿಲ್ಲ. ಅಲ್ಲಿ ಹೋದವರು ನಮ್ಮವರು ಯಾರೂ ವಾಪಸ್ಸು ಬರುತ್ತಿಲ್ಲ. ಮಕ್ಕಳು ಮರಿಗಳು ಬಹಳ ವಿದ್ಯಾವಂತರಾಗಿದ್ದಾರೆ. ಬಹಳ ಶಿಸ್ತಿಗೆ ಒಳಪಟ್ಟಿದ್ದಾರೆ. ಪ್ರತಿಯೊಬ್ಬರು ನೂರಕ್ಕೆ ತೊಂಬತ್ತರಷ್ಟು ಅಂಕಗಳನ್ನು ಗಳಿಸುತ್ತಿದ್ದಾರೆ. ಅದು ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ದೊಡ್ಡ ಶಕ್ತಿ. ಅದನ್ನು ನಾನು ಒಪ್ಪುತ್ತೇನೆ. ಆದರೆ ನಿಮ್ಮಂತೆ ನಾವು ಆಗಬೇಕಲ್ಲ. ನಿಮ್ಮಂತೆ ನಾವು ಆಗಲಿಲ್ಲ. ನೀವು ಹಿಂದೆ ಹೇಗೆ ಮಾಡಿದಿರಿ ಎಂದರೆ ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮದರಾಸು ಪ್ರಾಂತ್ಯದಲ್ಲಿತ್ತು. ಡಾ: ಆರ್.ನಾಗನಗೌಡರ್ ಎನ್ನುವಂತಹ ಒಬ್ಬರೆ ಮಂತ್ರಿಯನ್ನು ಬಿಟ್ಟರೆ ಉಳಿದ ಎಲ್ಲಾ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದರು. ನೀವ್ಯಾರು ನಮ್ಮ ಕಡೆಗೆ ಮಾತನಾಡುವುದಕ್ಕೆ ಬರುತ್ತಿರಲಿಲ್ಲ. ನೀವು ಬಹಳ ಮುಂದುವರೆದಿದ್ದೀರಿ. ನಿಮ್ಮ ಜೊತೆ ನಮ್ಮನ್ನು ಸೇರಿಸಿಕೊಳ್ಳಿ ಎಂದು, ಹೇಳುತ್ತಿದ್ದೇವೆ. ಇಲ್ಲದಿದ್ದರೆ ನಾವು " ಎ ಪೂರ್ ಕಸಿನ್ " ನಿಮಗೆ ದಾಯಾದಿಗಳಾಗಿರುತ್ತೇವೆ. ಆ ರೀತಿಯಲ್ಲಿ ತೀರಾ ಆಲಕ್ಷ್ಯಕ್ಕೆ ಒಳಗಾದ ದಾಯಾದಿಗಳನ್ನಾಗಿ ಮಾಡಬೇಡಿಯೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಅದಕ್ಕೆ ಕಾರಣಭೂತರು ಯಾರು? ಈಗ ನಾನು ಕೇಳುವುದೇನೆಂದರೆ, ನಿಮ್ಮ ಭಾಗಕ್ಕೂ, ನಮ್ಮ ಭಾಗಕ್ಕೂ ಅನುದಾನಗಳು ಏನಾದರೂ ಹೆಚ್ಚು ಕಡಿಮೆ ಇತ್ತಾ? ಇಲ್ಲ, ಎಲ್ಲಾ ಭಾಗಕ್ಕೂ ಒಂದೇ ರೀತಿಯಲ್ಲಿ ಇದೆ. ನಮ್ಮಲ್ಲಿ ಅದು ಸರಿಯಾಗಿ ಖರ್ಚು ಆಗಿದೆ. ಅದನ್ನು ಜಾಗ್ರತೆಯಿಂದ ನಾವು ನೋಡುತ್ತೇವೆ. ಶಿಕ್ಷಣ ಇದ್ದುದ್ದರಿಂದ ಆ ರೀತಿ ಆಗಿರಬಹುದು.

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಅನುದಾನ ಹೆಚ್ಚಿನ ವಿಷಯ ಅಲ್ಲ. ನಮ್ಮ ಭಾಗದಲ್ಲಿರುವಂತಹ ಶಾಲೆಗಳು, ನಮ್ಮ ಭಾಗದಲ್ಲಿರುವಂತಹ ಕಾಲೇಜುಗಳು, ನಿಮ್ಮ ಭಾಗದಲ್ಲಿರುವಂತಹ ಶಾಲೆಗಳು, ಅಂಕಿಸಂಖ್ಯೆಗಳನ್ನು ನೋಡಿದರೆ ಇದರಲ್ಲಿ ಬಹಳ ವ್ಯತ್ಯಾಸಗಳು ಇದೆ. ನಮ್ಮ ಹೈದರಬಾದ್ ಕರ್ನಾಟಕ ಭಾಗದಲ್ಲಿರುವಂತಹ ಶಾಲೆಗಳು, ನಿಮ್ಮ ಭಾಗದಲ್ಲಿರುವಂತಹ ಶಾಲೆಗಳಲ್ಲಿ ಶೇ. 25 ಇದೆ ಅಷ್ಟೆ. ಯಾವುದೇ ಭಾಗಗಳು ಅಭಿವೃದ್ಧಿಯಾಗಬೇಕಾದರೆ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕಾಗುತ್ತದೆ. ನಮ್ಮ ಭಾಗದಲ್ಲಿ ಶಾಲೆಗಳು ಇಲ್ಲ, ಹೈಸ್ಕೂಲ್‌ಗಳು ಇಲ್ಲ, ಕಾಲೇಜುಗಳು ಇಲ್ಲ, ಅದಕ್ಕಾಗಿ ನಾವು ಹಿಂದೆ ಬಿದ್ದಿದ್ದೇವೆಯೇವಿನ: ಬೇರೆ ಯಾವ ಕಾರಣಗಳೂ ಇಲ್ಲ. ಇಲ್ಲಿ ವ್ಯತ್ಯಾಸ ಇದೆ, ಅನುದಾನದಲ್ಲೂ ಕೂಡ ವ್ಯತ್ಯಾಸವಿದೆ, ತಾವು ಬೇಕಾದರೆ ಕಡತದಲ್ಲಿ ಇರುವುದನ್ನು ತೆಗೆದು ನೋಡಿ.

ಶ್ರೀ ಎಂ.ಪಿ. ಪ್ರಕಾಶ್: ನಾನು ದಕ್ಷಿಣ ಕನ್ನಡ ಜಿಲ್ಲೆಯವರನ್ನು ಅಭಿನಂದಿಸುತ್ತೇನೆ. ಅವರ ನಾಯಕತ್ವಕ್ಕಾಗಿ, ಅವರ ವಿದ್ಯೆಗಾಗಿ ಮತ್ತೆ ಅವರ ಶುಚಿತ್ವದ ಪರಿಕಲ್ಪನೆಗಾಗಿ, ನಾನು ಏಕೆ ಹೇಳಿದನೆಂದರೆ .....

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ ಇವರು ಇನ್ನೊಂದು ಏನು ಹೇಳುತ್ತಾರೆಂದರೆ, ಬಹಳ ಬುದ್ದಿವಂತರಾಗಬೇಕಾದರೆ "ಮೀನನ್ನು ತಿನ್ನಿ" ಎಂದು ಹೇಳುತ್ತಾರೆ. ಅವರು ಮೀನು ತಿನ್ನುವುದನ್ನು ಕಲಿತರೆ ಬುದ್ಧಿವಂತರಾಗುತ್ತಾರೆಂದು ಹೇಳುತ್ತಾರೆ, ಅವರು ಹೇಳುವುದು ಹಾಗೆ, ಮೀನು ತಿಂದರೆ ಬುದ್ದಿವಂತರಾಗುತ್ತಾರೆಂತೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಶ್ರೀನಿವಾಸ ಗೌಡರ ಹಾಗೆ ದಡ್ಡರಾಗಬೇಕೆಂದರೆ ಕುರಿಯನ್ನು ತಿನ್ನಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಆದರೂ ಕೂಡ ನಾನು ಕೋಲಾರ ಜಿಲ್ಲೆಯವರನ್ನು ಅಭಿನಂದಿಸುತ್ತೇನೆ. ನೀವು ಮೀನನ್ನು ತಿನ್ನದೆ ಇದ್ದರೂ ಕೂಡ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಎಲ್ಲರನ್ನು ಅಭಿನಂದಿಸುತ್ತೀರಿ, ಬೈಯ್ಯುವುದು ಯಾರನ್ನು ....

ಶ್ರೀ ಡಿ.ಆರ್.ಪಾಟೀಲ್: ಇನ್ ಲ್ಯಾಂಡ್ ಫಿಶರಿಸ್ ಬಹಳ ಇದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಬೈರೆಗೌಡರಿದ್ದಾಗ ಇವರಿಗೆಲ್ಲಾ ಮೀನನ್ನು ತರಿಸುತ್ತಿದ್ದರು, ಒಳ್ಳೆಯ ಮೀನುಗಳನ್ನು ತರಿಸಿಕೊಡುತ್ತಿದ್ದರು. ಹಿಂದೆ ನಮ್ಮಲ್ಲಿ ಬೀಜದ ಬಗ್ಗೆ "ಶಂಕರ ತಳಿ" ಯ ಬೀಜವನ್ನು ಕೋಲಾರ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದು. ಆ ಕಾಲದಲ್ಲೂ ಅಂತರ ಜಲ ಬಹಳ ಬತ್ತಿ ಹೋಗಿದ್ದರೂ ಕೂಡ, ಮೊನೊಬ್ಲಾಕ್ ಮೋಟಾರ್‌ಗಳನ್ನು ಉಪಯೋಗಿಸುತ್ತಿದ್ದರು, ಆಗ ಇನ್ನು ಸಬ್ ಮರ್ಸಿಬಲ್ ಪಂಪ್‌ಗಳು ಬಂದಿರಲಿಲ್ಲ. ಎರಡು ಹಂತದ ಮೊನೊ ಬ್ಲಾಕ್‌ಗಳನ್ನು ಇಟ್ಟುಕೊಳ್ಳುತ್ತಿದ್ದರು. ಒಂದು ಮಟ್‌ಬಾಲ್‌ನಿಂದ ನೂರು ಅಡಿಗೆ ಒಂದು ಇರುತ್ತಿತ್ತು, ಅದು ಆದ ಮೇಲೆ, ಮತ್ತೊಂದನ್ನು ಇಟ್ಟು, ಅದರ ಮೂಲಕ ಮಾಡುತ್ತಿದ್ದರು. ಇವರು ಹೂ, ತರಕಾರಿ, ದ್ರಾಕ್ಷಿಯನ್ನು ಬೆಳೆಯುವುದಕ್ಕೆ ಮತ್ತೆ ಕ್ಷೀರ ಕ್ರಾಂತಿಯನ್ನು ತರಲು ಕೋಲಾರ ಜಿಲ್ಲೆಯವರ ಕೊಡುಗೆ ಬಹಳ ದೊಡ್ಡದು. ಇವತ್ತಿಗೂ ಹಳ್ಳಿಗಳಲ್ಲಿ ಒಂದು ಮಂಚಿಕೆಯನ್ನು ಮುದುಕಿಯರು ಕಟ್ಟಿಕೊಂಡಿರುತ್ತಾರೆ. ಅದರ ಪಕ್ಕದಲ್ಲಿ ಮೊಮ್ಮಗನನ್ನು ಕೂರಿಸಿಕೊಂಡು ಇರುತ್ತಾರೆ. ಒಂದು ಸಣ್ಣ ಹೋರಿ ಕರುವಿಗೆ ಹುಲ್ಲನ್ನು ಮತ್ತು ಚಪಾತಿಯನ್ನು ಅದರ ಬಾಯಿಗೆ ಇಟ್ಟು ತಿನ್ನಿಸುತ್ತಿರುತ್ತಾರೆ. ಅದನ್ನು ಪ್ರತಿ ದಿವಸವೂ ತಿಕ್ಕುತ್ತಿರುತ್ತಾರೆ. ಘಾಟಿ ಸುಬ್ರಮಣ್ಯ ಸ್ವಾಮಿಯ ಜಾತ್ರೆ ಬಂದಾಗ ಅಥವಾ ಇಲ್ಲಿರತಕ್ಕಂಥ ಜಾತ್ರೆಯಲ್ಲಿ ನಮಗೆ 20,000 ರೂಪಾಯಿಗಳಿಗೆ, 25,000 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಆ ರೀತಿಯಾಗಿ ಹಾಲು ಉತ್ಪಾದನೆಯಲ್ಲಿ ಮತ್ತು ಪಶು ಸಂಗೋಪನೆಯಲ್ಲಿ, ರೇಷ್ಮೆ ಬೆಳೆಯಲ್ಲಿ, ತರಕಾರಿ ಬೆಳೆಯಲ್ಲಿ, ಹಣ್ಣುಗಳ ಉತ್ಪಾದನೆಯಲ್ಲಿ ಕೋಲಾರ ಜಿಲ್ಲೆ ಮಹಾ ಕ್ರಾಂತಿಯನ್ನು ಪಡೆದಿದೆ. ಅವರಿಗೆ ಎಲ್ಲಾ ತೊಂದರೆಗಳು ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತು ಇದೆ. ಆದರೆ ಕೋಲಾರ ಜಿಲ್ಲೆಯವರಿಗೆ ನೈಸರ್ಗಿಕ ಸಂಪತ್ತಿನ ಕೊರತೆ ಇದ್ದರೂ ಕೂಡ, ಅವರ ಕೃತ ಶಕ್ತಿಯ ಮೂಲಕವಾಗಿ ಅಭಿವೃದ್ಧಿಯನ್ನು ಸಾಧಸಿದಂಥವರಾಗಿದ್ದಾರೆ. ನಾವು ಉತ್ತರ ಕನ್ನಡ ಜಿಲ್ಲೆಯವರು, ಹಾಗೂ ಉತ್ತರ

ಕರ್ನಾಟಕ ಭಾಗದವರು ಸೋಮಾರಿಗಳಾಗಿದ್ದೇವೆ. ನಮ್ಮಲ್ಲಿ ನಾಯಕತ್ವದ ಕೊರತೆ ಇದೆ, ಈ ಕಾರಣಕ್ಕಾಗಿ, ನಾವು ಹಿಂದೆ ಉಳಿದಿದ್ದೇವೆ. ನಾವು ಹಿಂದೆ ಉಳಿದಿರುವ ಸೂಚ್ಯಾಂಕದಲ್ಲಿ Human Resources Development ಬಗ್ಗೆ ನಿಮಗೆ ಗೊತ್ತಿದೆ. ನಮ್ಮ ಬಳ್ಳಾರಿ ಜಿಲ್ಲೆ ಪ್ರತಿಶತ ಆದಾಯದಲ್ಲಿ, ಅಂದಿನ 20ಜಿಲ್ಲೆಗಳಲ್ಲಿ 8ನೇ ಸ್ಥಾನದಲ್ಲಿ ಇತ್ತು. ಆದರೆ ಆರೋಗ್ಯ ಮತ್ತು ಶಿಕ್ಷಣದಲ್ಲಿ ನಾವು 17 ಮತ್ತು 18ನೇ ಸ್ಥಾನದಲ್ಲಿ ಇದ್ದೆವು. ಅಂದರೆ ನಮ್ಮ ಆದಾಯವೇ ಒಂದು ಉತ್ತಮ ಗುಣಮಟ್ಟದ ಜೀವನವನ್ನು ಕೊಡುತ್ತದೆ, ಎಂದು ಅಲ್ಲ. Quality of life ಎಂದು ಏನು ಕರೆಯುತ್ತೇವೆ, ಅಂದರೆ ಉತ್ತಮ ಗುಣಮಟ್ಟದ ಜೀವನವನ್ನು ನಮ್ಮ ಆದಾಯದ ಮೂಲಕ ಸರಿದೂಗಿಸಿ ಕೊಳ್ಳುತ್ತೇವೆಂದು ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಜೀವನವನ್ನು ಅವರು ಕಾಪಾಡಿಕೊಂಡು ಬಂದಿದ್ದಾರೆ. ಆ ಕಾರಣಕ್ಕಾಗಿಯೇ ನಾನು ಅವರನ್ನು ಅಭಿನಂದಿಸಿದ್ದೇನೆ ಮತ್ತೆ ಕೋಲಾರ ಜಿಲ್ಲೆಯವರ ಕೃತ ಶಕ್ತಿಯ ಬಗ್ಗೆಯೂ ಕೂಡ ನಾನು ಮಾತನಾಡಿದ್ದೇನೆ. ಇಲ್ಲಿ ಶಿವಮೊಗ್ಗದ ಬಗ್ಗೆ ಪ್ರಸ್ತಾಪ ಮಾಡಿದಾಗ, ಮಾನ್ಯ ಧರ್ಮಸಿಂಗ್‌ರವರು ಹಂಪೆಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಾನು ಸಂಘಟನೆ ಮಾಡುತ್ತೇನೆಂದು ಅವರ ನಿರ್ಧಾರವನ್ನು ಪ್ರಕಟಣೆಯನ್ನು ಮಾಡಿದರು. ಅದನ್ನು ನಾವು ಎಲ್ಲಾ ಪತ್ರಿಕೆಗಳಲ್ಲೂ ಹೇಳಿದ್ದೇವೆ. ಈ ಬಗ್ಗೆ ಯಾವುದನ್ನೂ ಹೇಳದೆ ಕೇಳದೆ ಶಿವಮೊಗ್ಗ ಜಿಲ್ಲೆಯಿಂದ ನಾವು ಬಂದಿದ್ದವೆಂಬ ಒಂದೇ ಕಾರಣಕ್ಕಾಗಿ ಮಾನ್ಯ ಹಣಕಾಸಿನ ಸಚಿವರು ಮುಂದಿನ ವಿಶ್ವ ಕನ್ನಡ ಸಮ್ಮೇಳನವನ್ನು, ಶಿವಮೊಗ್ಗದಲ್ಲೆ ಮಾಡುತ್ತೇನೆಂದು ಹೇಳಿದ್ದಾರೆ. ಅವರು ಅಭಿಮಾನ ಪಡಬಹುದೇ ವಿನ: ಅದರಲ್ಲಿರುವ ಇತಿಮಿತಿಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಶಿವಮೊಗ್ಗ ಏಕೆ ಆಯ್ಕೆಯಾಗುತ್ತದೆ? ಬೆಂಗಳೂರು ಆಯ್ಕೆಯಾಗುತ್ತದೆಂದರೆ ಇದು ರಾಜಧಾನಿ, ಮತ್ತೆ ಸೌಕರ್ಯದ ದೃಷ್ಟಿಯಿಂದ ಆಗಬಹುದು. ಆದರೆ ಹಂಪೆ ಇಲ್ಲಿ ಏಕೆ ಆಯ್ಕೆ ಅಗುತ್ತದೆಂದರೆ ಕನ್ನಡನಾಡಿನ ನೆಲ, ಜಲ, ಸಂಪತ್ತಿಗೆ, ಸಂಸ್ಕೃತಿಗೆ ಸುಮಾರು 250ವರ್ಷಗಳ ಕಾಲ, ಭಾರತ ದೇಶದ ಇತಿಹಾಸದಲ್ಲಿ ಎರಡನೆಯ ಘಟ್ಟವಾಗಿ ಅದು ಮಾಡಿತು. ಕೆ.ಎಂ.ಪಣಿಕರ್‌ರವರು ಇಂತಹ ವಿಚಾರಗಳನ್ನು ಪ್ರಸ್ತಾಪಮಾಡುವಾಗ, ಇತಿಹಾಸ ಮೂರು ಘಟ್ಟಗಳನ್ನು ಗುರುತಿಸುತ್ತಾರೆ. ಒಂದನೆಯ ಘಟ್ಟ ಪ್ರಾಕೃತ ಈ ದೇಶ ನಾಡಭಾಷೆಯಾಗಿ ಸಂಸ್ಕೃತ ಇದ್ದುದ್ದರಿಂದ, ದೇವ ಭಾಷೆಯಾಗಿ ಬಂದಿದ್ದುದ್ದರಿಂದ, ಭಾರತದೇಶದ ಪರಿಕಲ್ಪನೆಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ವಿಜಯನಗರದ 250 ವರ್ಷಗಳ ಆಡಳಿತ, ನಮ್ಮ ದೇಶದ ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತ ಶಿಲ್ಪ. ಇವುಗಳೆಲ್ಲಾ ಜನಜೀವನದ ಆಚಾರ ವಿಚಾರಗಳನ್ನು ಕಾಪಾಡಿಕೊಳ್ಳುವುದಕ್ಕೆ, ವಿಜಯನಗರದ ದೊಡ್ಡ ಕೊಡುಗೆ ಇದ್ದುದ್ದರಿಂದ, ದಕ್ಷಿಣ ಭಾರತದೇಶ, ವಿಂಧ್ಯಾ ಪರ್ವತದ ಕೆಳಗಿರುವಂಥಾದ್ದು, ತನ್ನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಯಿತೆಂದು ಹೇಳುತ್ತಾರೆ. ಮೂರನೆಯ ಘಟ್ಟ ರಾಜರಾಂ ಮೋಹನರಾಯರಿಂದ ಮಹಾತ್ಮಗಾಂಧೀಜಿ ವರೆಗೆ renaissance period ಎಂದು ಇಂಗ್ಲೀಷ್‌ನ ವಿದ್ಯಾಭ್ಯಾಸದ ಮೂಲಕವಾಗಿ, ಹೊಸ ವಿಚಾರಗಳನ್ನು ನಮ್ಮ ರಾಜಕೀಯ ಮತ್ತು ಜನಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕವಾಗಿ ಒಂದು ಪುನರುತ್ಥಾನಕ್ಕೆ ಅವಕಾಶವಾಯಿತು ಎಂದು ಈ ಘಟ್ಟಗಳನ್ನು ಮಾಡುತ್ತಾರೆ. ಆದುದರಿಂದ ಭುವನೇಶ್ವರಿ ಕನ್ನಡನಾಡಿನ ಅದಿದೇವತೆಯಾಗಿರುವಂತಹ ಹಂಪೆಯಲ್ಲಿ ನಾವು ವಿಶ್ವ ಕನ್ನಡ ಸಮ್ಮೇಳನವನ್ನು ಮಾಡಬೇಕಾಗುತ್ತದೆ. ನಾನು ಮಾನ್ಯ ಹಣಕಾಸಿನ

ಸಚಿವರಲ್ಲಿ ಈ ಸಂಧರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕೆ.ಎಸ್. ಈಶ್ವರಪ್ಪನವರು ಒಪ್ಪುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಅವರು ಇದಕ್ಕೆ ಪ್ರತಿಕ್ರಿಯೆ ನೀಡಬೇಕು, ನಿಮ್ಮ ಸ್ನೇಹಿತರಿಗೆ ಹೇಳಿ "ಇದನ್ನು ಶಿವಮೊಗ್ಗದಲ್ಲಿ ಮಾಡಬೇಡಿ, ಇದನ್ನು ಹಂಪೆಯಲ್ಲೆ ಮಾಡಿಯೆಂದು ಹೇಳಬೇಕು, ಏಕೆಂದರೆ ನೀವು ನಮ್ಮ ಅಧೀನ ಮಾಂಡಲಿಕರು ಕೂಡ ಆಗಿದ್ದೀರಿ. ನಿಮ್ಮ ಕೆಳದಿ ಅರಸರು ನಾವು ಪತನ ಆದಮೇಲೆ ನೀವು ಸ್ವತಂತ್ರ್ಯ ಆದವರು. ಅದಕಾರಣಕ್ಕಾಗಿ ಶಿವಮೊಗ್ಗದಲ್ಲಿ ಇದನ್ನು ಮಾಡದೇ ಹಂಪೆಯಲ್ಲಿ ಮಾಡಬೇಕು. ಶಿವಮೊಗ್ಗದಲ್ಲೆ ಏರ್‌ಪೋರ್ಟ್ ಮಾಡುತ್ತೇವೆ, ವಿಶ್ವಕನ್ನಡ ಸಮ್ಮೇಳನವನ್ನು ಅಲ್ಲಿ ಮಾಡುತ್ತೇವೆ. ಮತ್ತೆ ಇಂಥಾದ್ದು ಮಾಡುತ್ತೇವೆಂದು ಹೇಳಿ ಎಲ್ಲರೂ ಕೂಡ......

ಶ್ರೀ ಬಿ. ಶಿವರಾಮ್ : "ಸ್ಯಾಟಲೈಟ್ ಸಿಟಿಯನ್ನು ಕೂಡ ಅಲ್ಲೆ ಮಾಡುತ್ತೇವೆ."

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮೂರು ಮೂರು ಜನ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಬಂದು ಹೋದರು. ನಮ್ಮಲ್ಲಿದ್ದಂತಹ ಎಲ್ಲಾ ಕೈಗಾರಿಕೆಗಳು ನಿರ್ನಾಮವಾಗಿ ಹೋಗಿವೆ. ಹೀಗಾಗಿ ಅದನ್ನು ಅಭಿವೃದ್ಧಿ ಮಾಡಬೇಕೆಂಬ ಫಲವನ್ನು ಈ ಬಾರಿ ತೆಗೆದುಕೊಂಡಿರುವಂಥಾದ್ದು ಸತ್ಯ. ಇದರಲ್ಲಿ ಏನು ಅನುಮಾನ ಇಲ್ಲ. ವಿಮಾನ ನಿಲ್ದಾಣ ....

ಶ್ರೀ ಬಿ. ಶಿವರಾಮ್ : ಎಲ್ಲಿ?

ಶ್ರೀ ಕೆ.ಎಸ್.ಈಶ್ವರಪ್ಪ : ಶಿವಮೊಗ್ಗ ಜಿಲ್ಲೆಯಲ್ಲಿ....

ಶ್ರೀ ಬಿ. ಶಿವರಾಮ್ : ಶಿವಮೊಗ್ಗ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದೀರಾ, ನಾನು ಶಿವಮೊಗ್ಗ ಎಂದು ತಾವು ಹೇಳಿದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಒಪ್ಪಿಕೊಳ್ಳಲಿ ಎಂದೆ ನಾನು ಹೇಳುತ್ತಿದ್ದೇನೆ. ಇನ್ನು ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಹೇಳಿದ್ದೀರಿ.

ಶ್ರೀ ಬಿ. ಶಿವರಾಮ್ : ಸೆಟಲೈಟ್ ಸಿಟಿಯನ್ನು ತೆಗೆದುಕೊಳ್ಳಬೇಕಾದರೆ, ಅದರದ್ದೇ ಆದಂತಹ ಕೆಲವು ನಿಯಮಾವಳಿಗಳು ಇವೆ. ಅದನ್ನು ಅನುಸರಿಸಿ, ತಾವು ತೆಗೆದುಕೊಂಡರೆ ಸಂತೋಷ ಅದನ್ನು ಬೇಡವೆಂದು ಹೇಳುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಎಲ್ಲಾ ನಿಯಾಮಾಳಿಗಳ ಪ್ರಕಾರವೆ ....

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಸದಸ್ಯರು ಹೇಳುತ್ತಿರುವಂಥಾದ್ದು, ಶಿವಮೊಗ್ಗಕೆ ಸೆಟಲೈಟ್ ಸಿಟಿ ಮಾಡಿದರೆ ಏನು ಪ್ರಯೋಜನ ಇಲ್ಲಿನ ಜನಸಂಖ್ಯೆ ಇರುವಂಥಾದ್ದು ಎಷ್ಟು? 15,000 ಇದೆ. ಈ 15,000 ಜನಸಂಖ್ಯೆಗೆ ಸೆಟಲೈಟ್ ಟೌನ್ ಅನ್ನು ಮಾಡುತ್ತಿರಾ? ಎಂದರೆ ಅಲ್ಲಿ ಇರವುವವರು ಯಾರು?

ಶ್ರೀ ಬಿ. ಶಿವರಾಮ್ : ನೀವು ಶಿವಮೊಗ್ಗಕ್ಕೆ ಮಾಡುತ್ತೇವೆಂದರೆ ನಮ್ಮ ಸಹಮತ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಬಸವರಾಜ ರಾಯರೆಡ್ಡಿಯವರಿಗೆ, ಗೊತ್ತಿಲ್ಲ. ಅಲ್ಲಿ ವಿಮಾನ ನಿಲ್ದಾಣ, ಕೈಗಾರಿಕೆಗಳು, ಈ ರೀತಿಯದ್ದು ಏನೇನು ಆಗಬೇಕೆಂಬುದು ಇತ್ತೂ ಅವೆಲ್ಲವೂ ನಿಂತು ಹೋಗಿದ ಏಕೆಂದರೆ ಅವತ್ತಿನಿಂದ ಇವತ್ತಿನವರೆಗೂ ಸಮಸ್ಯೆಗಳಾಗಿ ಅಭಿವೃದ್ಧಿಯಾಗದೇ ಇದ್ದುದ್ದಕ್ಕೋಸ್ಕರವೇ, ಶಿವಮೊಗ್ಗದಲ್ಲಿ ಮಾಡುತ್ತಿರುವಂಥಾದ್ದು, ಅದಕ್ಕೆ ತಾವು ಒಪ್ಪಿಗೆ ಇದೆಯೆಂದು ಹೇಳಿದ್ದೀರಿ, ಅದಕ್ಕೆ ಸಂತೋಷ. ಎರಡನೆಯದಾಗಿ, ನಮ್ಮ ಹಿರಿಯ ನಾಯಕರಾದಂತಹ ಶ್ರೀ ಎಂ.ಪಿ.

ಪ್ರಕಾಶ್ ರವರು ಹೇಳಿದಂತಹ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ, ಹೇಳುತ್ತಿರುವಂಥಾದ್ದು ತುಂಬಾ ಸಂತೋಷ, ಇಲ್ಲಿ ಹಂಪೆಯಲ್ಲಿ ಬೇಡವೆಂದು ನಮ್ಮ ಅಭಿಪ್ರಾಯ ಏನು ಇಲ್ಲ. ಆದರೆ ಶಿವಮೊಗ್ಗ ಜಿಲ್ಲೆಯ ಬಗ್ಗೆಯೂ ಕೂಡ ತಮಗೆ ಗೊತ್ತಿದೆ. ನಮ್ಮಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಇಬ್ಬ ಪಡೆದಂತಹ ಜಿಲ್ಲೆಯಾಗಿದೆ. ಅದೇ ರೀತಿಯಲ್ಲಿ ಕನ್ನಡದ ಅಭಿವೃದ್ಧಿ ಬಗ್ಗೆ ಯಾರ್‍ಯಾರು ಏನೇನು ಮಾಡಿದ್ದಾರೆಂಬುದು ತಮಗೆ ಪೂರ್ಣ ಗೊತ್ತಿದೆ. ಇದರ ಜೊತೆಗೆ ವಿಶ್ವದಲ್ಲಿಯೇ ಒಂದು ವಿಶೇಷವಾದಂತಹ ಜೋಗ್ ಜಲಪಾತ ಇರುವಂಥಾದ್ದು, ನಮ್ಮ ಜಿಲ್ಲೆಯಾಗಿದೆ, ಇದರ ಬಗ್ಗೆ ವರ್ಣನೆ ಮಾಡಿಕೊಂಡು ಹೋಗುವ ಅವಶ್ಯಕತೆ ಇಲ್ಲ. ಹಂಪೆ ಬಗ್ಗೆ ತಾವು ಅಪೇಕ್ಷೆ ಪಟ್ಟಿದ್ದು ತಪ್ಪು ಏನು ಇಲ್ಲ. ಆದರೆ ಶಿವಮೊಗ್ಗ ಕೂಡ ವಿಶ್ವ ಕನ್ನಡ ಸಮ್ಮೇಳನಕ್ಕೆ ಸರಿಯಾದಂತಹ ಜಾಗ ಎಂದು ಯೋಜನೆಯನ್ನು ಮಾಡಿಕೊಂಡು ನಮ್ಮ ಹಣಕಾಸಿನ ಸಚಿವರು, ತೀರ್ಮಾನ ಮಾಡಿರುವುದು, ಇದರ ಬಗ್ಗೆ ಕುಳಿತುಕೊಂಡು ಯೋಚನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳೋಣ.

ಶ್ರೀಮತಿ ಭಾಗೀರಥಿ ಟಿ.ಮರುಳಸಿದ್ದನಗೌಡ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಕಾರ್ಯಕ್ರಮ ಮಾಡುವುದನ್ನು ಬಿಟ್ಟರೆ, ಇನ್ನು ಎಲ್ಲಾ ರೀತಿಯಲ್ಲಿ ನಾವು ಮಾತನಾಡಿ ಆಗಿದೆ. ಪ್ರತಿಯೊಂದು ಅನೌನ್ಸ್ ಮಾಡಿ ಆಗಿದೆ, ಜನತೆಗೆ ತಿಳಿಸಿ ಆಗಿದೆ. ಅಂಥದ್ದರಲ್ಲಿ ತಾವು ಏಕದಂ ಶಿವಮೊಗ್ಗದಲ್ಲಿ ಮಾಡುತ್ತೇವೆಂದರೆ ನಾವು ಜನತೆಗೆ ಏನು ಉತ್ತರವನ್ನು ಕೊಡುವುದು?

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಉಪಾಧ್ಯಕ್ಷರೆ, ವಿಶ್ವ ಕನ್ನಡ ಸಮ್ಮೇಳನವನ್ನು ಶಿವಮೊಗ್ಗದಲ್ಲಿ ಮಾಡುವಂಥಾದ್ದನ್ನು ಸ್ವಾಗತ ಮಾಡೋಣ. ಆದರೆ ವಿಶ್ವ ಕನ್ನಡ ಸಮ್ಮೇಳನ ಎಂದರೆ ಇಡೀ ವಿಶ್ವದಲ್ಲಿ ಇರುವಂಥ ಕನ್ನಡಿಗರೆಲ್ಲರೂ ಬರುವಂತಹ ಸಂದರ್ಭವಾಗಿದೆ. ಅಂತಹ ಒಂದು ಸಂದರ್ಭದಲ್ಲಿ, ಆ ಊರಿನಲ್ಲಿ ವಸತಿಗೆ, ಉಳಿದುಕೊಳ್ಳುವಂಥಾದ್ದಕ್ಕೆ ಸಾಕಷ್ಟು ವ್ಯವಸ್ಥೆಗಳು ಆಗಬೇಕು, ಮತ್ತೆ ಹೋಗಿ ಬರುವುದಕ್ಕೆ ಅನುಕೂಲತೆಗಳು ಇರಬೇಕು. ಅದನ್ನು ಕೂಡ ಗಮನದಲ್ಲಿ ಇಟ್ಟುಕೊಳ್ಳಬೇಕು. ಇವತ್ತು ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಇಂತಹ ಊರುಗಳಲ್ಲಿ ಮಾಡಿದ್ದರೆ, ಅಲ್ಲಿ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆಗಳು ಇರುತ್ತವೆ. ಹಂಪೆಯಲ್ಲೂ ಕೂಡ ಸಾಕಷ್ಟು ಹೊಟೇಲ್‌ಗಳು ಇವೆ. ಹೊಸಪೇಟೆಯಲ್ಲಿ ಉಳಿದುಕೊಳ್ಳುವುದಕ್ಕೆ ಜಾಗಗಳು ಇದೆ. ಅದು ಕುಡ ಮುಖ್ಯವಾಗಿದೆ, ಕೇವಲ ಪ್ರಚಾರಕ್ಕೋಸ್ಕರ ಶಿವಮೊಗ್ಗದಲ್ಲಿ ಮಾಡುತ್ತೇವಂದರೆ ಅದು ಸರಿ ಅಲ್ಲ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಎಷ್ಟು ಇದೆ? ಏಕೆಂದರೆ ಎಲ್ಲಾ ಕಡೆಯಿಂದ ಜನರು ಬರತಕ್ಕಂಥ ಸನ್ನಿವೇಶ ಇರುವುದರಿಂದ ಅದನ್ನು ಕೂಡ ಗಮನದಲ್ಲಿಟ್ಟುಕೊಂಡು ಆ ನಿಲುವನ್ನು ನೀವು ತೆಗೆದುಕೊಳ್ಳಬೇಕಾಗಿತ್ತು.

(ಗೊಂದಲ)

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ನಾನು ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದಾಗ ಅಲ್ಲೊಂದು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಬೇಕೆನ್ನುವುದು ಈ ಬುದ್ಧಿಜೀವಿಗಳ ಹಾಗೂ ಬಹಳಷ್ಟು ಜನಗಳ ಬೇಡಿಕೆಯಾಗಿತ್ತು. ಇವತ್ತೇನು ಅಲ್ಲಿ ಮಾಡಬೇಕೆಂದು ನಿಗದಿಪಡಿಸಿದ್ದೀರಿ ಅದು ಒಳ್ಳೆಯದೆಂದು ಕಾಣುತ್ತದೆ. ಅಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವುದಕ್ಕೆ ಬಹಳಷ್ಟು ಜನ ಕಾತುರರಾಗಿದ್ದಾರೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ ಈಗಾಗಲೇ ಹಂಪಿ ಬಗ್ಗೆ announce ಮಾಡಿದ್ದಾರೆ. Announce ಮಾಡಿದ್ದನ್ನು ತೆಗೆದು, ಬೇರೆ ಕಡೆಗೆ ಹಾಕುವ ಬದಲು, ಇನ್ನೊಂದು ನೀವು ಮಾಡಿಕೊಳ್ಳಿ. ನಮ್ಮದೇನೂ ತಕರಾರು ಇಲ್ಲ. ಹಂಪಿ ಎಂದು announce ಮಾಡಿದ್ದನ್ನು, ಏಕೆ ಬದಲಾವಣೆ ಮಾಡುತ್ತಿರೆಂದು ಆ ಅಮ್ಮನ ವಾದವಾಗಿದೆ. ದಯವಿಟ್ಟ ಅದನ್ನು ಮಾಡಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ತೀರ್ಮಾನವಾಗಿದೆ ಎಂದು ಹೇಳುತ್ತಾರೆ. ಅನೇಕ ಕಾರ್ಯಕ್ರಮಗಳನ್ನು ಯೋಚನೆ ಮಾಡಿ ತೀರ್ಮಾನ ಮಾಡಿ ಬದಲಾವಣೆ ಮಾಡಿದಂಥ ತೀರ್ಮಾನಗಳು ನೂರಾರು ಇವೆ. ಆದರೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಹೇಳಿದಂಥ ಒಂದು ಅಂಶ ಕೂಡ ಸತ್ಯವಿದೆ. ಶಿವಮೊಗ್ಗದಲ್ಲಿ ವಸತಿ ದೃಷ್ಟಿಯಿಂದ ಮತ್ತೆ ಏನೇನು ವ್ಯವಸ್ಥೆಗಳಾಗಬೇಕು, ಎಲ್ಲ ಸೌಲಭ್ಯಗಳ ದೃಷ್ಟಿಯಿಂದ, ಎಲ್ಲಾ ವ್ಯವಸ್ತೆಗಳನ್ನು ಕೂಡ ಯೋಚನೆ ಮಾಡಿ ತೀರ್ಮಾನ ಮಾಡಿದ್ದೇವೆ. ವ್ಯವಸ್ಥೆಯನ್ನು ಕೂಡ ತುಂಬ ಅಚ್ಚುಕಟ್ಟಾಗಿ ನಾವು ಖಂಡಿತ ಮಾಡುತ್ತೇವೆ. ಇದರಲ್ಲಿ ನಮಗೆ ವಿಶ್ವಾಸವಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಒಂದಂತು ನಿಜ. ಇವರು ಶಿವಮೊಗ್ಗದಲ್ಲಿ ಮಾಡಲಿಕ್ಕೆ ಕಾರಣ ಇಬ್ಬರು ಜ್ಞಾನಪೀಠ ಪ್ರಶಸ್ತಿ ವಿಜೇತರು ಅಲ್ಲಿ ಇದ್ದಾರೆಂದು............

ಶ್ರೀ ಕೆ.ಎಸ್. ಈಶ್ವರಪ್ಪ : ....ಕೇಳಿದಂಥ ಪ್ರಶ್ನೆಗೆ ವಿವರ ಕೊಟ್ಟಾಗ ಶಿವಮೊಗ್ಗ ಜಿಲ್ಲೆ ಬಗ್ಗೆ ಏನೇನು ಇದೆ ಎಂಬ ಅಂಶವನ್ನು ಕೂಡ ಹೇಳಿದ್ದೇವೆ. ಅಷ್ಟೆ

(ಗೊಂದಲ)

ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ರಾಜ್ಯ ಸಭೆಗೆ ಓಟು ಹಾಕಬೇಕಾಗಿದ್ದರೆ ಜ್ಞಾನಪೀಠ ಪ್ರಶಸ್ತಿ ಏನೂ ಬೇಕಾಗಿರುವುದಿಲ್ಲ.

(ಗೊಂದಲ)

ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಏನಿದು ವಿಪರ್ಯಾಸ ಮಾನ್ಯ ಉಪಾಧ್ಯಕ್ಷರೆ? ರಾಜ್ಯಸಭೆಗೆ ಓಟು ಹಾಕಬೇಕಾದರೆ ಜ್ಞಾನಪೀಠ ಪ್ರಶಸ್ತಿ ಪಡೆದವರಿಗೆ ಅರ್ಹತೆ ಇಲ್ಲ. ಆದರೆ ವಿಶ್ವಕನ್ನಡ ಸಮ್ಮೇಳನ ಮಾಡಬೇಕಾದರೆ, ಜ್ಞಾನಪೀಠ ಪ್ರಶಸ್ತಿ ಬಂದ ಕಾರಣ ಎಂದು ಹೇಳುತ್ತಾರೆ. ಏನಿದು, ಮಾನ್ಯ ಉಪಾಧ್ಯಕ್ಷರೆ ತಾವೇ ಹೇಳಬೇಕು. ಇವತ್ತು ಜನರು ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಡಾ: ಅನಂತಮೂರ್ತಿಯವರ ಬಗ್ಗೆ ಹೇಳುವುದಾದರೆ, ಕಾಂಗ್ರೆಸ್‌ನ ಬಗ್ಗೆ ಸಾಕಷ್ಟು ಅವರು ವಿರೋಧ ಮಾಡಿರುವಂಥ ವ್ಯಕ್ತಿ ಯಾವುದೇ ಕಾರಣಕ್ಕೂ ಅವರನ್ನು ತರಬೇಡಿ ಎಂದು ನಿಮ್ಮವರೆಲ್ಲ ಚರ್ಚೆ ಮಾಡಿಕೊಂಡು, ಅದೇ ಕಾಂಗ್ರೆಸ್‌ನವರು ಮತ್ತೆ ಅವರಿಗೆ ವೋಟು ಕೊಡುವಂಥ ಸ್ಥಿತಿ ನಿಮಗೆ ಬಂದಿರಬೇಕಾದರೆ, ನಮಗೇನೂ ಅಂಥ ಗ್ರಹಚಾರವಿಲ್ಲ. ನಾವು ತೀರ್ಮಾನ ಮಾಡಿದ್ದೇವೆ. ಅದರಂತೆ ನಾವು ಮುಂದುವರಿಯುತ್ತೇವೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ನೀವು ಯಾವ ರೀತಿ ಸಹಾಯ ಮಾಡಿದ್ದೀರಿ ಎಂದು ಎಲ್ಲರಿಗೂ ಗೊತ್ತಿದೆಯಲ್ಲಾ.

(ಗೊಂದಲ)

ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಕಾಂಗ್ರಸ್ ಬಗ್ಗೆ ಟೀಕೆ ಮಾಡಿರಬಹುದು ಆದರೆ ಅವರು ಈ ರಾಜ್ಯದ ಒಳ್ಳೆಯ ಸಾಹಿತಿ ಎಂದು ನಾವು ಓಟು ಹಾಕುತ್ತಿದ್ದೇವೆ. ನಾವು ಮರೆತಿದ್ದೇವೆ. ಆದರೆ ಅಷ್ಟು ದೊಡ್ಡ ಮನಸ್ಸು ಬಿ.ಜೆ.ಪಿ. ಯವರಿಗೆ ಇಲ್ಲವಲ್ಲಾ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಸಾಹಿತಿಗಳ ಬಗ್ಗೆ ಇಷ್ಟೊಂದು ಗೌರವ ತೋರಿಸುವಂಥ ಕಾಂಗ್ರೆಸ್‌ನವರನ್ನು ನಾನು ಶ್ಲಾಘನೆ ಮಾಡುತ್ತೇನೆ. ಅವರನ್ನು No.1 position ನಲ್ಲಿಟ್ಟು ನಿಮ್ಮ ಮೊದಲನೇ ಪ್ರಾಶಸ್ತ್ಯ ಓಟು ಏನಿದೆ, ಅದನ್ನು ಕೊಟ್ಟು ಅವರನ್ನು ಗೆಲ್ಲಿಸಿ, ಆ ಮೇಲೆ ನಿಮ್ಮ candidate ಅನ್ನು ಗೆಲ್ಲಿಸಿ, ಈ ಒಂದು ಸಾಧನೆಯನ್ನು ರಾಜ್ಯಕ್ಕೆ ತಿಳಿಸಿ. (ಗೊಂದಲ) ಸಾಹಿತಿಗಳನ್ನು ತರಬೇಕೆಂದು ನಿಮ್ಮ ಮನಸ್ಸಿನಲ್ಲಿ ಇಚ್ಛೆ ಇದ್ದರೆ, ಅವರಿಗೆ ಮೊದಲನೆ ಪ್ರಾಶಸ್ತ್ಯ ಓಟು ಕೊಡಿ ಅದು ಬಿಟ್ಟು ನಮಗೇ ಹೇಳುವಂಥ ಕೆಲಸವನ್ನು ಮಾಡಬೇಡಿ. ಕನ್ನಡದ ಬಗ್ಗೆ ನಮಗೆ ಅಭಿಮಾನವಿದೆ. ಸಾಹಿತಿಗಳ ಬಗ್ಗೆ ನಮಗೆ ಅಭಿಮಾನವಿದೆ. ಯಾರನ್ನು ಗೆಲ್ಲಿಸಬೇಕೆನ್ನವುದು ನಮಗೆ ಗೊತ್ತಿದೆ. ನಿಮ್ಮಿಂದ ಕಲಿಯಬೇಕಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಈಗ ಎಲ್ಲರೂ ಕುಳಿತುಕೊಳ್ಳಿ. ನಾನು ಈಗ ಯಾರಿಗೂ ಮಾತನಾಡುವುದಕ್ಕೆ permission ಕೊಟ್ಟಿಲ್ಲ. ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತ್ರ ಮಾತನಾಡಬೇಕು. ಅವರನ್ನು ಬಿಟ್ಟು ಯಾರಿಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ದಯವಿಟ್ಟು ಯಾರೂ interfere ಆಗಬೇಡಿ. ಅವರ ನಂತರ ಸಾಕಷ್ಟು ಜನ ಮಾತನಾಡುವವರು ಇದ್ದಾರೆ. ಅವರಿಗೆ ಅವಕಾಶ ಕೊಡಿ, ಮಾತನಾಡಲಿ. ಏನಾದರೂ ಮಾತನಾಡುವುದಿದ್ದರೆ ಕೇಳಿಬಿಟ್ಟು ಮಾತನಾಡಿ. ಮಾನ್ಯ ಬಸವರಾಜುರವರೇ, ಮಧ್ಯದಲ್ಲಿ ಮಾತನಾಡಬೇಡಿ. ಎಲ್ಲರಿಗೂ ಹೇಳಿದ್ದೇನೆ. ದಯವಿಟ್ಟು ಸ್ವಲ್ಪ ಸಹಕಾರ ಕೊಡಿ. ಅವರು ಮಾತನಾಡಿ ಮುಗಿಸಲಿ.

ಎಂ.ಪಿ. ಪ್ರಕಾಶ್: ಬಹಳ ಮುಖ್ಯವಾದ ಒಂದು ಆಶಯದ ಕಾರಣಕ್ಕಾಗಿ ಆ ಒಂದು ಆಶಯ ಇಲ್ಲಿ ಈ ಜಾಗತೀಕರಣದ ಹಿನ್ನೆಲೆಯಲ್ಲಿ ಖಾಸಗೀಕರಣ, ಉದಾರೀಕರಣದ ಹಿನ್ನೆಲೆಯಲ್ಲಿ, ಈ ನಮ್ಮ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಬಿಟ್ಟು ಬಹಳ ಜನಗಳು left -over community ಎಂದು ಏನು ಕರೆಯುತ್ತೇವೆ, ಅಂಥ ಜನ ಅತಂತ್ರರಾಗಿರತಕ್ಕಂಥ ಜನಗಳನ್ನು ನಾವು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ದೇಶ ಅಭಿವೃದ್ಧಿಯನ್ನು ಪಡೆದಿದೆ, ಪ್ರತಿಶತಃ 8.1 ರಷ್ಟು G.D.P. ಹೆಚ್ಚಾಗಿದೆ ಎನ್ನುವ ಮಾತನ್ನು ಹೇಳಿದರೂ ಕೂಡ, ಇದು ಯಾವ ಸಮಾಜಕ್ಕೆ ಹೋಗಿದೆ? ಯಾವ ವರ್ಗಕ್ಕೆ ಹೋಗಿದೆ? ಅವರ ಆದಾಯ ಹೆಚ್ಚಾಗಿದ್ದು ಅವರ ಮೇಲೆ ಅವಲಂಬಿತರಾಗಿರತಕ್ಕಂಥ ಶೇಕಡ 10 ಮಂದಿಗೆ ಅದು

ಆದಾಯುವಾಗಿರಬಹುದು. ಆದರೆ ಆ ಆದಾಯ ಕೆಳಮಟ್ಟದಲ್ಲಿರತಕ್ಕಂಥ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಜನಗಳಿಗೆ ಅದು ಮುಟ್ಟಿಲ್ಲವೆನ್ನುವ ಕಾರಣಕ್ಕಾಗಿಯೇ, ಇವತ್ತು ಈ ಬಜೆಟ್‌ನಲ್ಲಿ ಬಂದಿರತಕ್ಕಂಥ ಒಂದು ಆಶಯ. ಯಾವುದೋ left -over community ಎಂದು ನಾವು ಕರೆಯುತ್ತೇವೆ, ನಿಕೃಷ್ಟತೆಗೆ, ಅಥವಾ ಎಲ್ಲಾ ಕಡೆಯಿಂದ ಅಪಮಾನಿತವಾಗಿರತಕ್ಕಂಥ ಒಂದು ಜನವರ್ಗ ಏನಿತ್ತು, ಆ ಜನವರ್ಗಕ್ಕೆ ಸಂಬಂಧಿಸಿರತಕ್ಕಂಥ ಪ್ರಗತಿಯ ಯೋಜನೆಗಳನ್ನು ಈ ರೀತಿ ಮಾಡಿರುವಂಥದ್ದು ಅದರಲ್ಲಿ ಮೂಲಭೂತ ಸೌಕರ್ಯಗಳಾಗಿರತಕ್ಕಂಥ ರಸ್ತೆ ಕುಡಿಯುವ ನೀರು, ನಮ್ಮ ವಿದ್ಯುಚ್ಛಕ್ತಿ, ಬೇಸಾಯ ಇವುಗಳಿಗೆ ಕೊಟ್ಟಿರತಕ್ಕಂಥ ಹಣ ನಿಜವಾಗಿಯೂ ಕೂಡ ಮೆಚ್ಚತಕ್ಕಂಥದ್ದಾಗಿದೆ. ಮಾನ್ಯ ಉಪಾಧ್ಯಕ್ಷರೆ, ತಾವು ಇದರಲ್ಲಿ ಯೋಚನೆ ಮಾಡಬೇಕಾಗಿರತಕ್ಕಂಥದ್ದು ಇದೆ. ಈಗ 10 ಸಾವಿರ ರೂಪಾಯಿಗಳನ್ನು ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ನಮ್ಮ ಮಹಿಳೆಯರಿಗೆ, ಹುಟ್ಟುವ ಒಂದು ಹೆಣ್ಣುಮಗುವಿಗೆ ಕೊಡತಕ್ಕಂಥ ಕಾರ್ಯಕ್ರಮ ನಿಜವಾಗಿಯೂ ಕೂಡ ಒಂದು ಹೊಸ ಪರಿಕಲ್ಪನೆಯಾಗಿದೆ. ಈಗಾಗಲೇ ನಮ್ಮ ಆಯವ್ಯಯದಲ್ಲಿ ಈ ಮಾತು ಆಗಿದೆ. ಬಂದಿದೆ ಎನ್ನತಕ್ಕಂಥದ್ದನ್ನು ಕಾಂಗ್ರೆಸ್‌ನವರು ಹೇಳಬಹುದು, ಕೇವಲ 3 ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಭಾರತ ಸರ್ಕಾರದ ಆಧಾಯದ ಮೂಲದಲ್ಲಿ gender equality ಯನ್ನು ತರುತ್ತೇವೆ, ಲಿಂಗಭೇದದ ಮೂಲಕವಾಗಿ ತುಳಿತಕ್ಕೆ ಒಳಗಾಗಿರತಕ್ಕಂಥ ಹೆಣ್ಣುಮಕ್ಕಳ ಬಗ್ಗೆ ನಿಮಗೆ ನಿಜವಾದಂಥ ಅನುಕಂಪ ಇರುವುದಾಗಿದ್ದರೆ, ಕೇವಲ ಮೂರು ಸಾವಿರ ರೂಪಾಯಿಗಳನ್ನು ನಿಮ್ಮ ಆಯವ್ಯಯದಲ್ಲಿ ಇಡುತ್ತಿರಲಿಲ್ಲ ಆದರೆ ಇಲ್ಲಿ ಮಾನ್ಯ ಯಡಿಯೂರಪ್ಪನವರು ಹತ್ತು ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. 18 ವರ್ಷಕ್ಕೆ ಆ ಹತ್ತು ಸಾವಿರ ರೂಪಾಯಿಗಳ ಜೊತೆಗೆ ಎರಡು ಹೆಣ್ಣುಮಕ್ಕಳಿಗೂ ಕೊಟ್ಟಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥದ್ದು ಕೇವಲ ಒಂದು ಹೆಣ್ಣುಮಗುವಿಗೆ ಮಾತ್ರ ಅದೇ ರೀತಿಯಾಗಿ ಈ widow pension ಅನ್ನು ನಾವೇನು ವಿಧವಾ ಮಾಸಾಶನ 75 ರೂಪಾಯಿಗಳು ಇಟ್ಟಿರುವುದನ್ನು 200 ರೂಪಾಯಿಗಳು ಮಾಡಿದ್ದೇವೆ ಈ 200 ರೂಪಾಯಿಗಳಲ್ಲಿ ಕೂಡ ಸಾಧ್ಯವಿಲ್ಲ. ಕೊಡತಕ್ಕಂಥದ್ದು ಬಹಳ ಕಡಿಮೆ ಆದರೂ ಕೂಡ ನಮ್ಮ ಸಂಪನ್ಮೂಲಗಳ ಇತಿಮಿತಿಯಲ್ಲಿ 200 ರೂಪಾಯಿಗಳಿಗೆ ಹೆಚ್ಚಿಸಿರತಕ್ಕಂಥದ್ದು ಮತ್ತು ಹೆಚ್ಚುವರಿಯಾಗಿ 11,313 ಅಂಗನವಾಡಿಗಳನ್ನು ಮತ್ತೆ ಪ್ರಾರಂಭ ಮಾಡತಕ್ಕಂಥದ್ದು ಇವೆಲ್ಲವೂ ಕೂಡ ಬಹಳ ಉತ್ತಮವಾಗಿರತಕ್ಕಂಥ ಅಂಶಗಳಾಗಿವೆ. ಈ ಉತ್ತಮವಾದಂಥ ಅಂಶಗಳನ್ನು ನಾವು ಯಾವ ತರಹದಲ್ಲಿ ಯೋಚನೆ ಮಾಡಬೇಕೆಂದರೆ, ಇದು ಜನಪ್ರಿಯ ಕಾರ್ಯಕ್ರಮಗಳಲ್ಲ. ಕಡೆಗಣಿಸಲ್ಪಟ್ಟಿರತಕ್ಕಂಥ ಒಂದು ಜನವರ್ಗಕ್ಕೆ ಒಂದು ಭರವಸೆಯನ್ನು ಕೊಡಲಿಕ್ಕೆ, ಈ ಸರ್ಕಾರ ನಿಜವಾದಂಥ ದಿಶೆಯಲ್ಲಿ ತಮ್ಮ ಕೆಲಸವನ್ನು ಮಾಡುತ್ತಿರುವುದನ್ನು ಕಂಡಿದ್ದೇವೆ. ಅದೇ ರೀತಿಯಾಗಿ 70 ಸಾವಿರ ಪಂಪುಸೆಟ್‌ಗಳಿಗೆ, ಮೊದಲು 60 ಸಾವಿರ ರೂಪಾಯಿಗಳನ್ನು ಅಕ್ರಮಗಳನ್ನು ಸಕ್ರಮಗೊಳಿಸತಕ್ಕಂಥದ್ದಕ್ಕೆ ಇಟ್ಟಿದ್ದೆವು. ಆದರೆ ಅದನ್ನು ನಾವು 30 ಸಾವಿರ ರೂಪಾಯಿಗಳಿಗೆ ಇಳಿಸಿದೆವು ಅದಾದಮೇಲೆ 10 ಸಾವಿರ ರೂಪಾಯಿಗಳಿಗೆ ಇಳಿಸಿದ್ದೇವೆ. ಅದಕ್ಕಾಗಿ ಏನು ಇಟ್ಟಿರತಕ್ಕಂಥ ಹಣ ಕಡಿಮೆ ಇದ್ದರೂ ಕೂಡ ಅದನ್ನು ನಾವು ಕೊಡುತ್ತೇವೆನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅದೇ ರೀತಿ 11ನೇ ಹಣಕಾಸಿನ ಯೋಜನೆಯ ಮೂಲಕ ನಾವು ಕೇವಲ 7 ಪ್ರಥಮ ದರ್ಜೆ ಕಾಲೇಜುಗಳನ್ನು ತೆಗೆಯುತ್ತೇವೆ ಎನ್ನತಕ್ಕಂಥದ್ದನ್ನು ಏನು ಹೇಳಿದ್ದಾರೆ ಇದು ನಿಜವಾಗಿಯೂ ಕೂಡ ಸಾಲದು.

ಶ್ರೀ ಬಿ.ಶಿವರಾಮು (ಗಂಡಸಿ) : ಮಾನ್ಯ ಉಪಾಧ್ಯಕ್ಷರ ಮೂಲಕ ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡುವುದಾದರೆ, ಈಗ ಪಂಪುಸೆಟ್ಟುಗಳ ಸಕ್ರಮೀಕರಣದ ವಿಚಾರದಲ್ಲಿ 10 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ, ಒಟ್ಟು ಗುರಿ 70 ಸಾವಿರ ಎನ್ನತಕ್ಕಂಥದ್ದನ್ನು ಆಯವ್ಯಯದಲ್ಲಿ ಹೇಳಿದ್ದಾರೆ, ಪ್ರಾರಂಭದಲ್ಲಿ ಸಕ್ರಮೀಕರಣ ಯೋಜನೆಯನ್ನು ತಂದಾಗ 5 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದು ಬಹುಶ: ತಮಗೆ ಗೊತ್ತಿದೆ. ಮಾನ್ಯ ಜೆ.ಹೆಚ್. ಪಟೇಲರು ಇದ್ದಾಗ ತಾವೇ ಮಾಡಿದಂಥ ಯೋಜನೆಯಾಗಿತ್ತು. 10 ಸಾವಿರ ರೂಪಾಯಿಗಳನ್ನು ಮಾಡಿರತಕ್ಕಂಥದ್ದು ರೈತರಿಗೆ ಹೊರೆಯಾಗುವುದಿಲ್ಲವೇ? Service main ಗೇ ಇದ್ದದ್ದು ಕೇವಲ ಎರಡೂವರೆ ಸಾವಿರ ರೂಪಾಯಿಗಳು. ಮತ್ತೆ ಕಂಬಗಳನ್ನು ಹಾಕತಕ್ಕಂಥದ್ದಕ್ಕೆ 5 ಸಾವಿರ ಎಂದು ಹೇಳಿ ಮಾನ್ಯ ಜೆ.ಹೆಚ್. ಪಟೇಲರು ಇದ್ದಾಗ ಪ್ರಪ್ರಥಮವಾಗಿ ಆ ಯೋಜನೆ ನನ್ನ ಕ್ಷೇತ್ರದಿಂದ pilot scheme ನಲ್ಲಿ ಬಂದಿರುವಂಥದ್ದು. ಯಾವಾಗ ಹೆಚ್ಚುವರಿಯಾಯಿತೋ, ಅಲ್ಲಿಂದ ಇಲ್ಲಿಯವರೆಗೆ ನಿಮ್ಮ ಸಕ್ರಮೀಕರಣದ ಯೋಜನೆ ಸಕ್ರಮೀಕರಣಗೊಳ್ಳುತ್ತಲೇ ಇಲ್ಲ. ಏಕೆಂದರೆ, ರೈತರ ಮೇಲೆ ಹೆಚ್ಚು ಹೊರೆ ಯಾಗುತ್ತಿದೆ. ಈಗ ನಮ್ಮ ಮಾಹಿತಿಯ ಪ್ರಕಾರ, 70 ಸಾವಿರ ತಾವು ಗುರಿ ಇಟ್ಟಿದ್ದರೂ ಕೂಡ ಸಾಧಾರಣ 3 ಲಕ್ಷಕ್ಕೂ ಹೆಚ್ಚು ಅನಧಿಕೃತ ಪಂಪ್‌ಸೆಟ್‌ಗಳು ಈ ರಾಜ್ಯದಲ್ಲಿವೆ. ಅದರಿಂದಾಗುತ್ತಿರತಕ್ಕಂಥ ಇತರೆ ಹೊರೆಯನ್ನು ಯೋಚನೆ ಮಾಡಿದಾಗ, ಡಿಸಿಗಳು ಪದೇ ಪದೇ ಸುಡುತ್ತಿರತಕ್ಕಂಥದ್ದು, ಮೋಟಾರ್‌ಗಳು ಹೋಗುತ್ತಿರುವುದನ್ನು ಲೆಕ್ಕ ಹಾಕಿದರೆ ತಾವು ಗುರಿಯನ್ನು ಕೂಡ ಹೆಚ್ಚಿಸಬೇಕು ಮತ್ತು ಆ 10 ಸಾವಿರದ ಪ್ರಮಾಣವೇನಿದೆ ಅದನ್ನು ಹಿಂದೆ ಇತ್ತಲ್ಲ ಕನಿಷ್ಟ 5 ಸಾವಿರ –ಎರಡೂವರೆ ಸಾವಿರಕ್ಕೆ ನಿಗದಿ ಮಾಡಿದರೆ ಬಹುಶ: ರೈತರಿಗೆ ಸಹಕಾರ ಆಗುತ್ತದೆ. ತಾವು ಹಿರಿಯರು ಮಾತನಾಡುತ್ತಿದ್ದೀರೆಂದೇ ನಾನು ಮಧ್ಯ ಪ್ರವೇಶ ಮಾಡಿದ್ದೇನೆ.

ಶ್ರೀ ಹೆಚ್. ನಿಂಗಪ್ಪ : ಆಯವ್ಯಯದಲ್ಲಿ ಇಪ್ಪತ್ತಾರುವರೆ ಸಾವಿರ ರೂಪಾಯಿಗಳಲ್ಲಿ 16 ಸಾವಿರ ಚಿಲ್ಲರೆ ಸರ್ಕಾರದವರು ಕಟ್ಟತಕ್ಕಂಥದ್ದು ಉಳಿದ 10 ಸಾವಿರ ರೈತ ಕಟ್ಟತಕ್ಕಂಥದ್ದು. ಆದರೆ ಇದರಲ್ಲೇನಾಗಿದೆ, ರೈತ ಕೇವಲ 10 ಸಾವಿರವನ್ನೇ ಕಟ್ಟಬೇಕಾಗಿಲ್ಲ. ಇನ್ನೂ ಜಾಸ್ತಿ ಕಟ್ಟಬೇಕಾಗಿ ಬರುತ್ತದೆ. ಅಲ್ಲಿ ಮೀಟರ್ ಚಾರ್ಜ್ ಫೀಸ್ ವಗೈರೆ ಎಂದೆಲ್ಲ ಹೇಳಿ 14 ಸಾವಿರ ಚಿಲ್ಲರೆ ಬರುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳೇ ಹೇಳಿರುವುದನ್ನು ನೋಡಿದ್ದೇವೆ ಮಾನ್ಯ ಹಿರಿಯ ಸದಸ್ಯರು ಹೇಳಿದ ರೀತಿಯಲ್ಲಿ. 5 ಸಾವಿರಕ್ಕೆ ನಿಗದಿ ಮಾಡಿದ್ದರೆ, ಎಲ್ಲರೂ ಕೂಡ ಅಕ್ರಮ ಸಂಪರ್ಕವನ್ನು ಸಕ್ರಮಗೊಳಿಸಿಕೊಳ್ಳುತ್ತಾರೆ. ಈಗ 10 ಸಾವಿರ ನಿಗದಿಮಾಡಿದ್ದರೂ, ಕೂಡ ಒಟ್ಟಾರೆಯಾಗಿ ಅವರು 16 ಸಾವಿರ ಕಟ್ಟ ಬೇಕಾಗಿರುವುದರಿಂದ ಯಾರೂ ಕೂಡ ಅಕ್ರಮ ಸಂಪರ್ಕವನ್ನು ಸಕ್ರಮಗೊಳಿಸತಕ್ಕಂಥ ನಿಟ್ಟಿನಲ್ಲಿ ಪ್ರಯತ್ನ ಮಾಡುವುದಿಲ್ಲ. ಏಕೆಂದರೆ ಅವರಿಗೆ ಹೆಚ್ಚು ಹೊರೆಯಾಗುತ್ತದೆ ಎನ್ನುವ ಕಾರಣದಿಂದ ಅವರು ಆ ರೀತಿ ಮಾಡುವುದಿಲ್ಲ. ಆದುದರಿಂದ, ದಯಮಾಡಿ ಸರ್ಕಾರ ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡತಕ್ಕಂಥದ್ದು ರೈತರ ಹಿತದೃಷ್ಟಿಯಿಂದ ಒಳ್ಳೆಯದು ಎನ್ನುವುದು ನನ್ನ ಭಾವನೆ.

ಶ್ರೀ ಬಿ.ಶಿವರಾಮು: ಇದು ಎಲ್ಲರ ಭಾವನೆ ಕೂಡ ಆಗಿದೆ. ಇದರಲ್ಲಿ ಯಾವುದೇ ಪಕ್ಷ ಮತ್ತೊಂದು ಪ್ರಶ್ನೆ ಇಲ್ಲ. ರಿಜಿಸ್ಟ್ರೇಷನ್ ಫೀ ಮತ್ತೊಂದು ಎಲ್ಲ ಸೇರಿ 16,500 ರೂಪಾಯಿ ರೈತನಿಗೆ ಖರ್ಚು ಆಗುತ್ತದೆ. ಹಾಗಾಗಿ, ರೈತರು ಮುಂದೆ ಬರುತ್ತಿಲ್ಲ. ಅದಕ್ಕೇನಾದರೂ ಒಂದು ಸುಧಾರಿಣೆ ತುರುವುದು ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಹಿರಿಯರಾದ ಶಿವರಾಮುರವರು ಪ್ರಸ್ತಾಪ ಮಾಡಿರತಕ್ಕಂಥದ್ದು ಸರಿಯಾದದ್ದೇ. ಅದಕ್ಕಿಂತ ಕಡಿಮೆ ಮಾಡಬೇಕೆಂದು ಹೇಳಿ ನಮ್ಮೆಲ್ಲರ ಆಶಯ ಆದರೆ ನಿಮಗೆ ಗೊತ್ತಿರಬಹುದು, ಕನಿಷ್ಠ ಈ ತರಹದಲ್ಲಿ ಸಕ್ರಿಮೀಕರಣಗೊಳಿಸಬೇಕಾಗಿದ್ದರೆ, 25 ರಿಂದ 30 ಸಾವಿರ ರೂಪಾಯಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮಕ್ಕೆ ಹೊರೆ ಬೀಳುತ್ತದೆ. ನಾವು ಅಷ್ಟರಮಟ್ಟಿಗೆ ಸಶಕ್ತರಾಗಿದ್ದೇವೆ. ಒಂದು ಕಡೆಗೆ 4 ಪರ್ಸೆಂಟ್ ಬಡ್ಡಿಗೆ ಕೊಡಬೇಕೆಂದು ಹೇಳುತ್ತಾರೆ. ಒಂದು ಕಡೆಗೆ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಹೇಳುತ್ತಾರೆ. ಪೂರಕವಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಕೊಡಬೇಕು ಎನ್ನುವುದಕ್ಕೆ ಆಯವ್ಯಯದಲ್ಲಿ ಹಣ ನಿಗದಿ ಮಾಡಬೇಕೆಂದು ಹೇಳುತ್ತೇವೆ. ತೆರಿಗೆಯನ್ನು ಹೆಚ್ಚು ಮಾಡಬಾರದೆಂದೂ ಪ್ರತಿಪಾದನೆ ಮಾಡುತ್ತೇವೆ. ಸಂಪನ್ಮೂಲಗಳ ಇತಿಮಿತಿಯಲ್ಲಿ ತಮಗೇ ಗೊತ್ತಿದೆ ಹಿಂದೆ ನಮ್ಮ ಸರ್ಕಾರದಲ್ಲಿ ತಾವೆಲ್ಲರೂ ಇದ್ದಾಗ 60 ಸಾವಿರ ರೂಪಾಯಿಗಳನ್ನು ಮಾಡಿದ್ದೇವೆ. 60 ಸಾವಿರ ರೂಪಾಯಿ ಮಾಡಿದಾಗ, ಬೇರೆಯವರು ದುಡ್ಡು ಕಟ್ಟಲು ಸಾಧ್ಯವಿಲ್ಲವೆಂದಾಗ, ಅದನ್ನು ನಾವು 30 ಸಾವಿರ ರೂಪಾಯಿಗಳಿಗೆ ಇಳಿಸಿದ್ದೇವೆ. 30 ಸಾವಿರ ರೂಪಾಯಿಗಳು ಕೂಡ ರೈತರಿಗೆ ಹೊರೆಯಾಗುತ್ತದೆನ್ನುವ ಕಾರಣಕ್ಕಾಗಿಯೇ ಅದನ್ನು ಮತ್ತೆ ನಾವು 10 ಸಾವಿರ ರೂಪಾಯಿಗಳಿಗೆ ಇಳಿಸಿದ್ದೇವೆ. ಪ್ರಾಯಶ : ಮುಂದಿನ ದಿನಮಾನಗಳಲ್ಲಿ ನಮ್ಮ ಸಂಪನ್ಮೂಲಗಳ ಕ್ರೋಡಿಕರಣದಲ್ಲಿ ಹೆಚ್ಚು ಶಕ್ತಿಯಾದಂಥ ಸಂದರ್ಭ ಬಂದಾಗ ಅದನ್ನು ನಾವು ನೋಡಬಹುದು. ಈಗಾಗಲೇ 30 ಸಾವಿರ ರೂಪಾಯಿಗಳಷ್ಟು ಖರ್ಚು ಇಬಂದರೂ ಕೂಡ 10 ಸಾವಿರ ರೂಪಾಯಿ ತೆಗೆದುಕೊಂಡು ಉಳಿದುದನ್ನು ನೀವೆ ನೋಡಿಕೊಳ್ಳಬೇಕು ನೀವು ಇನ್ನೊಂದು ಮುಖವನ್ನು ನೋಡಬೇಕು. ಅಕ್ರಮವಾಗಿ ಕರೆಂಟ್ ಅನ್ನು ತೆಗೆದುಕೊಂಡಿರತಕ್ಕಂಥವರು ಅಲ್ಲಿಯ ಅಧಿಕಾರಿಗಳಿಗೆ ಮತ್ತು ಲೈನ್‌ಮನ್‌ಗಳಿಗೆ ಎಷ್ಟು ಲಂಚವನ್ನು ಕೊಡುತ್ತಿದ್ದರೆನ್ನುವುದನ್ನೂ ತಾವು ಯೋಚನೆ ಮಾಡಬೇಕು. ಭಯಭೀತರಾಗಿರಬೇಕು. ಅವರು ಬರುತ್ತಾರೆಂದ ತಕ್ಷಣವೇ ಡಿಸ್-ಕನೆಕ್ಟ್ ಮಾಡಿಕೊಳ್ಳಬೇಕು. ಮತ್ತು ಅವರ ಕೈಗಳನ್ನು ಬೆಚ್ಚಗಿರಿಸಬೇಕು. ಇವುಗಳಿಗಾಗುವಂಥದ್ದು ಕೂಡ 5 ರಿಂದ 10 ಸಾವಿರ ರೂಪಾಯಿಗಳಾಗುತ್ತಿತ್ತು. ಆದರೆ ತಾವು ಉತ್ತಮವಾದಂಥ ಸಲಹೆ ಕೊಟ್ಟಿದ್ದೀರಿ. ಸಂಪನ್ಮೂಲಗಳು ಹೆಚ್ಚಾದಂಥ ಸಂದರ್ಭದಲ್ಲಿ ಇದನ್ನು ಕೂಡ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಪ್ರಸ್ತಾಪ ಮಾಡುತ್ತೇನೆ. ಇನ್ನೊಂದು ತಾವು ಗಮನಿಸಬೇಕಾದದ್ದು, ಈ ಬಡ್ಜೆಟ್‌ನ ಬಗ್ಗೆ ಅಭಿಮಾನ ಪಡೆಬೇಕೆನ್ನುವುದಕ್ಕೆ, ಹಿಂದಿನ ಸರ್ಕಾರದವರು ಯೋಜನೆ ಮಾಡಿರತಕ್ಕಂಥ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಕೊಟ್ಟಿರತಕ್ಕಂಥದ್ದನ್ನು ಕಾಣುತ್ತೇವೆ. ಅದು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವಾಗಿರಬಹುದು, ಹಿಂದುಳಿದ ಜನಾಂಗದ ಅಭಿವೃದ್ಧಿ ನಿಗಮವಾಗಿರಬಹುದು, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸಂಬಂಧಪಟ್ಟಿದ್ದಿರಬಹುದು, ಇವೆಲ್ಲ ಯೋಜನೆಗಳಿಗೆ ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿರುವ ಯೋಜನೆಗಳೆ ಈ

ಯೋಜನೆಗಳಿಗೆ ಹೆಚ್ಚಿನ ಹಣಕಾಸನ್ನು ಕೊಡುವುದರ ಮೂಲಕವಾಗಿ ಜನಪರವಾದಂಥ ಕಾರ್ಯಕ್ರಮಗಳಿಗೆ ಈ ಸರ್ಕಾರ ಪಕ್ಷಾತೀತವಾಗಿ ಬದ್ಧವಾಗಿದೆ. ಆ ಜನಗಳಿಗೆ ಸಂಬಂಧಪಟ್ಟಿರತಕ್ಕಂಥ ವಿಷಯಗಳ ಬಗ್ಗೆ ಬದ್ಧವಾಗಿ ಕೆಲಸವನ್ನು ಮಾಡುತ್ತೇವೆ ಇನ್ನೊಂದು ಸಂತೋಷದ ವಿಷಯ ಮತ್ತು, we are redeeming ourselves ಎಂದೇನು ಕರೆಯುತ್ತೇವೆ, ನಾವು ಭಾರತೀಯ ಜನತಾ ಪಕ್ಷದ ಜೊತೆಗೆ ಸರ್ಕಾರ ಮಾಡಿದಂಥ ಸಂದರ್ಭಗಳಲ್ಲಿ ತಾವು ಕೆಲವು ಆತಂಕಗಳನ್ನು ವ್ಯಕ್ತ ಮಾಡಿದ್ದಿರಿ. ಆ ವ್ಯಕ್ತ ಮಾಡಿರತಕ್ಕಂಥದ್ದರಲ್ಲಿ ಭಾರತೀಯ ಜನತಾ ಪಕ್ಷ ಎಂದರೆ ಅಲ್ಪಸಂಖ್ಯಾತರ ವಿರೋಧಿ ಅನ್ನತಕ್ಕಂಥ ಒಂದು ಕಲ್ಪನೆ ಇದೆ. ಅದೇನಾದರೂ ಇರಲಿ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ, ತಾವು ಯೋಚನೆಯನ್ನು ಮಾಡಿ, ಈ ಬಡ್ಜೆಟ್‌ನಲ್ಲಿ ಇದು ಅಲ್ಪಸಂಖ್ಯಾತರ ವಿರೋಧಿಯಲ್ಲ ಎನ್ನುವಂಥ ರೀತಿಯಲ್ಲಿ ತಮ್ಮ ಇಚ್ಛಾಶಕ್ತಿಯನ್ನು ತಮ್ಮ ಆಯವ್ಯಯದಲ್ಲಿ ತೋರಿಸಿಕೊಟ್ಟಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಅಭಿವೃದ್ಧಿಗೆ ಸಂಬಂಧಪಟ್ಟಿರತಕ್ಕಂಥದ್ದಕ್ಕೆ ಕೊಟ್ಟಿದ್ದಾರೆ. ಇದರಲ್ಲಿ ಒಂದೇ ಒಂದು ಸಣ್ಣ ವಿಚಾರವನ್ನು ತಾವೇನು ಹೇಳುತ್ತೀರೆಂದರೆ, ಆರಾಧನಾದಲ್ಲಿ 2.50 ಲಕ್ಷ ರೂಪಾಯಿಗಳ ಜೊತೆಗೆ 5 ಲಕ್ಷ ರೂಪಾಯಿಗಳಿಗೇರಿಸಿ, ಕೇಸರೀಕರಣ ಮಾಡಲಿಕ್ಕೆ ತಾವು ಹೊರಟಿದ್ದೀರೆಂದು ತಾವು ಹೇಳುತ್ತೀರಿ. ಆದರೆ ನಮ್ಮ ಧಾರ್ಮಿಕದತ್ತಿ ಇಲಾಖೆಯಲ್ಲಿ ಅಧಿಸೂಚಿತವಾಗಿರತಕ್ಕಂಥ ದೇವಾಲಯಗಳು 34 ಸಾವಿರ ಇವೆ. ಅಧಿಸೂಚಿತವಾದ ದೇವಾಲಯಗಳು 34 ಸಾವಿರದಲ್ಲಿ, ನಾವು ಅಲ್ಪಸಂಖ್ಯಾತರಾಗಿರತಕ್ಕಂಥ ಕ್ರಿಶ್ಚಿಯನ್‌ರಿಗೆ, ಜೈನರಿಗೆ, ಸಿಖ್‌ರಿಗೆ, ಮುಸಲ್ಮಾನರಿಗೆ ಆಯಾ ತಾಲ್ಲೂಕುಗಳಲ್ಲಿರುವಂಥ ಆಯಾ ಪ್ರಾರ್ಥನಾ ಮಂದಿರಗಳಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆನ್ನುವುದಕ್ಕಾಗೇ 6 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿದ್ದರು. ನಾವು ಕಳೆದ ಬಾರಿ ಧರ್ಮಸಿಂಗ್‌ರವರ ನೇತೃತ್ವದಲ್ಲಿದ್ದಾಗ ಸಮಾನವಾಗಿ ಹಂಚಬೇಕೆನ್ನುವುದಕ್ಕೆ 6 ಕೋಟಿ ರೂಪಾಯಿಗಳನ್ನು 224 ಕ್ಷೇತ್ರಗಳಿಗೆ ಹಂಚಿದಾಗ, ಅವರಿಗೆ 2.80 ಲಕ್ಷ ರೂಪಾಯಿಗಳು ಪ್ರತಿ ಶಾಸಕರ ಆರಾಧನಾ ಸಮಿತಿಗೆ ಲಭ್ಯವಾಯಿತು. ಈಗ ಅದನ್ನು 5 ಲಕ್ಷ ರೂಪಾಯಿಗಳಿಗೆ ಏರಿಸಿದಾಗ ಎಲ್ಲ ಶಾಸಕರು ಕೂಡ ಒಕ್ಕೊರಲಿನಿಂದ ಹೇಳಿದರು, ಆರಾಧನಾ ಯೋಜನೆಯಲ್ಲಿ ಕೊಡತಕ್ಕಂಥ 2.80 ಲಕ್ಷ ರೂಪಾಯಿಗಳು ಏನೂ ಸಾಲದು ಬೇರೆ ಕಾರಣಗಳಿಗಾಗಿ ಕೊಡತಕ್ಕಂಥದ್ದು 6 ಕೋಟಿ ರೂಪಾಯಿಗಳು. ಅಂದರೆ ಮುಜರಾಯಿ ದೇವಸ್ಥಾನಗಳಾಗಿರಬಹುದು. ಮುಜರಾಯೇತರವಾಗಿರತಕ್ಕಂಥ ದೇವಸ್ಥಾನಗಳಾಗಿರಬಹುದು. ಅವುಗಳ ಜೀರ್ಣೋದ್ಧರಕ್ಕಾಗಿ ಮತ್ತು ಅಲ್ಲಿರುವ ತಸ್ತೀಕ್ ಕೊಡಬೇಕಾದಂಥ ವಿಚಾರದಲ್ಲಿ ಹಿಂದೆ ನಾನು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದೆ. ಮಾನ್ಯ ಯಡಿಯೂರಪ್ಪನವರನ್ನು ನಾನು ಅಭಿನಂದಿಸುತ್ತೇನೆ. ಹಿಂದೆ ನಮ್ಮಲ್ಲಿ ಭೂ ಸುಧಾರಣಾ ಕಾಯಿದೆ ಮಠ ಮಾನ್ಯಗಳಿಗೆ ಸಂಭಂದಿಸಿದದಂತೆ ದೇವಾಲಯಗಳಿಗೆ ಸಂಭಂದಿಸಿದಂತೆ ಉಂಬಳಿ ಕೊಟ್ಟಿರತಕ್ಕಂಥ ಭೂಮಿಗಳನ್ನು ಕೊಟ್ಟಿರತಕ್ಕಂಥ, ದಾನವಾಗಿ ಕೊಟ್ಟಿರತಕ್ಕಂಥ ಭಕ್ತರ ಭೂಮಿಗಳನ್ನು ನಾವು ಪರಿಹಾರ ಕೊಡದೇ ತೆಗೆದುಕೊಂಡಿರತಕ್ಕಂಥದ್ದಿದೆ. ಪರಿಹಾರ ಅನ್ನತಕ್ಕಂಥದ್ದು ತೀರಾ ಕಡಿಮೆ ಮಟ್ಟದಲ್ಲಿ ಕೊಟ್ಟಿರತಕ್ಕಂಥದ್ದು ಇದೆ. ಆ ಪರಿಹಾರದಲ್ಲಿ 5 ರೂಪಾಯಿ. 10 ರೂಪಾಯಿಗಳನ್ನು ತಸ್ತೀಕ್ ಆಗಿ ಕೊಡುತ್ತೊಇದ್ದರು. ಆ ತಸ್ತಿಕ್ ಅನ್ನು ಕೊಟ್ಟಿರುವುದರಲ್ಲಿ ಯಾವ ದೇವಾಲಯದಲ್ಲಿಯೂ ಕೂಡ ನಾವು ದೀಪಾರಾಧನೆ ಮಾಡಲಿಕ್ಕೆ

ಸಾಧ್ಯವಾಗುತ್ತಿರಲಿಲ್ಲ. ಒಂದು ದೀಪವನ್ನು ಹಚ್ಚಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಕನಿಷ್ಠ ಅಲ್ಲಿ 500 ರೂಪಾಯಿಗಳಾದರೂ ಕೂಡ ಪ್ರತಿಯೊಂದು ದೇವಾಲಯಕ್ಕೆ ಕೊಡಬೇಕೆನ್ನತಕ್ಕಂಥ ಪ್ರಸ್ತಾವನೆ ಇತ್ತು. ಅದನ್ನು ಹಿಂದೆ ಮಾನ್ಯ ಪಿ ಜಿ ಆರ್ ಸಿಂಧ್ಯರವರು ಹಣಕಾಸು ಸಚಿವರಾದಂಥ ಸಂದರ್ಭದಲ್ಲಿ ಅದಕ್ಕಾಗಿ ಮಂಜೂರಾತಿ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದನ್ನು ಮಾನ್ಯ ಯಡಿಯೂರಪ್ಪನವರು ಸಾಬೀತುಪಡಿಸಿ" ಈ ತಸ್ತೀಕ್‌ನ ಮೊತ್ತ ಕನಿಷ್ಠ 500 ರೂಪಾಯಿಗಳಾಗ ಬೇಕೆಂದು ನಿಗದಿಪಡಿಸಲು ನಾನು ಉದ್ದೇಶಿಸಿದ್ದೇನೆ" ಎಂದು ಹೇಳಿದ್ದಾರೆ. ಮಾನ್ಯ ದಿನೇಶ್ ಗುಂಡೂರಾವ್‌ರವರು ಇಲ್ಲಿರ ಬೇಕಾಗಿತ್ತು. ಅರ್ಚಕರ ಸಮ್ಮೇಳನವನ್ನು ಮಾಡಿದಾಗ ಅವರೇ ಅದರಲ್ಲಿ ಬಹಳ ಆಸಕ್ತಿಯನ್ನು ತೆಗೆದುಕೊಂಡು ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿದ್ದರು. ಆ ಅರ್ಚಕರ ಸಮ್ಮೇಳನದಲ್ಲಿ ಆಗ 500 ರೂಪಾಯಿ ಕೊಡತಕ್ಕಂಥದ್ದರ ಬಗ್ಗೆ ನಿರ್ಧಾರ ಮಾಡಿರತಕ್ಕಂಥದ್ದನ್ನು ಈ ಬಾರಿ ಮಾನ್ಯ ಯಡಿಯೂರಪ್ಪನವರು ಜಾರಿಗೆ ತಂದು ಅದಕ್ಕೆ 24.3 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು ಅಭಿನಂದನೆಗೆ ಅರ್ಹವಾಗಿದೆ. ಅದೇ ರೀತಿಯಾಗಿ, 20 ಕೋಟಿ ರೂಪಾಯಿಗಳನ್ನು ದೇವಾಲಯಗಳಿಗೆ ನಾವು ಕೊಡಬೇಕು ಎನ್ನುವ ಮಾತನ್ನು ಕೂಡ ಹೇಳಿದ್ದರು. ಏಕೆಂದರೆ, ನಮ್ಮ ದೇವಾಲಯಗಳಲ್ಲಿ ಅದರಲ್ಲೂ ಕೂಡ ಬಡವರು ಇರತಕ್ಕಂಥ ದೇವಾಲಯಗಳಿವೆ ಮತ್ತು ಹೆಣ್ಣು ದೇವತೆಗಳಿಗೆ ಹೆಚ್ಚು ಆದಾಯಗಳಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಮಾನ್ಯ ಹೆಗ್ಡೆಯವರನ್ನು ಮತ್ತು ಗೋಪಾಲ ಪೂಜಾರಿ ಯವರನ್ನು ನಾನು ಅಭಿನಂದಿಸುತ್ತೇನೆ. ನಿಮ್ಮ ಜಿಲ್ಲೆಗಳಲ್ಲೇ ಎಲ್ಲ ಶ್ರೀಮಂತ ದೇವಾಲಯಗಳಿರತಕ್ಕಂಥದ್ದು ನಮ್ಮಲ್ಲಿ ದೇವರು ಕೂಡ ಬಡ ದೇವರು. ಆ ಕಾರಣಕ್ಕಾಗಿ. ನಾವು ಯಾವ ಅಭಿವೃದ್ಧಿಯನ್ನೂ ಕೂಡ ಮಾಡಲು ಆಗುವುದಿಲ್ಲ. ನಾವು ಬಡವರಾಗಿರುವುದರಿಂದ.....

ಶ್ರೀ ಆಂಜನಾಮೂರ್ತಿ : ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ್‌ರವರು ತಸ್ತೀಕ್‌ನ ಬಗ್ಗೆ ಮಾತನಾಡುತ್ತಿದ್ದಾರೆ. ತಸ್ತೀಕ್ ಕೊಡಬಾರದೆಂದು ಯಾರೂ ಹೇಳುವುದಿಲ್ಲ. ತಸ್ತೀಕ್ ಕೊಡಬೇಕು. ಆದರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಗ್ರಾಮದಲ್ಲಿ ಸೇವೆ ಮಾಡಿದಂಥ ಪಟೇಲರುಗಳಿದ್ದಾರೆ. ಇವತ್ತು ಅವರು ತಿನ್ನುವುದಕ್ಕೆ ಅನ್ನವಿಲ್ಲದೆ ಗ್ರಾಮದಲ್ಲಿ ಸೇವೆ ಮಾಡಿದಂಥ ಜನಗಳಾಗಿರುವುದರಿಂದ. ಅವರಿಗೂ ಯಾವ ರೀತಿ ತಸ್ತೀಕ್ ಅಮೌಂಟ್ ಈ ಪುರೋಹಿತರಿಗೆ ಕೊಡುತ್ತೀರೋ ಆ ರೀತಿ ಸಹ ಪಟೇಲರಿಗೆ ಏನಾದರೂ ಕೊಡುವುದಾದರೆ ಬಹಳ ಸೂಕ್ತವೆಂದು ನನ್ನ ಸಲಹೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ಹೇಳುತ್ತಿರುವುದು ಪಟೇಲರಿಗೆ ಅಲ್ಲ. ಗ್ರಾಮ ಸಹಾಯಕರು.

ಶ್ರೀ ಆಂಜನಾಮೂರ್ತಿ : ಗ್ರಾಮ ಸಹಾಯಕರು ಬೇರೆ. ಶಾನುಭೋಗರಿಗೆ, ಪಟೇಲರಿಗೆ

ಶ್ರೀ ಎಸ್.ಎಸ್. ಪಾಟೀಲ್ : ಅವರಿಗೆ ಆಸ್ತಿ ಇರುತ್ತದೆ ಬಿಡಿ ಆ ಗ್ರಾಮ ಸಹಾಯಕರೆಂದು ಎಸ್‌ಸಿ:ಎಸ್‌ಟಿ, ಹಿಂದುಳಿದವರೂ ಅಲ್ಲಿದ್ದಾರೆ. ಆ ಗ್ರಾಮ ಸಹಾಯಕರಿಗೆ ಕೊಡಬೇಕು. ಅದನ್ನು ನಾವು ಕೇಳುತ್ತಿದ್ದೇವೆ ಗ್ರಾಮ ಸಹಾಯಕರ ಅವಶ್ಯವಾದ ಒಂದು ಪೋಸ್ಟ್ ಅದು. ದಯವಿಟ್ಟು ಅವರಿಗೆ ಕೇವಲ ಭತ್ಯ ಏರಿಸುತ್ತೇವೆಂದು ಹೇಳುತ್ತೀರಿ. ಅವರನ್ನು ಪರ್ಮನೆಂಟ್ ಮಾಡಿಕೊಡಿ ಎಂದು ವಾದವಿರುವುದು. ಅದನ್ನು ತಾವು ಮಾಡಬೇಕು.

ಶ್ರೀ ಆಂಜನಾಮೂರ್ತಿ : ಗ್ರಾಮ ಸೇವಕರಿಗೆ ಕೊಡುತ್ತಿದ್ದಾರೆ. ಬಹಳ ಕಡಿಮೆ ಇದೆ. ಅದರ ಜೊತೆಗೆ, ತಮ್ಮ ಮೂಲಕ ಮಾನ್ಯ ಸಚಿವರಿಗೆ ನನ್ನ ಒತ್ತಾಯವೆಂದರೆ, ಅವರಿಗೆ ಸಹಾಯ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಅನುವಂಶೀಯವಾಗಿರತಕ್ಕಂಥ ಹುದ್ದೆಗಳನ್ನು ನಾವು.....

ಉಪಾಧ್ಯಕ್ಷರು : ಒಂದು ನಿಮಿಷ, ನಿಗ್ಲಿಯವರು ಏನೋ ಹೇಳುತ್ತಿದ್ದಾರೆ.

ಶ್ರೀ ಐವಾನ್ ನಿಗ್ಲಿ : ಸನ್ಮಾನ್ಯ ಅಧ್ಯಕ್ಷರೆ, ಸಂತೋಷ ಆರಾಧನ ಸ್ಕೀಂನಲ್ಲಿ ಎರಡೂವರೆ ಲಕ್ಷ ದಿಂದ ಐದು ಲಕ್ಷ ರೂಪಾಯಿವರೆಗೆ ಹೆಚ್ಚಿಗೆ ಮಾಡಿದ್ದಾರೆ. That is for each constitusly. It is a very good subject. Simultaneously. ಮುಸ್ಲಿಂ ಬಾಂಧವರಿಗೆ, ವಕ್ಫ್ ಬೋರ್ಡ್‌ನವರು ಇದ್ದಾರೆ. So, they can take care of thein building and other needs. ಈಗ why this discrimination is here why christians are not given any portion of amount from your budget? ಹೋದ ವರ್ಷ ಕ್ರಿಶ್ಚಿಯನ್ಸ್‌ಗೆ ಕೊಡಲಿಲ್ಲ. ನಮಗೆ ಬೆಂಗಳೂರಿನಲ್ಲಿ ಸುಮಾರು ಚರ್ಚ್‌ಗಳು ಇವೆ. ಮೊನ್ನೆ ಒಬ್ಬ ಫಾದರ್ ನಮಗೆ ಒಂದು ಲೆಟರ್ ಕೊಟ್ಟಿದ್ದಾರೆ, ಮೈಸೂರಿನಲ್ಲಿ 200 ವರ್ಷ ಹಳೆಯದು ಒಂದು ಚರ್ಚ್ ಇದೆ. ಆ ಚರ್ಚ್ ತುಂಬಾ. It is in very bad condition

ಶ್ರೀ ಎಂ.ಪಿ.ಪ್ರಕಾಶ್ : I really appreciate your concern ಅವರಿಗೆ ಬಹುಶ : ಆರಾಧನ ಪರಿಕಲ್ಪನೆ ಗೊತ್ತಿರಲ್ಲಿಕ್ಕಿಲ್ಲ. ಆರಾಧನಾ ಯೋಜನೆ ರೂಪಿಸಿರತಕ್ಕಂಥದ್ದೆ ಈ ತರಹದ ಅಲ್ಪಸಂಖ್ಯಾತರಾದಂಥ ಕ್ರಿಶ್ಚಿಯನ್ನರಿಗೆ, ಮುಸಲ್ಮಾನರಿಗೆ, ಜೈನರಿಗೆ, ಸಿಖ್‌ರವರಿಗೆ, ಹಾಗೂ ಹರಿಜನ ಬಸ್ತಿಗಳಿಗೆ ಆ ಹಣವನ್ನು ಕೊಡಬೇಕೆಂದು ಮಾಡಿರುವುದು. ಅದನ್ನು 5 ಲಕ್ಷಕ್ಕೆ ಏರಿಸಿರುವಂಥದ್ದು ಕೂಡ ಆಗಿದೆ. ವಕ್ಫ್ ಬೋರ್ಡ್‌ಗೆ ಕೂಡ ನಾವು ಕೊಟ್ಟಷ್ಟು ಹಣವನ್ನು ಕೊಡುವುದಿಲ್ಲ. ಯುಪಿ ಯಲ್ಲಿ ಶೇಕಡ 13 ರಿಂದ 16 ಪರ್ಸೆಂಟ್ ಮುಸ್ಲಿಂ ಜನಾಂಗ ಇದೆ. ಅಲ್ಲಿ ಇರುವಂಥ ಸುನ್ನಿ ವಕ್ಫ್ ಬೋರ್ಡ್‌ಗೆ ಒಂದು ಕೋಟಿ ರೂಪಾಯಿ, ಶಿಯಾ ವಕ್ಫ್ ಬೋರ್ಡ್‌ಗೆ ಒಂದು ಕೋಟಿ ರೂಪಾಯಿಗಳನ್ನು ಮಾನ್ಯ ಮುಲಾಯಂ ಸಿಂಗ್‌ರವರು ಕೊಟ್ಟಿದ್ದಾರೆ. ಇಲ್ಲಿ ಏಳು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಕೊಟ್ಟಿದ್ದೇವೆ. ಮಾನ್ಯ ರೋಷನ್ ಬೇಗ್‌ರವರು ತಮ್ಮ ಸ್ವತ: ಪ್ರಯತ್ನದ ಮೂಲಕವಾಗಿ ಹಜ್ ಯಾತ್ರಿಗಳಿಗೆ ಮಾಡಿರತಕ್ಕಂಥ ಅನೇಕ ಕಾರ್ಯಕ್ರಮಗಳನ್ನು ತಾವು ಯೋಚನೆ ಮಾಡಬಹುದು. ಇಲ್ಲಿ ನಮ್ಮ ಹಿಂದಿನ ಸರ್ಕಾರ, ಧರ್ಮ ಸಿಂಗ್‌ರವರ ಕಾಲದಲ್ಲಿ ಮತ್ತು ಅದರ ಹಿಂದೆ ಇದ್ದಂಥ ನಮ್ಮ ಸರ್ಕಾರದ ಕಾಲದಲ್ಲಿ, ನಾನು ಮೆರಾಜುದ್ದೀನ್ ಪಟೇಲ್ ರವರನ್ನು ಅಭಿನಂದಿಸುತ್ತೇನೆ, ವಕ್ಫ್ ಪ್ರಾಪರ್ಟಿಯ ಬಗ್ಗೆ ದೊಡ್ಡ ದೊಡ್ಡ ಅದ್ವೆರರಾಗಿರತಕ್ಕವರು ವಿಂಡ್ಸರ್ ಮ್ಯಾನರ್‌ನ್ನು ಆ ವಕ್ಫ್ ಪ್ರಾಪರ್ಟಿಯನ್ನು ಖಾಸಗಿಯಾಗಿ ಆರು ಸಾವಿರ ರೂಪಾಯಿ ಒಂದು ತಿಂಗಳಿಗೆ ಬಾಡಿಗೆ ಆಧಾರದ ಮೇಲೆ ಕೊಟ್ಟಿದ್ದರು. ಸುಪ್ರೀಂಕೋರ್ಟಿನವರವಿಗೆ ಹೋಗಿ ನಾವು ಹೋರಾಟ ಮಾಡಿ ಗೆದ್ದು ಬಂದಿದ್ದರಿಂದ ಇವತ್ತು ತಾವು ಯೋಚನೆ ಮಾಡಿ ನಲವತ್ತು ಲಕ್ಷ ರೂಪಾಯಿ ತಿಂಗಳಿಗೆ ಆದಾಯ ಬರುತ್ತದೆ. ಆ ಬಾಡಿಗೆ ಹಣದಿಂದ ಆದಾಯ ಬರುತ್ತಿದೆ ಆರು ಸಾವಿರ ರೂಪಾಯಿ ಎಲ್ಲಿ? ನಲವತ್ತು ಲಕ್ಷ ರೂಪಾಯಿಗಳು ಎಲ್ಲಿ? ಯಾರು ಮುಸಲ್ಮಾನ ಜನಾಂಗದ

ನಾಯಕರು ಎಂದು ಪರಿಭಾವಿಸಿಕೊಂಡು ತಮ್ಮನ್ನು ತಾವು ತೋರಿಸಿಕೊಳ್ಳುತ್ತಿದ್ದರು, ಅವರು ಆರು ಸಾವಿರ ರೂಪಾಯಿ ಬಾಡಿಗೆಗೆ ಆ ಪ್ರಾಪರ್ಟಿಯನ್ನು ಕೊಟ್ಟಿದ್ದರು. ಆದರೆ ಹಿಂದಿನ ನಮ್ಮ ಸರ್ಕಾರ ಪಟೇಲ್‌ರ ಕಾಲದಲ್ಲಿ ನಂತರ ಧರ್ಮಸಿಂಗ್‌ರವರ ಕಾಲದಲ್ಲಿ ಮೆರಾಜುದ್ದೀನ್ ಪಟೇಲ್‌ರವರು ವಕ್ಫ್ ಮಂತ್ರಿಗಳಾಗಿದ್ದಾಗ ಯಾವ ಪ್ರಲೋಭಗಳಿಗೂ ಒಳಗಾಗದಂಥ ರೀತಿಯಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಬಂದ ಮೇಲೆ ಇವತ್ತು ನಲವತ್ತು ಲಕ್ಷ ರೂಪಾಯಿ ಆಧಾಯ ಬರುತ್ತಿದೆ. ಆದುದರಿಂದ, ನಾವು ವಕ್ಫ್ ಬೋರ್ಡ್ ವಿಚಾರದಲ್ಲಿ ಇವತ್ತಿಗೂ ಕೂಡ ವಕ್ಫ್‌ಗೆ ಸಂಬಂಧಪಟ್ಟಂಥ ಕಟ್ಟಡ ಕನ್ನಿಂಗ್‌ಹ್ಯಾಂ ರೋಡ್‌ನಲ್ಲಿ ಏನು ಕಟ್ಟಿದ್ದೇವೆ, ಅರವತ್ತೇಂಟು ಲಕ್ಷ ರೂಪಾಯಿಗಳನ್ನು ಆಗ ನಮ್ಮ ಲ್ಯಾಂಡ್ ಅರ್ಮಿಯಿಂದ ಕೊಡಿಸಿದ್ದೆ. ಇವತ್ತಿಗೂ ಕೂಡ ವಕ್ಫ್ ಬೋರ್ಡ್ ಲ್ಯಾಂಡ್ ಆರ್ಮಿಗೆ ದುಡ್ಡು ಕೊಟ್ಟಿಲ್ಲ. ನನಗೆ ಒಂದು ಹೆಮ್ಮೆಯ ಸಂಗತಿ ಎಂದರೆ, ಕರ್ನಾಟಕದಲ್ಲಿ ಮುಸ್ಲಿಂಯೇತರ ಒಬ್ಬ ವ್ಯಕ್ತಿ ವಕ್ಫ್‌ನ ಮಂತ್ರಿಯಾಗಿದ್ದು ನನ್ನ ಕಾಲದಲ್ಲಿ. ನಾನು ಮಾನ್ಯ ಎಸ್.ಆರ್.ಬೊಮ್ಮಾಯಿರವರು ಮುಖ್ಯ ಮಂತ್ರಿಗಳಾಗಿದ್ದಾಗ ನಾನು ಸುಮಾರು ಎಂಟು ತಿಂಗಳ ನಮ್ಮ ಸರ್ಕಾರ ವಜಾ ಆಗುವವರೆವಿಗೆ ಕೂಡ ವಕ್ಫ್ ಮಂತ್ರಿಯಾಗಿದ್ದೆ. ನಜೀರ್ ಸಾಬ್‌ರವರು ಆ ಕಾಲದಲ್ಲಿ ಎಲ್ಲಾ ಹಾಸ್ಟಲ್‌ಗಳಿಗೆ ದುಡ್ಡು ಕೊಡತಕ್ಕಂಥದ್ದನ್ನು ಮಾಡಿದ್ದರು. ಶಾದಿ ಮಹಲ್‌ಗಳ ಪರಿಕಲ್ಪನೆ ಇವರು ಕೈ ಬಿಟ್ಟಿದ್ದರು. ಶಾದಿ ಮಹಲ್‌ಗಳಿಗೆ ಹಣ ಕೊಡತಕ್ಕಂಥದ್ದು ಕೂಡ ಇಲ್ಲಿ ಇದೆ. ಶಾದಿಮಹಲ್‌ಗೆ ಸಂಬಂಧಪಡತಕ್ಕಂಥದ್ದು ಇಲ್ಲಿ 22 ಕೋಟಿ ರೂಪಾಯಿಗಳಿಂದ 85 ಕೋಟಿ ರೂಪಾಯಿಗಳಿಗೆ ಏರಿಸಿರುವಂಥದುದ್ದ Rs.5.5 crores is allocated for the constructions of the shadimahal ತಾವು ದಯವಿಟ್ಟು ಆ ಬಜೆಟ್‌ನ್ನು ನೋಡಿ, ಇದನ್ನು ಹಿಂದೆ ಕೊಟ್ಟಿರಲಿಲ್ಲ, ಇವತ್ತೇನು ಯಡಿಯೂರಪ್ಪನವರ ಮೇಲೆ ಅಥವಾ ಅವರ ಪಕ್ಷದ ಮೇಲೆ ಅಲ್ಪಸಂಖ್ಯಾತರ ವಿರೋಧಿಗಳು ಎನ್ನುವ ಒಂದು ಅಪವಾದ ಇದೆ, ಅದರ ಜೊತೆಗೆ ನಾವು ಸೇರಿಕೊಂಡಿದ್ದೇವೆಂದಾಗ, ನಮ್ಮ ಪ್ರಭಾವ ಅವರ ಮೇಲೆ ಹೇಗೆ ಆಗಿದೆ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು..............

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ಪ್ರಭಾವ ಅವರ ಮೇಲೆ ಅದರೆ ಅಡ್ಡಿಯಿಲ್ಲ. ಅವರ ಪ್ರಭಾವ ನಿಮ್ಮ ಮೇಲೆ ಆದರೆ ಏನು ಮಾಡುವುದು?

ಶ್ರೀ ಅಂಜನಮೂರ್ತಿ : ಶಾದಿಮಹಲ್ ಮೊದಲಿನಿಂದಲೂ ಕೊಡುತ್ತಾರೆ. ಅದೇನು ಹೊಸದಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮೊದಲು ಕೊಟ್ಟಿಲ್ಲ ಸ್ವಾಮಿ, ತಾವು ಬೇಕಾದರೆ ಮಾನ್ಯ ರೋಷನ್ ಬೇಗ್‌ರವರನ್ನು ಕೇಳಿ. ಅಲೋಕೇಷನ್ ಏನಾಯಿತು, ಈಗ ಎಷ್ಟು ಆಗಿದೆ ಎಂದು ದಯವಿಟ್ಟು ಅವರನ್ನು ಕೇಳಿ. ಈಗ 5–5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ವಿ.ಸೊಮಣ್ಣ : ಏನು ಇವತ್ತು ಸವಲತ್ತುಗಳನ್ನು ವಿವಿಧ ಹಂತದಲ್ಲಿ ಅದು ಮೈನಾರಿಟಿಸ್ ಇರಬಹುದು, ಬೇರೆ ಬೇರೆ ದೇವಸ್ಥಾನಗಳಿಗೆ ಇರಬಹುದು ಏನು ಕೊಡುತ್ತಿದ್ದಾರೆ, ಇದು ಒಂದು ಭಾಗದಲ್ಲಿ ಪ್ರಶಂಸನೀಯವಾಗಿದ್ದರೂ ಕೂಡ ಏನು ಇವತ್ತು ಸಣ್ಣ ಪುಟ್ಟ ಮಠ ಮಾನ್ಯಗಳನ್ನು ಮಾಡಿಕೊಂಡು ಸಾವಿರಾರು ಬಡಮಕ್ಕಳಿಗೆ ಅನ್ನ ದಾಸೋಹ, ವಿದ್ಯಾದಾನವನ್ನು ಮಾಡುತ್ತಿರತಕ್ಕಂಥ ಕೆಲವು ಟ್ರಸ್ಟ್‌ಗಳಿಗೆ, ಕೆಲವು ವಿದ್ಯಾ ಸಂಸ್ಥೆಗಳಿಗೆ ಸರ್ಕಾರ ಯದ್ವಾತದ್ವಾ ಟ್ಯಾಕ್ಸ್‌ನ್ನು

ಹಾಕುತ್ತಿದೆ. ತಾವು ಹಿಂದೆ ಕಂದಾಯ ಸಚಿವರಾಗಿದ್ದಾಗ ನಾವು ಒಂದು ಮನವಿಯನ್ನು ಮಾಡಿಕೊಂಡಿದ್ದೆವು. ಯಾವುದೋ ಆ್ಯಕ್ಚುವಲ್ ಆಗಿ ಬಡಮಕ್ಕಳಿಗೆ, ಜಾತ್ಯಾತೀತ ಭಾವನೆಯಿಂದ ಇರತಕ್ಕಂಥೆ ಮಕ್ಕಳಿಗೆ ವಿದ್ಯಾದಾನ ಕೊಡತತಕ್ಕಂಥ ಕೆಲವು ದಾಸೋಹ ನಡೆಸತಕ್ಕಂಥ ಸಂಸ್ಥೆಗಳಿಗೆ ಟ್ಯಾಕ್ಸ್‌ನ್ನು ನಾವು ಹಿಂದೆ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ತೆಗೆದುಹಾಕಿದ್ದೆವು. ಅದನ್ನು ಮತ್ತೆ ಯಾವ ರೀತಿಯಲ್ಲಿ ಹಾಕಿದರೋ ಗೊತ್ತಿಲ್ಲ. ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡುವುದು ಏನು ಇವತ್ತು ಸಾಮಾನ್ಯ ಹಳ್ಳಿಗಾಡಿನ ಮಕ್ಕಳಿಗೆ ವಿದ್ಯಾದಾನವನ್ನು ಕೊಡುತ್ತಿರುವ ದಾಸೋಹ ನೀಡತಕ್ಕಂಥ ಸಂಸ್ಥೆಗಳು ಇವೆ, ಇಂಥವರಿಗೆ ನೀವು ಟ್ಯಾಕ್ಸ್‌ನ್ನು ರದ್ದುಪಡಿಸಬೇಕು, ಮತ್ತು ಅದನ್ನು ರದ್ದುಪಡಿಸುವಾಗ, ಬೇರೆ ಬೇರೆ ಸಂಸ್ಥೆಗಳು ಚಾಲಿಗ್ತೆ ಬಂದಿದ್ದರಿಂದ ಅಧನ್ನು ತೆಗೆದು ಹಾಕಿದರು. ತಾವು ಕಂದಾಯ ಸಚಿವರಾಗಿದ್ದಾಗ ಅದಕ್ಕೆ ಮನವಿ ಕೂಡ ಬಂತು, ಅದನ್ನು ತಾವು ಮುಂದಿನ ದಿನಗಳಲ್ಲಿ ನೋಡುವುದಾಗಿ ಹೇಳಿದ್ದಿರಿ ಆದರೆ ನಮಗೆ ಅದನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಆಗಲಿಲ್ಲ. ತಮ್ಮ ಮೂಲಕ ಸದನದ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರಿಗೆ ವಿನಂತಿ ಮಾಡುವುದು, ಆ್ಯಕ್ಚುವಲ್ ಯಾರು ಇರುತ್ತಾರೆ ಅಂಥವರಿಗೆ ತೆಗೆದು ಹಾಕುವುದು ಸೂಕ್ತವಾದುದು. ಮತ್ತು ತಾವು 5 ಲಕ್ಷ ರೂಪಾಯಿಗಳನ್ನು ಒಂದೊಂದು ಕ್ಷೇತ್ರಕ್ಕೆ ಕೊಡುತ್ತೇವೆಂದು ಹೇಳಿದಿರಿ, ನಮ್ಮಲ್ಲಿ 380 ಕ್ಕಿಂತಲೂ ಹೆಚ್ಚು ದೇವಸ್ಥಾನಗಳಿವೆ. ಆದುದರಿಂದ, ಇಂಥದ್ದನ್ನು ಕೊಡುವಾಗ ಎಲ್ಲಾ ಕ್ಷೇತ್ರಕ್ಕೂ ಒಂದೇ ರೀತಿ ಮಾಡಿದರೆ ತಾರತಮ್ಯವಾಗುವ ಸಾಧ್ಯತೆ ಇದೆ. ಏಕೆಂದರೆ, ನಾವು ಯಾರಿಗೆ ಕೊಡುವುದು? ಇದು ಕೂಡ ತಾವು ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ್ ರಾಯರೆಡ್ಡಿ : ಸರ್ಕಾರ ಅಂದರೆ ದೇವಸ್ಥಾನಗಳಿಗೆ ಹಣ ಕೊಡುವುದಾ?

ಶ್ರೀ ಎಂ.ಪಿ.ಪ್ರಕಾಶ್ : ಈ ವಿಚಾರದ ಬಗ್ಗೆ ತಾವು ಯೋಚನೆ ಮಾಡಬೇಕು. ದೇವಸ್ಥಾನಗಳು ಕೂಡ ಈ ದೇಶದ ಜನ ಜೀವನದಲ್ಲಿ ಹಾಸು ಹೊಕ್ಕಾಗಿವೆ.

ಶ್ರೀ ಕೆ.ಎಸ್.ಈಶ್ವರಪ್ಪ : ಹಿಂದೆ ನೀವು ಕೊಟ್ಟಿಲ್ಲವೆ?

ಶ್ರೀ ಬಸವರಾಜ್ ರಾಯರೆಡ್ಡಿ : ಕೊಡಲೇ ಬಾರದೆಂದು ಎಂದು ನಾನು ಹೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಅದು ತಮ್ಮ ಅಭಿಪ್ರಾಯ ಆಗಿರಬಹುದು.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಕೊಟ್ಟು ಇನ್ನೊಬ್ಬರಿಗೆ ಕೊಡಲೇ ಬಾರದು ಎಂದು ಬುದ್ಧಿವಾದ ಹೇಳಿದರೆ ಹೇಗೆ? ಸ್ವತಂತ್ರ ಬಂದಾಗಿನಿಂದ ಇವತ್ತಿನವರೆಗೆ ಕೊಟ್ಟುಕೊಂಡು ಬಂದಿದ್ದೀರಿ, " ನೀವು ಮಾತ್ರ ಕೊಡಬೇಡಿ, ನಾವು ಮಾಡುತ್ತಿದ್ದದು ಅದೇ ಬದುಕು, ನೀವು ಮಾತ್ರ ಹೀಗೆ ಮಾಡಬೇಡಿ" ಎಂದು ಯಾವ ಬಾಯಲ್ಲಿ ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್ : ಈಶ್ವರಪ್ಪನವರೆ, ಅದಕ್ಕಿಂತ ಮುಖ್ಯವಾಗಿ ಇರತಕ್ಕಂಥದ್ದು, ದೇವಾಲಯಗಳು ಧಾರ್ಮಿಕ ಆಚರಣೆಗಳು, ಇವೆಲ್ಲವೂ ನಂಬಿಕೆಗೆ ಸಂಬಂಧಪಟ್ಟಿರತಕ್ಕಂಥ ವಿಷಯಗಳು. ಒಂದು ಸರ್ಕಾರ ಅಂದಾಗ ಆ ಸರ್ಕಾರ ಇಡೀ ಪ್ರಜಾ ಕ್ಷೇಮವನ್ನು ಯೋಚನೆ ಮಾಡಬೇಕಾಗಿದೆ. ದೇವಾಲಯಗಳು ಅಥವಾ ನಿಮ್ಮ ನಂಬಿಕೆಗಳಿಗೆ ಸಂಬಂಧಪಟ್ಟಂತೆ. ದೇವಾಲಯಗಳನ್ನು ಸುಸ್ಥಿತಿಯಲ್ಲಿಡ ಬೇಕಾದ್ದು ಸರ್ಕಾರದ ಕರ್ತವ್ಯ. ಇವತ್ತು ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಇದೆ, ಕಮ್ಯುನಿಸ್ಟ್‌ರು ದೇವರಲ್ಲಿ ನಂಬಿಕೆ ಇಡತಕ್ಕಂಥವರಲ್ಲ. ಆದರೆ,

ಅಲ್ಲಿರುವಂಥ ಮುಜರಾಯಿ ಇಲಾಖೆ ಪ್ರಾಯಶಃ ಬಹಳ ಅನುಕರಣೀಯವಾಗಿರತಕ್ಕಂಥ ಮುಜರಾಯಿ ಇಲಾಖೆ. ಕೇರಳದಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಬಂದೇ ಬರುತ್ತವೆ. ಎಲ್‌ಡಿಎಫ್ ಕಾಲದಲ್ಲಿ ಅಲ್ಲಿ ಗುರುವಾಯೂರಿನ ಕೃಷ್ಣ ದೇವಲಾಯಗಳಿಗೆ ಅವರು ಕೊಟ್ಟಿರತಕ್ಕಂಥ ಹಣವನ್ನು ಬೇರೆ ಯಾರ ಕಾಲದಲ್ಲಿ ಕೊಡುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಪಶ್ಚಿಮ ಬಂಗಾಲದಲ್ಲಿ ಸರ್ಕಾರ ಈಗ ಎಷ್ಟು ಜಾತ್ಯಾತೀತವಾಗಿದೆ ಎಂದರೆ, ಸಚಿವಾಲಯದಲ್ಲಿ ಒಂದು ರೂಂನ್ನು ಮಸೀದಿ ಮಾಡಿ ಕೊಟ್ಟಿದ್ದಾರೆ ಅವರು ಯಾವುದನ್ನು ನಂಬುವುದಿಲ್ಲವೆಂದು ಹೇಳುತ್ತಾರೆ. ಆದರೆ ಇದು ಅನಿವಾರ್ಯ.

ಶ್ರೀ ಎಂ.ಪಿ.ಪ್ರಕಾಶ್ : ರೈಟರ್ಸ್ ಬಿಲ್ಡಿಂಗಿನ ಹಿಂಭಾಗದಲ್ಲಿ ಕೊಟ್ಟಿದ್ದಾರೆ. ಈ ನಂಬಿಕೆಗೆ ಸಂಬಂಧಪಟ್ಟ ವಿಷಯ ನಾವು ಪ್ರಸ್ತಾಪ ಮಾಡುವಾಗ, ಪಶ್ಚಿಮ ಬಂಗಾಳದಲ್ಲಿ ಆಗಿರಲಿ, ಅಥವಾ ಕೇರಳದಲ್ಲಿ ಅಗಿರಲಿ, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಹಣವನ್ನು ಕೊಡುತ್ತಿದ್ದೇವೆ. ನಾವು ದೇವರಲ್ಲಿ ನಂಬಿಕೆ ಇರತಕ್ಕಂಥವರು ಇರಬಹುದು. ಆದರೆ ತಾವು ಹೇಳಿದಂತೆ ಆದ್ಯತಾ ವಲಯವನ್ನು ನಾವು ಗುರುತಿಸಬೇಕು. ಆದ್ಯತಾ ವಲಯದಲ್ಲಿ ಮನುಷ್ಯನೇ ಮುಖ್ಯನಾಗಿರುತ್ತಾನೆ, ಕಲ್ಲುದೇವರು ಮುಖ್ಯವಾಗಿರುವುದಿಲ್ಲ. ಆದುದರಿಂದ, ಅಲ್ಲಿ ಕೊಟ್ಟಿರತಕ್ಕಂಥ ಹಣ, ಇಷ್ಟು ದೊಡ್ಡ ಪ್ರಮಾಣದಲ್ಲಿರತಕ್ಕಂಥ ಆಯವ್ಯಯದಲ್ಲಿ, ಕೊಟ್ಟಿರತಕ್ಕಂಥದ್ದು, ಹನ್ನೊಂದುವರೆ ಕೋಟಿ ರೂಪಾಯಿಗಳು ಮಾತ್ರ. 20 ಕೋಟಿ ರೂಪಾಯಿಗಳನ್ನು " ನಾನು ಈ ವರ್ಷದಲ್ಲಿ ಕೊಡುತ್ತೇನೆ" ಎಂದು ಮಾನ್ಯ ಸಿಂಧ್ಯಾರವರು, ಅದಕ್ಕೆ ಎಲ್ಲಾ ಕಾರ್ಯಕ್ರಮರೂಪಿಸಿದ್ದರು. ಅದಕ್ಕೆ ಹಣಕಾಸಿನ ಪ್ರಧಾನ ಕಾರ್ಯದರ್ಶಿಗಳನ್ನು ಕೂಡ ಒಪ್ಪಿಸಿದ್ದರು. ಅದರೆ ಸರ್ಕಾರ ಬಿದ್ದು ಹೋದ ಕಾರಣಕ್ಕಾಗಿಯೇ ಅ 20 ಕೋಟಿ ರೂಪಾಯಿ ಬರಲಿಲ್ಲ. ಆದರೆ ಮುಂದಿನ ಆಯವ್ಯಯದಲ್ಲಾದರೂ ಹೆಚ್ಚು ಹಣ ಕೊಡಬೇಕು. ಈಗ ಹನ್ನೊಂದುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು ಬಹಳ ಕಡಿಮೆಯಾಗಿರತಕ್ಕಂಥ ಹಣ ಈ ಕಾರಣಕ್ಕಾಗಿ ನಿಮಗೆ, ಮಾನ್ಯ ಮಾಧುಸ್ವಾಮಿಯವರು ಹಿಂದೆ ಒಂದು ಪ್ರಸ್ತಾಪ ಮಾಡಿದರು..

ಶ್ರೀ ಎಸ್.ಎಸ್. ಪಾಟೀಲ್ : ಈಗ ನಿಮ್ಮ ಪ್ರಭಾವ ಬೀರಿ ಈಗಲೂ ಮಾಡಿಸಿಬಿಡಿ.

ಉಪಾಧ್ಯಕ್ಷರು : ಪಾಟೀಲ್‌ರೆ ಬಿಡಿ, ಅವರು ಬೇಗ ಮುಗಿಸಲಿ..

ಶ್ರೀ ಎಂ.ಪಿ.ಪ್ರಕಾಶ್ : ಖಂಡಿತವಾಗಿಯೂ ಕೂಡ ನಾವು ಈ ವಿಚಾರದಲ್ಲಿ ಮಾಡೇ ತೀರುತ್ತೇವೆ. ನಾನು ಕನ್‌ಕ್ಲೂಡ್ ಮಾಡುತ್ತೇನೆ. ಅನೇಕ ವಿಷಯಗಳಿಗಾಗಿ ಈ ಒಂದು ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆಂದು ಹೇಳುತ್ತೇನೆ. ಈ ಒಂದು ಸಣ್ಣ ವಿಷಯದಲ್ಲಿ ನಾವು ಯೋಚನೆ ಮಾಡುತ್ತಿರತಕ್ಕಂಥದ್ದು ಸಾವಿರ ತ್ರಿಪದಿಗಳ ಸಿರಿಅಜ್ಜಿ ಎಂದು ಆಕೆಗೆ ಸನ್ಮಾನ ಮಾಡಿದೆವು. ನಿಮಗೆಗೊತ್ತಿದೆ, ನಿಮ್ಮ ಮೊಳಕಾಲ್ಮೂರುವಿನ ಸಿರಿಅಜ್ಜಿ ಬಹಳ ಬಡತನ ಕುಟುಂಬದಿಂದ ಬಂದಿರತಕ್ಕಂಥ ಹೆಣ್ಣು. ಆಕೆ ಒಂದು ಮಾತನ್ನು ಹೇಳುತ್ತಾಳೆ.

"ಸಣ್ಣ ಬತ್ತಿ ಮೇಳ್ಳೆ ಎಣ್ಣೆ
ನನ್ನ ಗುಡಿಸಲು ಜ್ಯೋತಿ
ಮೆಲ್ಲ ಮೆಲ್ಲನೆ ಉರಿಯೇ
ಪರಂಜ್ಯೋತಿ," ಎಂದು ಹೇಳುತ್ತಾಳೆ.

ಅಂದರೆ, ನಮ್ಮ ಮೇಳ್ಳೆ ಎಣ್ಣೆಯನ್ನು ಸಣ್ಣ ಗುಡಿಸಲಿನಲ್ಲಿಟ್ಟು, ಆ ದೀಪದ ಜ್ಯೋತಿಯಾಗಿರತಕ್ಕಂಥದ್ದು ಪರಂಜ್ಯೋತಿಯಾಗಬೇಕೆಂದು ಹೇಳುತ್ತಾಳೆ. ಭಾರತ ಸರ್ಕಾರದ ಅಯವ್ಯಯದ ಪರಿಕಲ್ಪನೆಯಲ್ಲಿ, ನಮ್ಮ ರಾಜ್ಯ ಸರ್ಕಾರಗಳು ಕೂಡ ಒಂದು ಪುರ ಸಭೆಗಳು, ನಗರ ಸಭೆಗಳಾಗಿ ಬೇರೆ ಬೇರೆ ಕಾರಣಗಳಿಗಾಗಿ ಪರಿವರ್ತನೆಗೊಳ್ಳುತ್ತಿವೆ, ಅವು ಆದರೆ ಸಂಪನ್ಮೂಲಗಳ ಕೊರತೆ ಇರತಕ್ಕಂಥದ್ದು ಕೂಡ ಇದೆ. ಇದರಲ್ಲಿ ಮಾನ್ಯ ಯಡಿಯೂರಪ್ಪನವರು ಯಾವ ಕಾರಣಕ್ಕಾಗಿ ಬಿಟ್ಟರೂ ಗೊತ್ತಿಲ್ಲ. ಬಾಗಲಕೋಟೆಯಲ್ಲಿ ನಾವು ಪ್ಯಾಕೇಜ್‌ಗಾಗಿ ಮಾಡಿದಂಥ 639 ಕೋಟಿ ರೂಪಾಯಿಗಳು. ಹಿಂದಿನ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಅಧ್ಯಕ್ಷರಾಗಿ ಹೋದಂಥ ಸಂದರ್ಭದಲ್ಲಿ 639 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಇಲ್ಲಿ ಸತ್ಯಾಗ್ರಹ ಮಾಡಿರತಕ್ಕಂಥದ್ದು ಕೂಡ ಇತ್ತು. ಆಗ 639 ಕೋಟಿ ರೂಪಾಯಿಗಳಲ್ಲಿ ಸುಮಾರು 320 ರಿಂದ 340 ಕೋಟಿ ರೂಪಾಯಿಗಳನ್ನು ಅಲ್ಲಿ ಮುಳುಗಿ ಹೋಗುವಂಥ ಗ್ರಾಮಗಳಿಗೆ ಹಣವನ್ನು ಕೊಡಬೇಕಾಗಿತ್ತು. 4(1) ನೋಟಿಫಿಕೇಶನ್ ಒಂದು ವರ್ಷದ ಮೇಲ್ಪಟ್ಟಾಗಿರುವುದರಿಂದ ಅದು ಇನ್‌ಶಿಯೇಟ್ ಆಗಿದೆ. ಅದನ್ನು ಈಗ ಆರು ಒಂದರ ನೋಟಿಫೀಕೇಶನ್ ಮಾಡಬೇಕಾಗಿರತಕ್ಕಂಥದ್ದು ಇದೆ. ಅದ್ದಕಾಗಿ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಅದು ಅವರೇ ಕೊಟ್ಟಿರತಕ್ಕಂಥ ಭರವಸೆ ಮಾತಾಗಿರುವುದರಿಂದ ಮಾನ್ಯ ಹಣಕಾಸಿನ ಸಚಿವರು ಹೆಚ್ಚಿನ ಹಣವನ್ನು ಅಥವಾ ಹಣವನ್ನು ತೆಗೆದಿಟ್ಟು ಬಾಗಲಕೋಟೆಯ ಪುನರ್ವಸತಿಗೆ ಸಂಬಂಧಪಟ್ಟಿರತಕ್ಕಂಥ ಕಾರ್ಯಕ್ರಮವನ್ನೂ ಅವರು ಮಾಡೇ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಅದೇ ರೀತಿಯಾಗಿ ಹಿಂದೆ ನಾವು 30 ಕೋಟಿ ರೂಪಾಯಿಗಳನ್ನು ಕೊಟ್ಟಿದೆವು. ಮತ್ತೆ ಗದಗ್ ಮತ್ತು ಬಿಜಾಪುರ ನಡುವೆ ಇರತಕ್ಕಂಥ ರೈಲ್ವೆ ಲೈನ್‌ಗೆ ಸಂಬಂಧಪಟ್ಟಂತೆ ನಮ್ಮ ಪಾಲಿನ ಹಣವನ್ನು ನಾವು ಕೊಟ್ಟಿಲ್ಲ. ನಮ್ಮ ಪಾಲಿನ ಹಣವನ್ನು ಕೊಟ್ಟಿಲ್ಲವೆಂಬ ಕಾರಣಕ್ಕಾಗಿ ಈ ರೈಲ್ವೆ ಇಲಾಖೆಯವರು ತ್ವರಿತಗತಿಯಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿಲ್ಲ. ಅದು ಹರಿಹರ ಕೊಟ್ಟೂರು ಮಾರ್ಗದ ರೈಲ್ವೆ ಲೈನ್ ಆಗಿರಬಹುದು ಅಥವಾ ಅವರು ಹೇಳಿದ ಹಾಗೆ ಮೆಹುಬೂಬ್ ನಗರದ ಮೂಲಕ ಅಗಿರತಕ್ಕಂಥದ್ದು ಆಗಬಹುದು ಮತ್ತೆ ಗುಲ್ಬರ್ಗ ಮತ್ತು ಬೀದರ್‌ಗೆ ಸಂಬಂಧಪಟ್ಟಂಥ ರೈಲ್ವೆ ಲೈನ್ ಆಗಿರಬಹುದು. ಅಥವಾ ಅಂಕೋಲಾಗೆ ಸಂಬಂಧಪಟ್ಟಿರತಕ್ಕಂಥ ರೈಲ್ವೆ ಲೈನ್ ಆಗಿರಬಹುದು. ಅವೆಲ್ಲಾವುಕ್ಕೂ ಕೂಡ ಕನಿಷ್ಟ ಪಕ್ಷ ನಮ್ಮ ಪಾಲಿನ ಹಣ ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಆಗಬೇಕು. ಅದನ್ನು ಈ ಆಯವ್ಯಯದಲ್ಲಿ ಮಾಡಿಕೊಡದೆ ಇರತಕ್ಕಂಥದ್ದು ಒಂದು ಕೊರತೆ. ಇದನ್ನು ಅಕ್ಷಮ್ಯ ಅಪರಾಧ ಎಂದು ನಾನು ಹೇಳುವುದಿಲ್ಲ. ಆದರೆ, ಆ ಕಡೆಗೆ ಅವರು ಏಕೆ ಗಮನ ಕೊಟ್ಟಿಲ್ಲ? ಏಕೆಂದರೆ ಇದಕ್ಕಾಗಿ ಅವರೇ ಸತ್ಯಾಗ್ರಹ ಮಾಡಿದ್ದರು. ಇಡೀ ರಾತ್ರಿ ಅಲ್ಲಿ ಮಲಗಿದ್ದರು. ಇಡೀ ರಾತ್ರಿ ಮಲಗಿದ್ದಂಥವರು ಬಾಗಲಕೋಟೆಗೆ ಹಣವನ್ನು ಕೊಡತಕ್ಕಂಥದನ್ನು ಅವರು ಮಾಡಿದ್ದರೆ ನಿಜವಾಗಿಯೂ ಕೂಡ ಒಳ್ಳೆಯದಾಗುತ್ತಿತ್ತು. ಇದರ ಜೊತೆಗೆ ನಾನು ಹೇಳುವುದೇನೆಂದರೆ ಅಥಣಿ ಭಾಗದಲ್ಲಿ ಮಲಬಾದಿ ಎನ್ನತಕ್ಕಂಥ ಊರಿನಲ್ಲಿ ವಿಮೋಚನಾ ಎಂಬ ಸಂಸ್ಥೆ ಹದಿಮೂರು ನೂರಕ್ಕಿಂತ ಹೆಚ್ಚು ದೇವದಾಸಿ ಮಕ್ಕಳಿಗೋಸ್ಕರ ವಸತಿ ಶಾಲೆಗಳನ್ನು ಮಾಡಿದ್ದಾರೆ. ಇದರ ಮೂಲಕ ಅವರು ದೊಡ್ಡ ಕೆಲಸವನ್ನು

ಮಾಡಿದ್ದಾರೆ. ನಾವು ಹಿಂದೆ ಪಂಚಾಕ್ಷರಿ ಗವಾಯಿಗಳ ಹೆಸರಿನಲ್ಲಿರುವ ಪುಟ್ಟರಾಜು ಗವಾಯಿಗಳ ಗದುಗಿನ ಅಂಧರ ಶಾಲೆಗೆ ಒಂದು ವಿಶೇಷ ಅನುದಾನವನ್ನು ವಿದ್ಯಾ ಇಲಾಖೆಯ ಮೂಲಕ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಅಥಣಿಯಲ್ಲಿ ದೇವದಾಸಿಯರ ಮಕ್ಕಳಿಗೋಸ್ಕರ ಈ ವಿಮೋಚನಾ ಸಂಸ್ಥೆ ನಡೆಸುತ್ತಿರುವ ವಸತಿ ಶಾಲೆಗೆ ಒಂದು " ವಿಶೇಷ ಪ್ರಕರಣ" ಎಂದು ಪರಿಗಣಿಸಿ ಅವರಿಗೆ ಅನುದಾನವನ್ನು ಕೊಡತಕ್ಕಂಥದ್ದು ಆಗಬೇಕು. ಈ ವಿಷಯವನ್ನು ಇಲ್ಲಿ ಯಾರು ಬರೆದುಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಯಾರು ಬರೆದುಕೊಳ್ಳತಕ್ಕಂಥದು ಇಲ್ಲ. ಮಾನ್ಯ ಯಡಿಯೂರಪ್ಪನವರು ಇದ್ದರೆ ಚೆನ್ನಾಗಿರುತ್ತಿತ್ತು. ಇಬ್ಬರು ಬಹಳ ಉತ್ತಮವಾದಂಥ ಅಧಿಕಾರಿಗಳು ಹಣಕಾಸಿನ ಇಲಾಖೆಯಲ್ಲಿರತಕ್ಕಂಥ ಕಾರಣ ಇರುವುದರಿಂದ ನಾನು ಸದನದ ಪರವಾಗಿ ಮತ್ತು ಜನತೆಯ ಪರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದೊಂದು ವಿಶೇಷ ಪ್ರಕರಣ ಕಾನೂನುಗಳು, ನಿಯಾಮಾವಳಿಗಳು ನಮಗಾಗಿ ಮಾಡಿಕೊಂಡಿರತಕ್ಕಂಥದಲ್ಲ. ಇಲ್ಲಿ ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಅಧಿಕಾರಿಗಳ ಹೆಸರನ್ನು ಹೇಳುವಂಥ ಸಂಪ್ರದಾಯ ಇಲ್ಲದೇ ಇದ್ದರೂ ಕೂಡ ಅವರ ಹೆಸರು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ನಮ್ಮ ಧಾರ್ಮಿಕದತ್ತಿ ಇಲಾಖೆಯಲ್ಲಿ ಮಾನ್ಯ ಮಂಜುನಾಥ್‌ರವರು ಆಯುಕ್ತರಾಗಿದ್ದರು. ಈ ವಿಮೋಚನಾ ಸಂಸ್ಥೆಯಲ್ಲಿರತಕ್ಕಂಥ ಮಕ್ಕಳಿಗೆ ಪ್ರತಿ ಸಲ ಭಿಕ್ಷೆ ಬೇಡಬೇಕಾಗುತ್ತದೆ. ಇವರಿಗೆ ಸಹಾಯ ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಅನುಕೂಲ ಇಲ್ಲವೆಂದಾಗ ಅವರು ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರೊ ಶ್ರೀಮಂತ ದೇವಾಲಯವಾಗಿರುವ ಕೊಲ್ಲೂರು ಮೂಕಾಂಬಿಕೆ ದೇವಾಲಯದ ಮೂಲಕ 151 ದಿವಸ ಈ ವಸತಿ ಶಾಲೆಯ ಮಕ್ಕಳಿಗೆ ಉಚಿತವಾದ ಊಟವನ್ನು ಕೊಡುವುದಕ್ಕೆ ಅವರು ಏರ್ಪಾಡು ಮಾಡಿದ್ದರು. ಆದ್ದರಿಂದ ಹಣಕಾಸಿನ ಇಲಾಖೆಯಲ್ಲಿ ತಾವಿಬ್ಬರು ಬಹಳ ಸಮರ್ಥರಾಗಿರತಕ್ಕಂಥ ಕಾರ್ಯದರ್ಶಿಗಳಾಗಿದ್ದೀರಿ. ನಾನು ಈಗಾಗಲೇ ಹೇಳಿರತಕ್ಕಂಥ ವಸತಿ ಶಾಲೆ ಬಹಳ ಉತ್ತಮವಾಗಿರತಕ್ಕಂಥ ಶಾಲೆಯಾಗಿದೆ. ಹಿಂದೆ ನಾವು ಮಾಡಿರತಕ್ಕಂಥ ಒಂದು ಮಾದರಿ ಇದೆ. ಗದುಗಿನಲ್ಲಿರತಕ್ಕಂಥ ಪಂಚಾಕ್ಷರಿ ಗವಾಯಿಗಳ ವೀರೇಶ್ವರ ಪುಣ್ಯ ಆಶ್ರಮ ಇದೆ. ಒಂದು ವಿಶೇಷ ಪ್ರಕರಣವೆಂದು ಇದಕ್ಕೆ ಅನುದಾನ ಕೊಡತಕ್ಕಂಥದ್ದನ್ನು ಮಾಡಲಾಗಿತ್ತು. ಆದ್ದರಿಂದ ಇಲ್ಲಿರತಕ್ಕಂಥ ಎಲ್ಲ ಮಕ್ಕಳು ದೇವದಾಸಿಯರ ಮಕ್ಕಳಾಗಿರುವುದರಿಂದ, ಅದನ್ನು ವಿಶೇಷ ಪ್ರಕರಣ ಎಂದು ತಾವು ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಮಾಡಿಕೊಳ್ಳುತ್ತಾ ಕೊನೆಯದಾಗಿ ಕುವೆಂಪುರವರ ಜನ್ಮಶತಾಬ್ದಿಗೆ ಸಂಬಂಧಪಟ್ಟಿರತಕ್ಕಂಥದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪ್ರಕಾಶ್‌ರವರೆ, ತಾವು ಮಾತನಾಡುವಾಗ ಶ್ರೀಮಂತದೇವರ ಬಗ್ಗೆ ಹೇಳಿದ್ದೀರಿ. ಅಂದರೆ ಮೂಕಾಂಬಿಕೆ ದೇವರು ಶ್ರೀಮಂತ ದೇವರು ಎಂದು ಹೇಳಿದ್ದೀರಿ. ಆದ್ದರಿಂದ, ನಮ್ಮ ರಾಜ್ಯದಲ್ಲಿ ಶ್ರೀಮಂತ ದೇವರುಗಳು ಎಷ್ಟಿವೆ ಎಂಬುದನ್ನು ತಿಳಿಸಬೇಕು ಮತ್ತು ಬಡದೇವರುಗಳು ಎಷ್ಟು? ಹಾಗೆಯೇ ಬೇರೆ ಯಾರ ಸಹಕಾರ ಇಲ್ಲದೆ ಇರತಕ್ಕಂಥ ದೇವರುಗಳು ಎಷ್ಟಿವೆ? ವರ್ಷ ಗಟ್ಟಲೆ ಪೂಜೆ ನಡೆಯದೆ ಇರತಕ್ಕಂಥ ದೇವಸ್ಥಾನಗಳು ಎಷ್ಟಿವೆ? ಮತ್ತೆ ಈ ರೀತಿಯಾದ ಮಸೀದಿಗಳು ಎಷ್ಟಿವೆ ಎನ್ನತಕ್ಕಂಥ ಮಾಹಿತಿ ತಮ್ಮ ಹತ್ತಿರ ಇದ್ದರೆ ಕೊಡಿ. ಶ್ರೀಮಂತ ದೇವರ ಬಗ್ಗೆ ತಾವು ಹೇಳಿದ್ದೀರಿ. ಆದ್ದರಿಂದ ಈ ದೇವರುಗಳಲ್ಲಿ ಶ್ರೀಮಂತ ಮತ್ತು ಬಡವ ದೇವರು ಎಂಬುದು ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಉತ್ತಮವಾದಂಥ ಮಾತನ್ನು ಹೇಳಿದ್ದಾರೆ. ಈಗಾಗಲೇ ಧಾರ್ಮಿಕದತ್ತಿ ಇಲಾಖೆಯಲ್ಲಿ ಎ.ಬಿ.ಸಿ ವರ್ಗಗಳೆಂದು ಮಾಡಲಾಗಿದೆ. ಒಂದು ಕೋಟಿ ರೂಪಾಯಿಗಿಂಥ ಹೆಚ್ಚು ಆದಾಯ ಇರತಕ್ಕಂಥವು 'ಎ' ವರ್ಗದ ಶ್ರೀಮಂತ ದೇವಾಲಯಗಳು. ಇದರಲ್ಲಿ ತಿರುಪತಿ ತಿಮ್ಮಪ್ಪನೆ ಎಲ್ಲರಿಗಿಂತ ದೊಡ್ಡ : ಶ್ರೀಮಂತ ದೇವರು. ಆದರೆ ಕರ್ನಾಟಕ ರಾಜ್ಯದಲ್ಲಿ ವಾರ್ಷಿಕ ಆದಾಯ 20 ಕೋಟಿ ರೂಪಾಯಿ ಇರತಕ್ಕಂಥದು ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದಲ್ಲಿ ಮಾತ್ರ. ಅದೇ ರೀತಿಯಾಗಿ ನಿಮ್ಮ ಕ್ಷೇತ್ರದಲ್ಲಿರತಕ್ಕಂಥ ಮಲ್ಲೆಮಾದೇಶ್ವರ ಕ್ಷೇತ್ರದಲ್ಲಿ ಆದಾಯ ಪ್ರಮಾಣದಲ್ಲಿ ಇಲ್ಲ. ಆದರೆ. ಇಲ್ಲಿ ಕನ್ನಡಿಗರು ಹೆಚ್ಚು ದುಡ್ಡು ಕೊಡುವುದಿಲ್ಲ. ಭಾವುಕರಾದಂಥ ತಮಿಳುನಾಡಿನವರು ಕೊಡುತ್ತಾರೆ. ಕೋಳಿ ಸಮೇತವಾಗಿ ಕೊಡತಕ್ಕಂಥದನ್ನು ತಾವು ಮಲ್ಲೆಮಾದೇಶ್ವರ ಕ್ಷೇತ್ರದಲ್ಲಿ ನೋಡಿದ್ದೀರಿ. ಆದ್ದರಿಂದ, ಮಲ್ಲೆಮಾದೇಶ್ವರ ಸವದತ್ತಿ ಎಲ್ಲಮ್ಮ, ಮೂಕಾಂಬಿಕೆ, ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಹೊರನಾಡು ಇವೆಲ್ಲವೂ ಕೂಡ ಶ್ರೀಮಂತ ದೇವಾಲಯಗಳು. 1 ಕೋಟಿಗಿಂತ ಅಂದರೆ 25 ಲಕ್ಷ, 10 ಲಕ್ಷ ರೂಪಾಯಿಗಿಂತ ಕಡಿಮೆ ಆದಾಯ ಇರತಕ್ಕಂಥದು, ಬಡದೇವಾಲಯಗಳು ಇದರಲ್ಲಿ ಹೆಣ್ಣು ದೇವಾಲಯಕ್ಕೆ ಹೆಚ್ಚಿನ ಆದಾಯ ಇಲ್ಲ. ಸವದತ್ತಿ ಎಲ್ಲಮ್ಮ ದೇವಸ್ಥಾನ ಒಂದನ್ನು ಬಿಟ್ಟರೆ ಇವೆಲ್ಲವನ್ನು ಬಡವರೇ ಮಾಡುತ್ತಿರುವುದರಿಂದ ಈ ದೇವಾಲಯಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಆದ್ದರಿಂದ ತಾವು ಹೇಳಿದಂತೆ " ಚಿನ್ನದ, ಬೆಳ್ಳಿಯ ತೇರು ಮಾಡುತ್ತೇವೆ" "ಅಲ್ಲಿ ಬಂದಂಥ ಯಾತ್ರಾರ್ಥಿಗಳಿಗೆ ಅನುಕೂಲಮಾಡಿಕೊಡುತ್ತೇವೆ" ಮತ್ತು " ಇಲ್ಲಿ ನೂರು ಕುಂಬಾಭಿಷೇಕ ಮಾಡುತ್ತೇವೆ" ಎನ್ನತಕ್ಕಂಥ ರೀತಿಯಲ್ಲಿ ಭಕ್ತರ ಮೂಲಕವಾಗಿ ಬಂದಂಥ ಹಣ ಪೋಲ್ ಆಗುತ್ತಿತ್ತು. ಅಂದರೆ ಆ ದೇವಾಲಯಗಳ ವೈಭವೀಕರಣಕ್ಕೆ ಖರ್ಚಾಗುತ್ತಿತ್ತು. ಚಿನ್ನದ ರತ್ನ ಖಚಿತವಾದ ಕಿರೀಟ ಇಡುತ್ತೇವೆಂದು ಹೇಳಿ ಖರ್ಚು ಮಾಡುತ್ತಾರೆ. ಆ ದೇವರು ರತ್ನವನ್ನು ನೋಡುವುದಿಲ್ಲ ಖಚಿತತೆಯನ್ನು ನೋಡುವುದಿಲ್ಲ. ದೇವರು ನೋಡತಕ್ಕಂತದು ಒಬ್ಬ ಬಡವನನ್ನು. ಮತ್ತೆ ದೇವರು ಪ್ರೀತಿ ಮಾಡತಕ್ಕಂಥದು ಒಬ್ಬ ಪಾಪಿಯನ್ನು. ಮತ್ತೆ ದೇವರು ಪ್ರೀತಿ ಮಾಡತಕ್ಕಂಥದು ಅಶಕ್ತರನ್ನು. ಈ ಕಾರಣಕ್ಕಾಗಿ ನಾವು ಒಂದು ಹೊಸ ಕಾನೂನು ಮಾಡಿ ಯಾವ ಶ್ರೀಮಂತ ದೇವಾಲಯ ಇರುತ್ತದೆ ಅದರ ಆದಾಯವನ್ನು ಶೈಕ್ಷಣ ಸಂಸ್ಥೆಗಳಿಗೆ ಕೊಡಿ ಮತ್ತು ಮಧ್ಯಾಹ್ನದ ಊಟಕ್ಕೆ ಇನ್ನು ಪೌಷ್ಟಿಕ ಆಹಾರವನ್ನು ಕೊಡತಕ್ಕಂಥ ಕಾರ್ಯಕ್ರಮಕ್ಕೆ ನಿಮ್ಮ ಹಣವನ್ನು ಕೊಡಿ ಎಂದು ಹೇಳಿದ್ದು, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಸುತ್ತೂರು ಸ್ವಾಮಿಗಳು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಮತ್ತೆ ನಮ್ಮಲ್ಲಿರತಕ್ಕಂಥ ಇಸ್ಕಾನ್ ಸಂಸ್ಥೆಯವರು ಸುಮಾರು 75 ಸಾವಿರದಿಂದ 1 ಲಕ್ಷ ಮಕ್ಕಳಿಗೆ, ಮಧ್ಯಾಹ್ನ ಊಟಕ್ಕಾಗಿ ತಲಾ 5 ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೆ, ನಮ್ಮ ಸರ್ಕಾರ ಅವರಿಗೆ ಕೇವಲ ಒಂದು ರೂಪಾಯಿ ಕೊಡುತ್ತಿದ್ದಾರೆ. ಈ ರೀತಿಯಾಗಿ ಅಂದರೆ ಒಳ್ಳೆಯ ಉಪಯೋಗಕ್ಕೆ ಹಣ ಖರ್ಚಾಗಬೇಕೆಂಬ ಮಾತನ್ನು ಹೇಳುತ್ತಾ ತಾವು ಏನು ಮುಕ್ತಾಯಗೊಳಿಸುವುದಕ್ಕಾಗಿ ಒಂದು ಅನುಕೂಲ ಮಾಡಿಕೊಟ್ಟಿದ್ದೀರಿ, ಅದು ಅಭಿನಂದನಾರ್ಹ ಕುವೆಂಪುರವರು ಜಲಗಾರ ಎನ್ನತಕ್ಕಂಥ ನಾಟಕವನ್ನು ಬರೆದಿದ್ದಾರೆ. ಜಲಗಾರ ಎಂದರೆ ತೋಟಿ. ನಾನು ಯಾವರೀತಿಯಲ್ಲಿ : ಜಲಗಾರ ಎಂದು ಹೇಳಿದ್ದಾರೆ. ಅಂದರೆ ಜಗದ ಜಲಗಾರ ನಾನೆಂದು ಶಿವ ಹೇಳುತ್ತಾನೆ. ಅಂದರೆ ನಾನು

ಶಿವನನ್ನು ನೋಡುವದಾಗಿದ್ದರೆ, ಜಗತ್ತಿನ ಹೊಲಸನ್ನು ತೊಳೆಯತಕ್ಕಂಥ ರೀತಿಯಲ್ಲಿ ಆತನನ್ನು ನೋಡುತ್ತೇನೆಂದು ಆತ ಹೇಳಿದ್ದಾನೆ. ಇದರ ಒಂದು ಕೊನೆಯ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಇದರಲ್ಲಿ ಶಿವನ ಪಾತ್ರವನ್ನು ಮಾಡಿದ್ದೆ ಎಂದು ಮಾನ್ಯ ವಾಟಾಳ್ ನಾಗರಾಜ್ ರವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಜಗದ ಜಲಗಾರ ನಾನೆಂದು ಶಿವ ಈ ರೀತಿಯಾಗಿ ಹೇಳುತ್ತಾನೆ.

"ಬೀದಿ ಗುಡಿಸುವ ಬಡವರ ಎದೆಯಲ್ಲಿ ನಾನಿರುವೆ
ಉಳುತ್ತಿರುವ ಒಕ್ಕಲಿಗನ ಎದೆಯಲ್ಲಿ ನಾನಿರುವೆ
ಎಲ್ಲಿ ಹೊಲಿಯನು ತನ್ನ ಕಾರ್ಯದಲ್ಲಿ ತೊಡಗಿಹನೋ
ಎಲ್ಲಿ ನಾನು ಅವನ ಪಕ್ಕದೊಳಗಿರುವೆ, ಕುಂಟರನು,
ಕುರುಡರನು, ದೀನರನು, ಅನಾಥರನ್ನು ಕೈಹಿಡಿದು
ಪೊರೆಯುದಲ್ಲಿ ನಾನಿರುವೆ ಎಂದು ಶಿವ ಹೇಳುತ್ತಾನೆ"

ಮಾನ್ಯ ಯಡಿಯೂರಪ್ಪನವರು ಬಜೆಟ್ ಆ ಮಟ್ಟಕ್ಕೆ ಹೋಗದಿದ್ದರೂ ಕೂಡ ಪರಿತ್ಯಕ್ತವಾದ ಲಿಫ್ಟ್ ಓವರ್ ಕಮ್ಯುನಿಟಿಗಳಿಗೆ ಅಂದರೆ ನಿಕೃಷ್ಟವಾಗಿರತಕ್ಕಂಥ ಜನಗಳಿಗೆ ಹಿಂದುಳಿದವಂಥವರಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಸಂಬಂಧಪಟ್ಟಂಥ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣಕಾಸನ್ನು ಒದಗಿಸುವುದರ ಮೂಲಕವಾಗಿ ಒಂದು ಲಿಂಗ ತಾರತಮ್ಯವನ್ನು ತೆಗೆದು ಹಾಕುವಂಥ ಒಳ್ಳೆಯ ಉತ್ತಮವಾದಂಥ ಬಜೆಟ್‌ನ್ನು ಕೊಟ್ಟಿದ್ದಾರೆ. ಕೆಲವು ನ್ಯೂನ್ಯತೆಗಳನ್ನು ಅವರು ಸರಿಪಡಿಸಿಕೊಂಡು, ಇದರ ಬಗ್ಗೆ ಅವರ ಮುಂದಿನ ಉತ್ತರದಲ್ಲಿ ಸ್ಪಷ್ಟೀಕರಣ ಕೊಡುವಾಗ ಸರಿಪಡಿಸಬಹುದೆಂಬ ಮಾತನ್ನು ತಮಗೆ ಹೇಳಿ ನಾನು ಅವರಿಗೆ ಅಭಿನಂದಿಸಿ ಮತ್ತು ಸ್ವಾಗತಮಾಡಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಹಾಗೆಯೇ ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

5. ಪ್ರಕಟಣೆ

ವಿಷಯ : ಸದನವನ್ನು 5ನೇ ಏಪ್ರಿಲ್ 2006 ರವರೆಗೆ ನಡೆಸುವ ಬಗ್ಗೆ.

ಉಪಾಧ್ಯಕ್ಷರು : ದಿನಾಂಕ 23:03:2006 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಕೆಳಕಂಡಂತೆ ನಿರ್ಣಯಿಸಲಾಗಿದೆ.

" ಸದನವನ್ನು ದಿನಾಂಕ 25ನೇ ಮಾರ್ಚ್ ಹಾಗೂ 3 ರಿಂದ 5ನೇ ಏಪ್ರಿಲ್ 2006ರವರೆಗೂ ನಡೆಸುವುದು. ಮೇಲಿನ ದಿನಗಳಲ್ಲಿ ವಿಧೇಯಕಗಳನ್ನು ಅರ್ಧಗಂಟೆ ಕಾಲಾವಧಿ ಚರ್ಚೆ ಮತ್ತು ಇನ್ನಿತರ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗುವುದು. ಆಯವ್ಯಯ ಅಂದಾಜುಗಳ ಮೇಲೆ ನಡೆದ ಚರ್ಚೆಗೆ ಈ ದಿನ ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಉತ್ತರ. ಇದಕ್ಕೆ ಸದನದ ಸಹಮತ ಇದೆ ಎಂದು ಭಾವಿಸುತ್ತೇನೆ."

ಉಪಾಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ತಾವು ಮಾತನಾಡಿ.